UNIVERSAL LIBRARY
OU_198168
UNIVERSAL LIBRARY

# ಜೀವರಸ

ಎಂ. ರಾಮರಾವ್, ಎಂ.ಎ., ಬಿ.ಟಿ.

ಸತ್ಯಶೋಧನ ಪ್ರಕಟನಮಂದಿರ
ಕೋಟೆ, ಬೆಂಗಳೂರು

CHECKED. 1951

ಪ್ರಥಮ ಮುದ್ರಣ: ೧೯೪೭

[ಎಲ್ಲ ಹಕ್ಕುಗಳೂ ಗ್ರಂಥಕರ್ತನವು]

CHECKED 1956

Checked 1965

Checked 1969

ಸಾಧಾರಣ ಪ್ರತಿ:
ಒಂದು ರೂಪಾಯಿ

ಕ್ಯಾಲಿಕೊ ಪ್ರತಿ:
ಎರಡು ರೂಪಾಯಿ

Checked 1969

ಮುದ್ರಣಕಾರರು:
ಬಿ. ಎಸ್. ನಾರಾಯಣರಾವ್
"ಓಂಕಾರ್ ಪ್ರೆಸ್", ಗಾಡನಪೇಟೆ, ಬೆಂಗಳೂರು ನಗರ

# ಅರಿಕೆ

ಗ್ರಿಮ್ ಸಹೋದರರ ಎಂಟು ಕಥೆಗಳನ್ನು ಈ ಪುಸ್ತಕದಲ್ಲಿ ಸಂಗ್ರಹಿಸಿದ್ದೇನೆ. ಕಿರಿಯರಿಗೆ ಮಾತ್ರವೇ ಅಲ್ಲದೆ ದೊಡ್ಡವರಿಗೂ ಇವುಗಳಲ್ಲಿ ಕೆಲವಾದರೂ ಮನೋಲ್ಲಾಸಕರವಾದಾವೆಂದು ಆಶಿಸುತ್ತೇನೆ.

ಹಿಂದಿನ ಅನುವಾದಗಳಲ್ಲಿ ಮಾಡಿದಂತೆಯೇ ಈ ಕಥೆಗಳಲ್ಲೂ ಸನ್ನಿವೇಶಗಳನ್ನೂ ಹೆಸರುಗಳನ್ನೂ ಅಲ್ಲಲ್ಲಿ ಬದಲಾಯಿಸಿದ್ದೇನೆ.

ಕರಡು ತಿದ್ದುವುದರಲ್ಲಿ ಸಹಾಯ ನೀಡಿದ ನನ್ನ ಭಾವಂದಿರು ಶ್ರೀ॥ ಎನ್. ಸುಬ್ಬರಾಯರಿಗೂ, ಪುಸ್ತಕವನ್ನು ಕೆಲವೇ ದಿನಗಳಲ್ಲಿ ಅಂದವಾಗಿ ಅಚ್ಚುಮಾಡಿಕೊಟ್ಟ ಓಂಕಾರ್ ಮುದ್ರಣಾಲಯದ ಶ್ರೀ ಬಿ. ಎಸ್. ನಾರಾಯಣರಾಯರಿಗೂ ನಾನು ಮತ್ತೊಮ್ಮೆ ಕೃತಜ್ಞನಾಗಿದ್ದೇನೆ.

ಗ್ರಿಮ್ ಸಹೋದರರ ಕತೆಗಳ ಇನ್ನೊಂದು ಸಂಪುಟವೂ ಇಷ್ಟರಲ್ಲೇ ವಾಚಕರ ಕೈಸೇರಲಿದೆಯೆಂದು ತಿಳಿಸಲು ಸಂತೋಷಿಸುತ್ತೇನೆ.

ಬೆಂಗಳೂರು ನಗರ
೮-೫-೧೯೪೭

ಎಂ. ರಾಮರಾವ್

# ವಿ ಷ ಯ ಸೂ ಚಿ ಕೆ


| | | | ಪುಟ |
|---|---|---|---|
| ೧ | ಜೀವರಸ | .... | ೧ |
| ೨ | ಮೂಗಿನ ಮರ | .... | ೧೪ |
| ೩ | ಎತ್ತಿಗೆ ನರಿ ಮಾಡಿದ ಸಹಾಯ | .... | ೨೬ |
| ೪ | ಒಕ್ಕಣ್ಣು, ಇಕ್ಕಣ್ಣು, ಮುಕ್ಕಣ್ಣು. | .... | ೨೯ |
| ೫ | ಆರು ಜನ ಸೇವಕರು | .... | ೪೨ |
| ೬ | ಬೆಸ್ತ ಮತ್ತು ಅವನ ಹೆಂಡತಿ | .... | ೫೬ |
| ೭ | ಮಂತ್ರಶಕ್ತಿಯುಳ್ಳ ಮೂಳಿಕೆಗಳು | .... | ೬೭ |
| ೮ | ಹೆಬ್ಬೆರಳು ತಿಮ್ಮ | .... | ೭೮ |

# ಜೀವರಸ

ಬಹಳ ಕಾಲದ ಹಿಂದೆ ದೂರದ ಒಂದು ದೇಶದಲ್ಲಿ ಒಬ್ಬ ರಾಜನಿದ್ದ. ಅವನಿಗೆ ಮೂವರು ಗಂಡುಮಕ್ಕಳಿದ್ದರು. ಒಂದು ಸಾರಿ ರಾಜ ಕಾಯಿಲೆ ಬಿದ್ದ. ಅವನು ಬದುಕುವ ಆಸೆಯನ್ನೇ ಎಲ್ಲರೂ ಬಿಟ್ಟರು. ಅವನ ಮಕ್ಕಳಿಗೆ ದುಃಖವನ್ನು ತಡೆಯಲು ಆಗಲಿಲ್ಲ.

ಒಂದು ದಿನ ಅವರು ವ್ಯಸನದಿಂದ ಚಿಂತಿಸುತ್ತ ಅರಮನೆಯ ತೋಟದಲ್ಲಿ ಓಡಾಡುತ್ತಿದ್ದರು. ಇದ್ದಕ್ಕಿದ್ದಂತೆಯೇ ಒಬ್ಬ ಮುದುಕ ಅವರ ಎದುರಿಗೆ ಕಾಣಿಸಿಕೊಂಡು "ಏಕೆ ಹೀಗಿದ್ದೀರಿ?" ಎಂದು ಕೇಳಿದ.

ಅವರು "ನಮ್ಮ ತಂದೆ ಕಾಯಿಲೆಯಿಂದ ಮಲಗಿಬಿಟ್ಟಿದ್ದಾನೆ; ಜೀವ ಉಳಿಯುವ ಹಾಗೇ ತೋರುವುದಿಲ್ಲ" ಎಂದು ಕಣ್ಣೊರಸಿ ಕೊಂಡರು.

ಅವನು "ಆತನ ಪ್ರಾಣ ಉಳಿಸುವ ಔಷಧ ನನಗೆ ಗೊತ್ತಿದೆ. ಅಲ್ಲೊಂದು ಕಡೆ "ಜೀವರಸ" ಎಂಬ ನೀರಿದೆ ಅದನ್ನು ಸ್ವಲ್ಪ ತರಿಸಿ ಕೊಟ್ಟರೆ ಆತ ಉಳಿದುಕೊಳ್ಳುವುದು ಖಂಡಿತ. ಆದರೆ ಅದನ್ನು ತರುವುದೇ ಬಹಳ ಕಷ್ಟವಾದ ಕೆಲಸ" ಎಂದ.

ರಾಜನ ಹಿರಿಯ ಮಗ "ನಾನು ಅದನ್ನು ಹುಡುಕಿ ತರುತ್ತೇನೆ"— ಎಂದು ರಾಜನ ಬಳಿಗೆ ಹೋಗಿ "'ಜೀವರಸ'ವನ್ನು ಹುಡುಕಿ ತರುತ್ತೇನೆ, ಹೋಗಿಬರಲು ಅಪ್ಪಣೆ ಕೊಡು" ಎಂದು ಕೇಳಿದ.

ರಾಜ "ಬೇಡ, ನಾನು ಸತ್ತರೂ ಚಿಂತೆಯಿಲ್ಲ, ನೀನು ಮಾತ್ರ ಅಂಥ ಅಪಾಯಕರವಾದ ಕೆಲಸಕ್ಕೆ ಹೋಗಬೇಡ" ಎಂದ.

ರಾಜಕುಮಾರ ಇಷ್ಟಕ್ಕೆ ಸುಮ್ಮನಾಗಲಿಲ್ಲ, ಪದೇ ಪದೇ ರಾಜನನ್ನು ಬೇಡುತ್ತಲೇ ಇದ್ದ. ತಾನು ಹೋಗಿ ಜೀವರಸವನ್ನು ತಂದರೆ ರಾಜ

ರಾಜ್ಯವನ್ನೆಲ್ಲಾ ತನಗೊಬ್ಬನಿಗೇ ಬಿಟ್ಟು ಹೋಗುವನು ಎಂದು ಅವನ ಆಲೋಚನೆ. ಕೊನೆಗೆ ರಾಜ ಅವನು ಹೋಗಿಬರಲು ಅನುಮತಿ ಕೊಟ್ಟ.

ಹಿರಿಯ ರಾಜಕುಮಾರ ಕುದುರೆಯ ಮೇಲೆ ಕುಳಿತು ಹೊರಟ. ದಾರಿಯಲ್ಲಿ ಒಂದು ಆಳವಾದ ಕಣಿವೆ ಸಿಕ್ಕಿತು. ಅದರ ಎರಡು ಕಡೆಯೂ ದೊಡ್ಡ ಬಂಡೆಗಳು ತಲೆಯ ಮೇಲೆ ಬೀಳುವ ಹಾಗೆಯೇ ಕಾಣುತ್ತಿದ್ದವು. ಒಂದು ಬಂಡೆಯ ಮೇಲೆ ಕೆಂಪು ಬಣ್ಣದ ಅಂಗಿಯನ್ನು ತೊಟ್ಟಿದ್ದ ಕುರೂಪಿಯಾದ ಒಬ್ಬ ಕುಳ್ಳ ನಿಂತಿದ್ದ. ಅವನ ತಲೆಯ ಮೇಲೆ ಕಲ್ಲುಸಕ್ಕರೆಯಿಂದ ಮಾಡಿದ್ದ ಉದ್ದವಾದ ಟೋಪಿಯಿತ್ತು.

ಕುಳ್ಳ ರಾಜಕುಮಾರನನ್ನು ಕೂಗಿ "ಇಷ್ಟು ವೇಗವಾಗಿ ಎಲ್ಲಿಗೆ ಹೋಗುತ್ತಿರುವೆ?" ಎಂದ.

ರಾಜಕುಮಾರ ಜಂಭದಿಂದ, "ಅದೆಲ್ಲಾ ನಿನಗೇಕೋ, ಕುಳ್ಳ ಮುಂಗಣ್ಣ?" ಎಂದು, ಸರಿಯಾಗಿ ಉತ್ತರ ಹೇಳದೆ ಕುದುರೆಯನ್ನು ಓಡಿಸಿದ.

ರಾಜಕುಮಾರನ ನಡತೆಯನ್ನು ನೋಡಿ ಕುಳ್ಳನಿಗೆ ಕೋಪ ಬಂತು. ಆದ್ದರಿಂದ ಅವನು ಒಂದು ಮಾಟ ಮಾಡಿದ. ಇದರ ಫಲವಾಗಿ ರಾಜ ಕುಮಾರ ಮುಂದಕ್ಕೆ ಹೋದಂತೆಲ್ಲಾ ಕಣಿವೆಯ ಅಗಲ ಕಡಿಮೆ ಯಾಗುತ್ತಾ ಬಂತು. ಕಡೆಗೆ ಅವನಿಗೆ ಒಂದು ಹೆಜ್ಜೆಯೂ ಮುಂದೆ ಕಾಲಿಡಲು ಆಗಲಿಲ್ಲ. ಕಣಿವೆ ಪೂರ್ತಿಯಾಗಿ ಮುಚ್ಚಿಕೊಂಡುಬಿಟ್ಟಿತು. ಅವನು ಹಿಂತಿರುಗಿ ಹೋಗೋಣವೆಂದು ನೋಡಿದರೆ ಆ ಕಡೆಯೂ ದಾರಿ ಕಟ್ಟಿತ್ತು. ಯಾರೋ ಗಟ್ಟಿಯಾಗಿ ನಗುತ್ತಿದ್ದುದು ಮಾತ್ರ ಕೇಳಿಸುತ್ತಿತ್ತು. ಹೀಗೆ ಅವನಿಗೆ ದಿಗ್ಬಂಧನವಾಯಿತು. ಅವನು ಕುದುರೆಯಿಂದ ಇಳಿದು ನಡೆದುಹೋಗಲು ಪ್ರಯತ್ನಿಸಿದ. ಮತ್ತೆ ನಗುವಿನ ಶಬ್ದ ಜೋರಾಯಿತು. ಕಾಲನ್ನು ಎತ್ತಿ ಇಡಲು ಕೂಡ ಅವನಿಗೆ ಆಗಲಿಲ್ಲ; ಇದ್ದ ಕಡೆಯೇ ಕಂಬದ ಹಾಗೆ ನಿಂತಿರಬೇಕಾಯಿತು.

ಇತ್ತ ರಾಜ ಹಿರಿಯ ಮಗ ಇಂದು ಬಂದಾನು, ನಾಳೆ ಬಂದಾನು, ಎಂಬ ನಿರೀಕ್ಷಣೆಯಲ್ಲಿ ಬದುಕಿಯೇ ಇದ್ದ. ಎಷ್ಟು ದಿನವಾದರೂ ಅವನು

ಬಾರದಿರಲು ಎರಡನೆಯ ರಾಜಕುಮಾರ "ಅಪ್ಪ, ನಾನು ಹೋಗಿ 'ಜೀವರಸ'ವನ್ನು ಹುಡುಕಿ ತರುತ್ತೇನೆ; ಅಪ್ಪಣೆ ಕೊಡು" ಎಂದ. "ನಮ್ಮ ಅಣ್ಣ ಇಷ್ಟು ಹೊತ್ತಿಗೆ ಸತ್ತುಹೋಗಿರಬೇಕು. ನಾನು ಜೀವರಸವನ್ನು ಪತ್ತೆಮಾಡಿಕೊಂಡು ಬಂದರೆ ರಾಜ್ಯ ನನಗೇ ದೊರೆಯುವುದರಲ್ಲಿ ಸಂಶಯವಿಲ್ಲ" ಎಂದು ಅವನು ತನಗೆ ತಾನೇ ಹೇಳಿಕೊಂಡ. ಇವನನ್ನೂ ಕಳುಹಿಸಲು ಮೊದಲು ರಾಜನಿಗೆ ಮನಸ್ಸಿರಲಿಲ್ಲ; ಕಡೆಗೆ ಒಪ್ಪಿದ.

ಎರಡನೆಯ ರಾಜಕುಮಾರ ಕುದುರೆಯ ಮೇಲೆ ಕುಳಿತು ಮೊದಲನೆಯವನು ಹೋಗಿದ್ದ ದಾರಿಯನ್ನೇ ಹಿಡಿದು ನಡೆದ. ಸ್ವಲ್ಪ ಹೊತ್ತಿನಲ್ಲಿ ಮೊದಲನೆಯವನು ಕಂಡಿದ್ದ ಕುಳ್ಳ ಇವನನ್ನು ಕೂಡ ಅದೇ ಕಣಿವೆಯಲ್ಲೇ ಕೂಗಿ ನಿಲ್ಲಿಸಿ, "ರಾಜಕುಮಾರ, ಇಷ್ಟು ಅವಸರದಿಂದ ಎಲ್ಲಿಗೆ ಹೊರಟಿರುವೆ?" ಎಂದ.

ರಾಜಕುಮಾರ "ಇನ್ನೊಬ್ಬರ ಸುದ್ದಿ ನಿನಗೇಕೆ? ನಿನ್ನ ಕೆಲಸ ನೀನು ನೋಡಿಕೊ" ಎಂದು ಹೇಳಿ ತಿರಸ್ಕಾರದಿಂದ ಮುಂದುವರಿದ.

ಕುಳ್ಳ ಅವನ ಮೇಲೆಯೂ ತನ್ನ ಮಾಟ ಬೀರಿದ. ಅವನೂ ಅಣ್ಣನ ಹಾಗೆಯೇ ಬಂಡೆಗಳ ನಡುವೆ ಚಲಿಸದೆ ನಿಂತುಕೊಳ್ಳಬೇಕಾಯಿತು.

ಎರಡನೆ ರಾಜಕುಮಾರ ಎಷ್ಟು ದಿನಗಳಾದರೂ ಹಿಂದಿರುಗದಿರಲು, ಮೂರನೆಯವನು ತಾನು ಹೋಗಿ 'ಜೀವರಸ'ವನ್ನು ಹುಡುಕಿ ತರುವುದಾಗಿ ಹೇಳಿ ಹೊರಟ. ಆದಷ್ಟು ಬೇಗ ಮರಳಿ ಬಂದು ತಂದೆಯನ್ನು ಬದುಕಿಸಬೇಕೆಂಬುದೊಂದೇ ಅವನ ಆಸೆ. ದಾರಿಯಲ್ಲಿ ಕಣಿವೆಯ ಪಕ್ಕದ ಬಂಡೆಯ ಮೇಲೆ ನಿಂತಿದ್ದ ಕುಳ್ಳ "ರಾಜಕುಮಾರ, ಇಷ್ಟು ವೇಗವಾಗಿ ಎಲ್ಲಿಗೆ ಹೋಗುತ್ತಿರುವೆ?" ಎಂದು ಅವನನ್ನು ಕೇಳಿದ.

ರಾಜಕುಮಾರ "'ಜೀವರಸ' ತರಲು ಹೋಗುತ್ತಿದ್ದೇನೆ. ನಮ್ಮ ತಂದೆಗೆ ಬಹಳ ಕಾಯಿಲೆಯಾಗಿದೆ. ಅವರು ಬದುಕುತ್ತಾರೋ ಇಲ್ಲವೋ ಎಂದು ನಮಗೆಲ್ಲಾ ಭಯವಾಗಿದೆ. ನೀನು ನನಗೆ ಸಹಾಯ ಮಾಡಬಲ್ಲೆಯಾ? ಸಾಧ್ಯವಾದರೆ ದಯವಿಟ್ಟು ಸಹಾಯ ಮಾಡು" ಎಂದ.

ಕುಳ್ಳ "'ಜೀವರಸ' ಎಲ್ಲಿ ದೊರೆಯುತ್ತದೆಯೆಂದು ನಿನಗೆ ಗೊತ್ತಿದೆಯೊ?" ಎಂದ.

ರಾಜಕುಮಾರ "ಇಲ್ಲ, ನಿನಗೆ ಗೊತ್ತಿದ್ದರೆ ದಯವಿಟ್ಟು ತಿಳಿಸು" ಎಂದ.

ಕುಳ್ಳ "ನೀನು ನನ್ನೊಡನೆ ದಯೆದಾಕ್ಷಿಣ್ಯ ಇಟ್ಟು ಮಾತಾಡಿರುವೆ. ಇದಲ್ಲದೆ ನನ್ನ ಸಹಾಯ ಕೋರಿರುವೆ. ಇತರರ ಸಲಹೆ ಕೇಳಲು ನೀನು ಹಿಂದೆಗೆದಿಲ್ಲ. ಆದ್ದರಿಂದ ನೀನು ಎಲ್ಲಿಗೆ ಹೋಗಬೇಕು, ಹೇಗೆ ಹೋಗಬೇಕು, ಏನು ಮಾಡಬೇಕು ಎಂಬುದನ್ನೆಲ್ಲಾ ನಾನು ನಿನಗೆ ತಿಳಿಸುತ್ತೇನೆ. ನಿನಗೆ ಬೇಕಾದ 'ಜೀವರಸ' ಒಂದು ಅರಮನೆಯ ಉದ್ಯಾನದ ಬಾವಿಯಲ್ಲಿದೆ. ಆ ಅರಮನೆ ಮಾಟಕ್ಕೆ ಒಳಗಾಗಿದೆ. ಆದರೂ ಚಿಂತೆಯಿಲ್ಲ. ನಾನು ನಿನಗೆ ಒಂದು ಕಬ್ಬಿಣದ ಕೋಲನ್ನೂ ಎರಡು ರೊಟ್ಟಿಗಳನ್ನೂ ಕೊಡುತ್ತೇನೆ. ಆ ಅರಮನೆಯ ಬಾಗಿಲನ್ನು ಕಬ್ಬಿಣದಿಂದ ಮಾಡಿದ್ದಾರೆ. ಅದು ಸದಾ ಮುಚ್ಚಿಕೊಂಡಿರುತ್ತದೆ. ನೀನು ನಾನು ಕೊಡುವ ಕೋಲಿನಿಂದ ಬಾಗಿಲಿನ ಮೇಲೆ ಮೂರು ಸಾರಿ ಹೊಡೆದರೆ ಅದು ತನ್ನಷ್ಟಕ್ಕೆ ತಾನೇ ತೆರೆದುಕೊಳ್ಳುತ್ತದೆ. ಒಳಗಡೆ ಎರಡು ಸಿಂಹಗಳು ಯಾರಾದರೂ ಬಂದಾರೆ ಎಂದು ಬಾಯಿಬಿಟ್ಟುಕೊಂಡು ಕಾದಿರುತ್ತವೆ. ಅವಕ್ಕೆ ನೀನು ಹೆದರಬೇಕಾದುದಿಲ್ಲ. ನಾನು ಕೊಡುವ ರೊಟ್ಟಿಗಳನ್ನು ಎರಡರ ಮುಂದೆಯೂ ಎಸೆದರೆ ಸಾಕು, ಅವು ನಿನ್ನ ತಂಟೆಗೆ ಬರುವುದಿಲ್ಲ. ಅನಂತರ ನೀನು ನೇರವಾಗಿ ಬಾವಿಗೆ ಹೋಗು. ಅದರಲ್ಲಿರುವ ನೀರೇ 'ಜೀವರಸ.' ನೀನು ಅದನ್ನು ಸ್ವಲ್ಪ ತೆಗೆದುಕೊಂಡು ತಕ್ಷಣ ಹಿಂದಿರುಗಿ ಬಂದು ಬಿಡಬೇಕು. ಹನ್ನೆರಡು ಗಂಟೆಗೆ ಸರಿಯಾಗಿ ಅರಮನೆಯ ಹೊರ ಬಾಗಿಲು ಮುಚ್ಚಿಕೊಂಡುಬಿಡುತ್ತದೆ. ಆಗ ನೀನೇನಾದರೂ ಒಳಗಿದ್ದರೆ ಆಮೇಲೆ ಎಂದೆಂದಿಗೂ ಹೊರಕ್ಕೆ ಬರುವುದಕ್ಕೆ ಆಗುವುದಿಲ್ಲ" ಎಂದ.

ರಾಜಕುಮಾರ ಕುಳ್ಳನನ್ನು ಬಹಳವಾಗಿ ವಂದಿಸಿ, ಅವನು ಕೊಟ್ಟ ಕೋಲನ್ನೂ ರೊಟ್ಟಿಯನ್ನೂ ತೆಗೆದುಕೊಂಡು ಮುಂದುವರಿದ. ಎಷ್ಟೋ ದಿವಸಗಳು ಬಹಳ ದೂರ ನೆಲದ ಮೇಲೂ ಕಡಲ ಮೇಲೂ ಅಲೆದನಂತರ

ಅವನಿಗೆ ಕುಳ್ಳ ವರ್ಣಿಸಿದ್ದ ಅರಮನೆ ಕಾಣಿಸಿತು. ಮುಂದೆ ಎಲ್ಲಾ ಕುಳ್ಳ ಹೇಳಿದ್ದಂತೆಯೆ ನಡೆಯಿತು. ಅವನು ಕೊಟ್ಟಿದ್ದ ಕಬ್ಬಿಣದ ಕೋಲಿನಿಂದ ಮೂರು ಸಾರಿ ಏಟು ಬಿದ್ದ ಕೂಡಲೆ ಅರಮನೆಯ ಬಾಗಿಲು ಹಾರತೆರೆಯಿತು. ರೊಟ್ಟಿ ತಮ್ಮ ಮುಂದೆ ಬೀಳಲು ಸಿಂಹಗಳು ಸುಮ್ಮ ನಾದವು. ರಾಜಕುಮಾರ ಒಂದು ದೊಡ್ಡ ಕೊಠಡಿಗೆ ಬಂದ. ಅಲ್ಲಿ ಅನೇಕ ಜನ ವೀರರು ಮೂರ್ಛೆ ಹೋದವರ ಹಾಗೆ ಕೂತಿದ್ದರು. ಅವನು ಅವರ ಉಂಗುರಗಳನ್ನೆಲ್ಲಾ ಎಳೆದು ತನ್ನ ಬೆರಳುಗಳಿಗಿಟ್ಟುಕೊಂಡ. ಇನ್ನೊಂದು ಕೋಣೆಯಲ್ಲಿ ಒಂದು ರೊಟ್ಟಿಯೂ ಒಂದು ಕತ್ತಿಯೂ ಇದ್ದವು. ಅವನು ಅವೆರಡನ್ನೂ ತೆಗೆದುಕೊಂಡ. ಮತ್ತೊಂದು ಕೋಣೆಯಲ್ಲಿ ಬಂಗಾರದ ಮಂಚದ ಮೇಲೆ ರೇಷ್ಮೆಯ ದಿಂಬಿಗೆ ಒರಗಿಕೊಂಡು ಒಬ್ಬ ಚೆಲುವೆ ಕುಳಿತಿದ್ದಳು. ಅವಳು ಅವನನ್ನು ಆದರದಿಂದ ಬರಮಾಡಿಕೊಂಡು "ನೀನು ನನ್ನನ್ನು ಬಂಧಿಸಿರುವ ಮಾಟದಿಂದ ಬಿಡುಗಡೆ ಮಾಡಿದರೆ ಈ ರಾಜ್ಯವೆಲ್ಲಾ ನಿನಗೇ ಸೇರುತ್ತದೆ. ಇನ್ನೊಂದು ವರ್ಷ ಬಿಟ್ಟುಬಂದು ನೀನು ನನ್ನನ್ನು ಮದುವೆಯಾಗಬೇಕು" ಎಂದು ಕೇಳಿಕೊಂಡು, 'ಜೀವರಸ'ವಿದ್ದ ಬಾವಿಗೆ ಹೋಗುವ ಮಾರ್ಗವನ್ನು ತಿಳಿಸಿದಳು. ಕುಳ್ಳ ಹೇಳಿದ್ದ ಹಾಗೆಯೇ ಅವಳೂ ಹನ್ನೆರಡು ಗಂಟೆ ಹೊಡೆಯುವುದರೊಳಗೆ ಅವನು ಆಚೆ ಇರಬೇಕೆಂದೂ ಇಲ್ಲದಿದ್ದರೆ ಹೊರಬಾಗಿಲು ಮುಚ್ಚಿಕೊಂಡು ಬಿಡುವುದೆಂದೂ ಎಚ್ಚರಕೊಟ್ಟಳು.

ರಾಜಕುಮಾರ ಅರಮನೆಯ ಉದ್ಯಾನದಲ್ಲಿ ನಡೆದು ಹೋದ. ನೋಡುವುದಕ್ಕೆ ಅಲ್ಲಿದ್ದುದೆಲ್ಲಾ ಬಹಳ ರಮ್ಯವಾಗಿತ್ತು. ಒಂದು ಕಡೆ ನೆರಳಿನಲ್ಲಿ ಒಂದು ಮೆತ್ತನೆಯ ಸುಖಾಸನವಿತ್ತು. ಅವನಿಗೂ ಆಯಾಸ ವಾಗಿತ್ತು. ಆದ್ದರಿಂದ ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳೋಣ ಎಂದು ಅದರ ಮೇಲೆ ತಲೆಯಿಟ್ಟು ಒರಗಿದ. ಹಾಗೆಯೇ ನಿದ್ದೆಹೋದ. ಯಾವಾಗ ನಿದ್ದೆಬಂದಿತೆಂದು ಅವನಿಗೇ ಗೊತ್ತಾಗಲಿಲ್ಲ. ಗಡಿಯಾರ ಹನ್ನೊಂದೂ ಮುಕ್ಕಾಲು ಗಂಟೆ ಹೊಡೆಯುವ ವರೆಗೂ ಅವನಿಗೆ ಎಚ್ಚರಿಕೆಯಾಗಲಿಲ್ಲ. ಆಗ ಅವನು ಗಾಬರಿಯಿಂದ ಧಿಗ್ಗನೆ ಎದ್ದು ಬಾವಿಗೆ ಓಡಿ ಒಂದು ತಂಬಿಗೆಯ ತುಂಬಾ ಅಲ್ಲಿದ್ದ ನೀರನ್ನು ತುಂಬಿಕೊಂಡು ಹೊರಬಾಗಿಲಿನ

ಕಡೆಗೆ ಒಂದೇ ಸಮನೆ ಓಡಿದ. ಅವನಿನ್ನೂ ಎರಡು ಕಾಲುಗಳನ್ನೂ ಪೂರ್ತಿ ಈಚೆಗೆ ತೆಗೆದಿಟ್ಟಿರಲಿಲ್ಲ, ಬಾಗಿಲು ರಪ್ಪನೆ ಮುಚ್ಚಿಕೊಂಡಿತು. ಅವನ ಎಡಗಾಲಿನ ಹಿಮ್ಮಡಿಯ ಒಂದು ಚೂರು ಬಾಗಿಲಿಗೂ ಹೊಸಲಿಗೂ ನಡುವೆ ಸಿಕ್ಕಿ ಕತ್ತರಿಸಿ ಹೋಯಿತು. 'ಜೀವರಸ'ದೊಡನೆ ತಾನು ಜೀವ ಸಹಿತ ಮಾಟದ ಮನೆಯಿಂದ ಹೊರಬಿದ್ದುದು ರಾಜಕುಮಾರನಿಗೆ ಬಹಳ ಸಂತೋಷವನ್ನುಂಟುಮಾಡಿತು. ಅದರ ಭರದಲ್ಲಿ ಹಿಮ್ಮಡಿ ಕಿತ್ತು ಹೋದುದರಿಂದ ಆದ ನೋವೇ ಅವನಿಗೆ ತೋರಲಿಲ್ಲ.

ಹಿಂದಿರುಗುವಾಗ ದಾರಿಯಲ್ಲಿ ಹಿಂದೆ ಕಂಡಿದ್ದ ಕುಳ್ಳ ಪುನಃ ಕಾಣಿಸಿಕೊಂಡ. ರಾಜಕುಮಾರ ಅವನಿಗೆ ತಾನು ತಂದಿದ್ದುದನ್ನೆಲ್ಲಾ ತೋರಿಸಿದ. ಕತ್ತಿಯನ್ನೂ ರೊಟ್ಟಿಯನ್ನೂ ನೋಡಿದಾಗ ಕುಳ್ಳ "ನೀನು ಇವನ್ನು ತಂದುದು ಬಹಳ ಒಳ್ಳೆಯದಾಯಿತು. ಈ ಕತ್ತಿಯಿಂದ ಒಂದೇ ಏಟಿಗೆ ಇಡಿ ಸೈನ್ಯಗಳನ್ನೇ ಸಾಯಿಸಿಬಿಡಬಹುದು; ಈ ರೊಟ್ಟಿ ಎಷ್ಟು ಖರ್ಚು ಮಾಡಿದರೂ ಕಡಿಮೆಯಾಗುವುದೇ ಇಲ್ಲ" ಎಂದ.

ಆಗ ರಾಜಕುಮಾರ "ನನ್ನ ಅಣ್ಣಂದಿರಿಬ್ಬರೂ ಇಲ್ಲದೆ ನಾನೊಬ್ಬನೇ ಹೋಗಿ ತಂದೆಗೆ ಮುಖ ತೋರಿಸುವುದು ಹೇಗೆ?" ಎಂದು ಯೋಚಿಸಿ, "ಸ್ನೇಹಿತನೆ, ನನಗಿಂತಲೂ ಮೊದಲು 'ಜೀವರಸ'ವನ್ನು ಹುಡುಕಿ ತರಲು ಹೊರಟ ನನ್ನ ಅಣ್ಣಂದಿರಿಬ್ಬರೂ ಏನಾದರು? ನಿನಗೆ ಹೇಳುವುದಕ್ಕಾದರೆ ದಯವಿಟ್ಟು ತಿಳಿಸು. ಅವರು ಹೋದವರು ಹಿಂದಿರುಗಿ ಬರಲೇ ಇಲ್ಲ" ಎಂದು ಕೇಳಿದ.

ಕುಳ್ಳ "ನಾನು ಅವರಿಬ್ಬರನ್ನೂ ಎರಡು ಬೆಟ್ಟಗಳ ನಡುವೆ ಬಂಧಿಸಿಟ್ಟಿದ್ದೇನೆ. ಅವರ ದುರಹಂಕಾರಕ್ಕೂ ದುರ್ನಡತೆಗೂ ಪ್ರತಿಫಲವಾಗಿ ನಾನು ಕೊಟ್ಟಿರುವ ಶಿಕ್ಷೆ ಅದು" ಎಂದ.

ರಾಜಕುಮಾರ ಅವರನ್ನು ಮನ್ನಿಸಿ ಬಿಡುಗಡೆ ಮಾಡಬೇಕೆಂದು ಮತ್ತೆ ಮತ್ತೆ ಬೇಡಿಕೊಂಡ. ಆದುದರಿಂದ ಕುಳ್ಳ ಮನಸ್ಸಿಲ್ಲದಿದ್ದರೂ ಅವರನ್ನು ಬಿಟ್ಟು "ಎಚ್ಚರಿಕೆಯಿಂದಿರು, ಅವರು ಬಹಳ ಕೆಟ್ಟವರು" ಎಂದ. ಆದರೆ ಮೂರನೆಯ ರಾಜಕುಮಾರನಿಗೆ ಅಣ್ಣಂದಿರಿಬ್ಬರನ್ನೂ

ನೋಡಿ ಬಹು ಆನಂದವಾಯಿತು. ಅವನು ಕುಳ್ಳನ ಬುದ್ಧಿವಾದವನ್ನು ಮರೆತು ನಡೆದಿದ್ದುದನ್ನೆಲ್ಲಾ ಅವರಿಗೆ ತಿಳಿಸಿದ. ತನಗೆ 'ಜೀವರಸ' ದೊರೆತದ್ದು, ತಾನು ಒಂದು ತಂಬಿಗೆಯ ತುಂಬಾ ಅದನ್ನು ತೆಗೆದು ಕೊಂಡು ಬಂದದ್ದು, ಒಬ್ಬ ರಾಜಕುಮಾರಿಯನ್ನು ಮಾಟದಿಂದ ಬಿಡಿಸಿದ್ದು, ಅವಳು ಒಂದು ವರ್ಷ ಪೂರೈಸುವವರೆಗೂ ಕಾದಿದ್ದು ಅನಂತರ ತನ್ನನ್ನು ಮದುವೆಯಾಗಿ ರಾಜ್ಯವನ್ನು ತನಗೆ ಕೊಡುವುದಾಗಿ ಹೇಳಿದ್ದು ಇದೆಲ್ಲವನ್ನೂ ವಿವರಿಸಿದ.

ಅನಂತರ ಮೂವರೂ ಕುದುರೆಗಳ ಮೇಲೆ ಕುಳಿತು ಮುಂದುವರಿದರು. ದಾರಿಯಲ್ಲಿ ಯುದ್ಧದಿಂದಲೂ ಕ್ಷಾಮದಿಂದಲೂ ಬಹಳ ಕಷ್ಟಕ್ಕೆ ಈಡಾಗಿದ್ದ ಒಂದು ರಾಜ್ಯವಿತ್ತು. ಅಲ್ಲಿ ಒಂದಲ್ಲದಿದ್ದರೆ ಇನ್ನೊಂದು ಕಾರಣದಿಂದ ಜನಗಳಿಗೆಲ್ಲಾ ಸಾಯುವ ಸ್ಥಿತಿ ಬಂದಿತ್ತು. ಮೂರನೆಯ ರಾಜಕುಮಾರ ಆ ರಾಜ್ಯದ ಅರಸನಿಗೆ ತಾನು ತಂದಿದ್ದ ರೊಟ್ಟಿಯನ್ನು ಕೊಟ್ಟ. ಅದನ್ನು ಎಲ್ಲರೂ ಬೇಕುಬೇಕಾದಷ್ಟು ತಿಂದರು. ಹಾಗೆಯೇ ಅವನು ತಾನು ತಂದಿದ್ದ ಕತ್ತಿಯನ್ನು ರಾಜನಿಗೆ ಕೊಟ್ಟ. ಅದರ ಪ್ರಭಾವದಿಂದ ಶತ್ರುಗಳು ಒಂದು ಪಿಳ್ಳೆಯೂ ಉಳಿಯದಂತೆ ನಾಶವಾದರು. ರಾಜ್ಯದಲ್ಲಿ ಮತ್ತೆ ಸುಖಶಾಂತಿಗಳು ನೆಲಸಿದವು. ಇದೇ ರೀತಿ ಮೂರನೆಯ ರಾಜಕುಮಾರ ದಾರಿಯಲ್ಲಿ ಸಿಕ್ಕಿದ ಇನ್ನೆರಡು ದೇಶಗಳಿಗೂ ಉಪಕಾರ ಮಾಡಿ ಅಲ್ಲಿನ ಅರಸರೊಡನೆಯೂ ಗೆಳೆತನ ಗಳಿಸಿದ.

ಕಡೆಗೆ ಅವರು ಕಡಲಿನ ತೀರಕ್ಕೆ ಬಂದು ಹಡಗು ಹತ್ತಿದರು. ಹಡಗು ನೀರಿನ ಮೇಲೆ ಹೋಗುತ್ತಿದ್ದಾಗ ದೊಡ್ಡವರಿಬ್ಬರೂ "ನಮ್ಮ ತಮ್ಮ ಜೀವರಸವನ್ನು ತಂದಿದ್ದಾನೆ. ಆದ್ದರಿಂದ ನಮ್ಮ ತಂದೆ ರಾಜ್ಯವನ್ನೆಲ್ಲಾ ಅವನಿಗೇ ಬಿಟ್ಟು ಹೋಗುವುದು ಖಂಡಿತ. ನ್ಯಾಯವಾಗಿ ರಾಜ್ಯ ನಮಗೆ ಬರಬೇಕು" ಎಂದು ಯೋಚಿಸಿ, ಇಬ್ಬರೂ ಸೇರಿ ತಮ್ಮನಿಗೆ ಮೋಸ ಮಾಡಲು ನಿರ್ಧರಿಸಿದರು. ಅದೇ ಪ್ರಕಾರ ಆ ದಿನ ರಾತ್ರಿ ಅವನು ನಿದ್ದೆ ಹೋಗುತ್ತಿದ್ದಾಗ ಅವರು ಅವನು ತಂದಿದ್ದ 'ಜೀವರಸ'ವನ್ನು ಅವನಿಗೆ ಸ್ವಲ್ಪವೂ ಸುಳಿವು ಗೊತ್ತಾಗದ ಹಾಗೆ ತೊಟ್ಟು ಕೂಡ ಬಿಡದಂತೆ

ಬೇರೊಂದು ಪಾತ್ರೆಗೆ ಬಗ್ಗಿಸಿಕೊಂಡು ಅದು ಇದ್ದ ತಂಬಿಗೆಯ ತುಂಬಾ ಸಮುದ್ರದ ಉಪ್ಪುನೀರನ್ನು ತುಂಬಿಟ್ಟರು.

ಕ್ರಮೇಣ ಅವರ ಪ್ರಯಾಣ ಮುಗಿಯಿತು. ಎಲ್ಲರೂ ತಂದೆಯ ಅರಮನೆಗೆ ಹಿಂದಿರುಗಿದರು. ಕೂಡಲೆ ಮೂರನೆಯ ರಾಜಕುಮಾರ ತಾನು ತಂದಿದ್ದ ಬಟ್ಟಲನ್ನು ರಾಜನಿಗೆ ಒಯ್ದುಕೊಟ್ಟ. ಅದರಲ್ಲಿದ್ದ ಸಮುದ್ರದ ನೀರು ಗಂಟಲಿಗೆ ಹೋಗುತ್ತಿದ್ದಂತೆಯೇ ರಾಜನ ರೋಗ ಹೆಚ್ಚಾಯಿತು. ಆಗ ದೊಡ್ಡವರಿಬ್ಬರೂ ಬಂದು ತಮ್ಮನನ್ನು ಚೆನ್ನಾಗಿ ಬೈದರು. ವಿಷವನ್ನು ಕುಡಿಸಿ ತಮ್ಮ ತಂದೆಯನ್ನು ಕೊಲ್ಲಲು ಯತ್ನಿಸುತ್ತಿದ್ದನೆಂದು ಅವನ ಮೇಲೆ ಅಪರಾಧ ಹೊರಿಸಿದರು. 'ಜೀವರಸ'ವನ್ನು ತಾವು ತಂದಿರುವುದಾಗಿ ಹೇಳಿ ಅದನ್ನು ರಾಜನಿಗೆ ಕೊಟ್ಟರು. ಅದನ್ನು ಕುಡಿಯುತ್ತಿದ್ದಹಾಗೆಯೇ ರಾಜನ ಕಾಯಿಲೆಯೆಲ್ಲಾ ಮಾಯವಾಯಿತು. ಅವನು ಮತ್ತೆ ಯುವಕನ ಹಾಗೆ ಶಕ್ತಿವಂತನಾದ.

ಆಗ ಅವರಿಬ್ಬರೂ ತಮ್ಮನ ಹತ್ತಿರಕ್ಕೆ ಹೋಗಿ ನಕ್ಕು ಅವನನ್ನು ಹೀಯಾಳಿಸಿ ಹಂಗಿಸಿದರು. "'ಜೀವರಸ'ವನ್ನು ಹುಡುಕಿ ತಂದವನು ನೀನೆ? ಅಷ್ಟೊಂದು ಬುದ್ಧಿ ಇದ್ದವನು ನಿದ್ದೆ ತಡೆದುಕೊಳ್ಳಲು ಆಗಲಿಲ್ಲವೆ? ಕಷ್ಟ ಪಟ್ಟವನು ನೀನು, ಫಲ ಉಣ್ಣುವವರು ನಾವು! ನೀನು ಜೋಪಾನವಾಗಿ ನೋಡಿಕೊಳ್ಳದಿದ್ದರೆ ಮುಂದಿನ ವರುಷ ನಿನ್ನ ರಾಜಕುಮಾರಿಯೂ ನಮ್ಮ ವಶಳಾಗುತ್ತಾಳೆ. ಈ ವಿಷಯವಾಗಿ ನೀನು ಅಪ್ಪನ ಎದುರಿಗೆ ಬಾಯಿಬಿಟ್ಟರೆ ನಿನ್ನ ಜೀವ ಉಳಿಯುವುದಿಲ್ಲ. ಇಷ್ಟಕ್ಕೂ ನೀನು ಹೇಳಿದರೂ ಅವನಿಗೆ ನಿನ್ನ ಮಾತಿನಲ್ಲಿ ಇನ್ನೆಲ್ಲಿ ನಂಬಿಕೆ ಇದ್ದೀತು? ಸುಮ್ಮನಿದ್ದರೆ ನಾವು ನಿನ್ನ ಗೋಜಿಗೆ ಬರುವುದಿಲ್ಲ" ಎಂದು ಹೆದರಿಸಿದರು.

ರಾಜನಿಗೆ ಕಿರಿಯ ಮಗನ ಮೇಲೆ ಮಿತಿಮೀರಿ ಸಿಟ್ಟೇರಿತು. ಅವನು ನಿಜವಾಗಿಯೂ ತನಗೆ ವಿಷ ಕೊಡಲು ಪ್ರಯತ್ನಿಸಿದ್ದನೆಂದು ಮುದುಕ ಭಾವಿಸಿದ. ತುಂಬಿದ ಆಸ್ಥಾನದಲ್ಲಿ ರಾಜಕುಮಾರನ ವಿಚಾರವನ್ನು ಚರ್ಚಿಸಿದ. ಎಲ್ಲರೂ ಅವನಿಗೆ ಮರಣದಂಡನೆಯೇ ಸರಿಯಾದ

ಶಿಕ್ಷೆ ಯೆಂದು ಸಲಹೆ ಕೊಟ್ಟರು. ಇದೊಂದೂ ಪಾಪ ಅವನಿಗೆ ತಿಳಿದೇ ಇರಲಿಲ್ಲ.

ಒಂದು ದಿನ ಅವನು ರಾಜನ ಬೇಟೆಗಾರರ ನಾಯಕನೊಡನೆ ಕಾಡಿನಲ್ಲಿ ಬೇಟೆಯಾಡುತ್ತಿದ್ದ. ಬೇಟೆಗಾರ ಏನೋ ಚಿಂತಿಸುತ್ತಿರುವಂತೆ ಖಿನ್ನನಾಗಿದ್ದ.

ರಾಜಕುಮಾರ "ಏಕೆ ಹೀಗಿದ್ದೀಯ? ಏನು ಯೋಚನೆ?" ಎಂದ.

ಬೇಟೆಗಾರ "ನಿನಗೆ ಅದನ್ನು ಹೇಳಲಾರೆ, ಹೇಳುವುದಕ್ಕೆ ಧೈರ್ಯವೇ ಇಲ್ಲ ನನಗೆ" ಎಂದ.

ರಾಜಕುಮಾರ "ಹೇಳು, ಏನೇ ಆಗಲಿ ಮರೆಮಾಚದೆ ಹೇಳು. ನಾನು ಖಂಡಿತ ಕೋಪಿಸಿಕೊಳ್ಳುವುದಿಲ್ಲ; ಏನಿದ್ದರೂ ಕ್ಷಮಿಸುತ್ತೇನೆ" ಎಂದು ಒತ್ತಾಯ ಪಡಿಸಿದ.

ಬೇಟೆಗಾರ "ಅಯ್ಯೋ, ಹೇಗೆ ಬಾಯಿಬಿಟ್ಟು ಹೇಳಲಿ? ನಾನು ನಿನ್ನನ್ನು ಕೊಲ್ಲಬೇಕೆಂದು ರಾಜರ ಅಪ್ಪಣೆಯಾಗಿದೆ" ಎಂದ.

ರಾಜಕುಮಾರ ಇದನ್ನು ಕೇಳಿ ಬೆಚ್ಚಿ ಬಿದ್ದು "ಬೇಡ, ನನ್ನನ್ನು ಕೊಲ್ಲಬೇಡ. ನನ್ನ ಉಡುಪನ್ನು ನಿನಗೆ ಕೊಡುತ್ತೇನೆ, ನಿನ್ನ ಉಡುಪನ್ನು ನನಗೆ ಕೊಡು. ನಾನು ಇನ್ನು ನಮ್ಮ ತಂದೆಯ ರಾಜ್ಯದಲ್ಲಿ ಮುಖ ತೋರಿಸುವುದಿಲ್ಲವೆಂದು ಪ್ರಮಾಣಮಾಡುತ್ತೇನೆ. ನೀನು ನನ್ನನ್ನು ಕೊಂದುದಕ್ಕೆ ಗುರುತಾಗಿ ಇದೋ ಈ ಸರಿಗೆಯ ನಿಲುವಂಗಿಯನ್ನು ರಾಜರಿಗೆ ತೋರಿಸಿಬಿಡು. ನಿನ್ನ ಅಂಗಿ ನನಗಿರಲಿ" ಎಂದು ಬೇಡಿದ.

ಬೇಟೆಗಾರ "ನೀನು ನನ್ನನ್ನು ಇಷ್ಟು ಕೇಳಿಕೊಳ್ಳಬೇಕೆ? ಅಗತ್ಯ ವಾಗಿ ನೀನು ಹೇಳಿದಂತೆ ನಡೆಯುತ್ತೇನೆ. ನಿನ್ನ ಮೇಲೆ ಕೈಮಾಡುವುದಕ್ಕೆ ನನ್ನಿಂದ ಎಂದಿಗೂ ಸಾಧ್ಯವಾಗುತ್ತಿರಲಿಲ್ಲ" ಎಂದು, ತನ್ನ ಉಡುಪನ್ನು ರಾಜಕುಮಾರನಿಗೆ ಕೊಟ್ಟು, ಅವನ ಉಡುಗೆಯನ್ನು ತಾನು ತೆಗೆದು ಕೊಂಡು, ಒಬ್ಬನೇ ಹಿಂದಿರುಗಿದ. ಎಲ್ಲರೂ ಮೂರನೆಯ ರಾಜಕುಮಾರ ಸತ್ತುಹೋದನೆಂದೇ ನಂಬಿದರು.

ಕೆಲವು ದಿನಗಳ ನಂತರ ಮೂರು ಬೇರೆಬೇರೆಯ ದೇಶಗಳಿಂದ ಮೂವರು ರಾಯಭಾರಿಗಳು ಬಂದರು. ಅವರೆಲ್ಲರೂ ಕಿರಿಯ ರಾಜ ಕುಮಾರನಿಗೆ ಒಪ್ಪಿಸುವುದಕ್ಕೆಂದು ಚಿನ್ನಬೆಳ್ಳಿಗಳ ಗಟ್ಟಿಗಳನ್ನೂ ಮುತ್ತು ರತ್ನಗಳನ್ನೂ ಬೆಲೆಬಾಳುವ ಬಟ್ಟೆಬರೆಗಳನ್ನೂ ಅನೇಕ ಗಾಡಿಗಳಲ್ಲಿ ಹೇರಿಸಿಕೊಂಡು ತಂದಿದ್ದರು. ಇವರು ಹಿಂದೆ ರಾಜಕುಮಾರ ತನ್ನ ಕತ್ತಿಯನ್ನೂ ರೊಟ್ಟಿಯನ್ನೂ ಕೊಟ್ಟು ಸಹಾಯ ಮಾಡಿದ್ದ ರಾಜರ ಪ್ರತಿನಿಧಿಗಳು.

ಇವರನ್ನೂ ಇವರು ತಂದಿದ್ದ ಅಮೂಲ್ಯವಾದ ವಸ್ತುಗಳನ್ನೂ ನೋಡಿ ರಾಜನಿಗೆ ಬಹಳ ಸಂಕಟವಾಯಿತು. ಅವನು "ಪಾಪ! ಹುಡುಗ ನಿರಪರಾಧಿಯೋ ಏನೊ! ಅಯ್ಯೋ, ಅವನನ್ನು ನಾನೇ ಕೊಲ್ಲಿಸಿದೆನಲ್ಲ!" ಎಂದು ತನ್ನ ಆಸ್ಥಾನಿಕರ ಎದುರಿಗೆ ವಿಧವಿಧವಾಗಿ ಗೋಳಾಡಿದ.

ಆಗ ಬೇಟೆಗಾರ "ಮಹಾಪ್ರಭು, ರಾಜಕುಮಾರರು ಇನ್ನೂ ಬದುಕಿದ್ದಾರೆ. ನಾನು ಅವರನ್ನು ಕೊಲ್ಲಲಿಲ್ಲ. ಅವರ ಮೇಲೆ ಕೈ ಎತ್ತಲು ನನ್ನಿಂದ ಸಾಧ್ಯವಾಗಲಿಲ್ಲ. ಆದ್ದರಿಂದ ಅವರನ್ನು ಜೀವಸಹಿತ ಕಾಡಿನಲ್ಲಿ ಬಿಟ್ಟು ಅವರ ಅಂಗಿಯನ್ನು ಮಾತ್ರ ತಂದು ತೋರಿಸಿದೆ" ಎಂದ.

ಇದನ್ನು ಕೇಳಿ ರಾಜನಿಗೆ ಸಂತೋಷದಿಂದ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಕೂಡಲೆ ಅವನು ರಾಜಕುಮಾರ ಹಿಂತಿರುಗಿ ಬಂದರೆ ರಾಜರು ಅವನನ್ನು ಮನ್ನಿಸಿ ಬರಮಾಡಿಕೊಳ್ಳುತ್ತಾರೆ ಎಂದು ರಾಜ್ಯ ದಲ್ಲೆಲ್ಲಾ ಸಾರಿಸಿದ.

ಅತ್ತ ದೂರದ ಆ ಮಾಟದ ಅರಮನೆಯಲ್ಲಿದ್ದ ರಾಜಕುಮಾರಿ ತನ್ನನ್ನು ಬಿಡುಗಡೆ ಮಾಡಿದವನು ಮತ್ತೆ ಎಂದು ಬಂದಾನು ಎಂದು ಕಾದು ಕಾದು ದಿನಗಳನ್ನು ಎಣಿಸುತ್ತಿದ್ದಳು. ಅವಳು ಅರಮನೆಯ ಹೊರಬಾಗಿಲಿನ ಎದುರಿಗೆ ಅರ್ಧ ಮೈಲಿಯ ಉದ್ದಕ್ಕೂ ಚಿನ್ನದ ತಗಡು ಗಳನ್ನು ಹಾಸಿದ್ದ ರಸ್ತೆ ಮಾಡಿಸಿದ್ದಳು. "ಯಾವ ಸವಾರ ಹಿಂದು ಮುಂದು ನೋಡದೆ ನೇರವಾಗಿ ಆ ಚಿನ್ನದ ತಗಡುಗಳ ಮೇಲೆಯೇ

ಕುದುರೆ ಓಡಿಸಿಕೊಂಡು ಬಾಗಿಲಿಗೆ ಬರುತ್ತಾನೋ ಅವನೇ ನನ್ನನ್ನು ಮದುವೆಯಾಗಲಿರುವ ವೀರ. ಅವನು ಬಂದ ಕೂಡಲೆ ಬಾಗಿಲನ್ನು ತೆರೆದು ಅವನನ್ನು ಒಳಕ್ಕೆ ಕರೆತರಬೇಕು. ಹಾಗಲ್ಲದೆ, ಯಾರು ಚಿನ್ನದ ತಗಡುಗಳನ್ನು ತುಳಿಯಲು ಇಷ್ಟವಿಲ್ಲದೆ ದಾರಿಯ ಒಂದು ಮಗ್ಗುಲಲ್ಲಿ ಬರುತ್ತಾರೋ ಅವರಿಗೂ ನನಗೂ ಯಾವ ಸಂಬಂಧವೂ ಇಲ್ಲ. ಅವರನ್ನು ಹಿಂದಕ್ಕೆ ಅಟ್ಟಿಬಿಡಬೇಕು" ಎಂದು ತನ್ನ ಸೇವಕರಿಗೆ ಆಜ್ಞಾಪಿಸಿದಳು.

ಇಷ್ಟರಲ್ಲಿ ಮೊದಲನೆಯ ರಾಜಕುಮಾರ ಮಾಟದ ಅರಮನೆಗೆ ಹೋಗಿ ತಾನೇ ಅವಳನ್ನು ಮಾಟದಿಂದ ಬಿಡುಗಡೆ ಮಾಡಿದವನೆಂದು ಸುಳ್ಳು ಹೇಳಿ ರಾಜಕುಮಾರಿಯನ್ನು ಮದುವೆಯಾಗಿ ಅವಳ ರಾಜ್ಯವನ್ನು ಪಡೆಯಬೇಕೆಂದು ಮನಸ್ಸು ಮಾಡಿ, ಹೊರಟ. ಅರಮನೆಯ ಎದುರಿಗಿದ್ದ ಬಂಗಾರದ ತಗಡು ಹಾಸಿದ್ದ ದಾರಿಗೆ ಬಂದಕೂಡಲೆ ಅವನು ಚಂಗನೆ ನಿಂತ. "ಛೆ! ಇಂಥ ಸೊಗಸಾದ ರಸ್ತೆಯ ಮೇಲೆ ಕುದುರೆ ಓಡಿಸುವುದೆ? ಕೂಡದು!" ಎಂದುಕೊಂಡು ಕುದುರೆಯನ್ನು ಒಂದು ಪಕ್ಕಕ್ಕೆ ತಿರುಗಿಸಿದ. ಅವನು ಬರುವ ಹಾದಿಯನ್ನೇ ಕಣ್ಣಿಟ್ಟು ನೋಡು ತ್ತಿದ್ದ ಕಾವಲುಗಾರರು ರಾಜಕುಮಾರಿಯ ಅಪ್ಪಣೆಯಂತೆ ಅವನನ್ನು ತಡೆದು ಹಿಂದಕ್ಕೆ ಕಳುಹಿಸಿಬಿಟ್ಟರು.

ಅನಂತರ ಎರಡನೆಯ ರಾಜಕುಮಾರ ರಾಜಕುಮಾರಿಯನ್ನು ವರಿಸುವ ಉದ್ದೇಶದಿಂದಲೇ ಅಲ್ಲಿಗೆ ಬಂದ. ಅವನೂ ಬಂಗಾರದ ದಾರಿ ಯಲ್ಲಿ ಒಂದು ಹೆಜ್ಜೆ ಇಟ್ಟದ್ದವನು ಹಿಂದಕ್ಕೆ ಸರಿದು, "ಇದನ್ನು ತುಳಿದವ ರುಂಟೆ?" ಎಂದುಕೊಂಡು, ಒಂದು ಮಗ್ಗುಲಿಗೆ ತಿರುಗಿ, ಕುದುರೆಯಿಂದ ಕೆಳಗಿಳಿದು ನಡೆದು ಹೋದ. ಕಾವಲುಗಾರರು "ನಮ್ಮ ರಾಜಕುಮಾರಿಗೆ ಬೇಕಾದವನು ನೀನಲ್ಲ; ಬಂದ ದಾರಿಯನ್ನು ಹಿಡಿದು ಹೋಗು" ಎಂದು ಅವನನ್ನೂ ಹಿಂದಕ್ಕೆ ಅಟ್ಟಿದರು.

ಈ ವೇಳೆಗೆ ಒಂದು ವರ್ಷ ಪೂರ್ತಿಯಾಗಿ ಮುಗಿಯಿತು. ಮೂರ ನೆಯ ರಾಜಕುಮಾರ ಯಾರ ಕಣ್ಣಿಗೂ ಬೀಳದಂತೆ ತಾನು ವಾಸಮಾಡು ತ್ತಿದ್ದ ಕಾಡನ್ನು ಬಿಟ್ಟು ತನ್ನನ್ನು ಮದುವೆಯಾಗುವುದಾಗಿ ಮಾತ್ತು

ಕೊಟ್ಟಿದ್ದ ರಾಜಕುಮಾರಿಯ ಅರಮನೆಗೆ ಹೊರಟ. ದಾರಿಯ ಉದ್ದಕ್ಕೂ ಅವನ ಮನಸ್ಸಿನಲ್ಲಿ ಅವಳ ಯೋಚನೆಯೊಂದೇ ತುಂಬಿಹೋಗಿತ್ತು. ಯಾವಾಗ ಅರಮನೆಗೆ ಹೋದೇನು, ಎಷ್ಟು ಹೊತ್ತಿಗೆ ಅವಳನ್ನು ನೋಡೇನು ಎಂಬ ಚಿಂತೆಯಲ್ಲಿ ಅವನು ಉಳಿದುದೆಲ್ಲವನ್ನೂ ಮರೆತು ಒಂದೇ ಸಮನೆ ನೇರವಾಗಿ ಮುಂದೆ ನೋಡುತ್ತ ಕುದುರೆಯನ್ನು ಓಡಿಸಿದ. ಅರಮನೆಯ ಎದುರಿನ ಬಂಗಾರದ ರಸ್ತೆ ಅವನಿಗೆ ಗೋಚರವಾಗಲೇ ಇಲ್ಲ. ಅವನ ದೃಷ್ಟಿಯೆಲ್ಲಾ ಅರಮನೆಯ ಬಾಗಿಲ ಮೇಲಿತ್ತು. ಆದ್ದರಿಂದ ಅವನು ಅತ್ತಿತ್ತ ತಿರುಗದೆ ಆ ದಾರಿಯಲ್ಲೇ ನುಗ್ಗಿದ. ಅವನು ಬಂದುದೇ ತಡ ಅರಮನೆಯ ಬಾಗಿಲು ತಾನಾಗಿ ತಾನೇ ತೆರೆದುಕೊಂಡಿತು. ರಾಜಕುಮಾರಿ ಓಡಿಬಂದು ಅವನೇ ತನ್ನನ್ನು ಮಾಟದ ಬಂಧನದಿಂದ ಬಿಡುಗಡೆ ಮಾಡಿದವನೆಂದು ಎಲ್ಲರಿಗೂ ಹೇಳಿ ಅವನನ್ನು ಆದರದಿಂದ ಬರಮಾಡಿಕೊಂಡಳು.

ಮರುದಿನ ಅವಳು "ನಿಮ್ಮ ತಂದೆ ನಿನ್ನನ್ನು ಮನ್ನಿಸಿರುವುದಾಗಿ ಕೇಳಿದ್ದೇನೆ. ಆತ ಮತ್ತೆ ನಿನ್ನನ್ನು ನೋಡಲು ಕಾತರಿಸುತ್ತಿದ್ದಾನಂತೆ" ಎಂದು ಅವನಿಗೆ ಹೇಳಿದಳು. ಮದುವೆಗೆ ಮುಂಚೆ ತಂದೆಯನ್ನು ಒಂದು ಸಾರಿ ನೋಡಿಬರಬೇಕೆಂದು ಅವನಿಗೆ ಆಸೆಯಾಯಿತು. ಆದ್ದರಿಂದ ಅವಳನ್ನೂ ಜೊತೆಗೆ ಕರೆದುಕೊಂಡು ತಂದೆಯ ಮನೆಗೆ ಹೋದ.

ರಾಜನಿಗೆ ಸತ್ತು ಹೋಗಿದ್ದ ಮಗ ಬದುಕಿ ಬಂದರೆ ಆಗುವಷ್ಟು ಸಂತೋಷವಾಯಿತು. ರಾಜಕುಮಾರ ಅಣ್ಣಂದಿರಿಬ್ಬರೂ ತನಗೆ ಮಾಡಿದ್ದ ಮೋಸವನ್ನು ತಂದೆಗೆ ತಿಳಿಸಿದ. ರಾಜನಿಗೆ ತಡೆಯಲಾಗದಷ್ಟು ಕೋಪ ಬಂತು. ಅವರಿಬ್ಬರಿಗೂ ಚೆನ್ನಾಗಿ ಶಿಕ್ಷೆ ಮಾಡಬೇಕೆಂದು ಅವನು ಹವಣಿಸಿದ. ಅವರು ಇದನ್ನು ಹೇಗೋ ಮೊದಲೇ ಕಂಡು ಹಿಡಿದರು. ಇಬ್ಬರೂ ಯಾರಿಗೂ ಹೇಳದೆ ಪಲಾಯನ ಮಾಡಿದರು. ಎಲ್ಲಿಗೆ ಹೋದರೋ ದೇವರಿಗೇ ಗೊತ್ತು! ಹಾಳಾಗಲಿ! ಅವರ ಸುದ್ದಿ ನಮಗೇಕೆ?

ರಾಜ ಮಗನ ಮದುವೆಗೆ ರಾಜ್ಯದ ಜನಗಳನ್ನೆಲ್ಲಾ ಕರೆಸಿಕೊಂಡ. ಮದುವೆ ಬಹಳ ವಿಜೃಂಭಣೆಯಿಂದ ನಡೆಯಿತು. ಆ ದಿನ ಯಾರ ಮುಖ ದಲ್ಲಿ ನೋಡಿದರೂ ಸಂತೋಷ. ಎಲ್ಲೆಲ್ಲೂ ಸಂಭ್ರಮ. ಮದುವೆಗೆ ಬಂದಿದ್ದವರಲ್ಲಿ ಕಲ್ಲು ಸಕ್ಕರೆಯ ಟೋಪಿಯನ್ನು ಧರಿಸಿದ್ದ ಕೆಂಪಂಗಿಯ ಕುಳ್ಳನೂ ಇದ್ದ.

# ಮೂಗಿನ ಮರ

ನಮ್ಮ ದೇಶದಲ್ಲಿ ಹಿಂದೆ ಒಂದು ದೊಡ್ಡ ಯುದ್ಧವಾಯಿತು. ಹೋರಾಟವೆಲ್ಲಾ ಮುಗಿದ ಮೇಲೆ ಮೂರು ಜನ ಸೈನಿಕರು ತಮ್ಮ ಊರಿಗೆ ಹಿಂತಿರುಗುತ್ತಿದ್ದರು. ದಾರಿಯಲ್ಲಿ ತಿನ್ನುವುದಕ್ಕೆ ಹಿಟ್ಟಿಲ್ಲದೆ ಅವರು ಮನೆ ಮನೆಯಲ್ಲೂ ಬಿಕ್ಷೆ ಬೇಡಿ ಹೊಟ್ಟೆ ಹೊರೆದುಕೊಳ್ಳಬೇಕಾಯಿತು. ತಮ್ಮ ದುರದೃಷ್ಟವನ್ನು ನೆನೆದು ನೆನೆದು ಅವರ ಮುಖಗಳೆಲ್ಲಾ ವ್ಯಸನ ದಿಂದ ಪೆಚ್ಚಾಗಿದ್ದವು.

ಒಂದು ದಿನ ಸಾಯಂಕಾಲದ ಹೊತ್ತಿಗೆ ಅವರು ಒಂದು ಕಾಡನ್ನು ಸೇರಿದರು. ಅವರು ನಡೆಯುತ್ತಿದ್ದ ದಾರಿ ಕಾಡಿನ ಮಧ್ಯೆ ಇತ್ತು. ಆಮೇಲೆ ಬೇಗ ಕತ್ತಲಾದುದರಿಂದ ಅವರು ಅಲ್ಲೇ ಮಲಗಬೇಕಾಯಿತು. ಕಾಡಿನ ಕೆಟ್ಟ ಪ್ರಾಣಿಗಳು ತಮಗೆ ತೊಂದರೆ ಕೊಡದಂತೆ ಅವರು ತಮ್ಮಲ್ಲೇ ಒಂದು ಏರ್ಪಾಡು ಮಾಡಿಕೊಂಡರು. ಅದರ ಪ್ರಕಾರ ಒಂದು ಸಾರಿ ಇಬ್ಬರು ಮಾತ್ರ ನಿದ್ದೆ ಮಾಡಿ ಮೂರನೆಯವನು ಎಚ್ಚರವಾಗಿಯೇ ಕುಳಿತಿದ್ದು ಅವರಿಗೆ ಕಾವಲಿರಬೇಕು; ಅವನಿಗೆ ಆಯಾಸವಾಗಿ ನಿದ್ದೆ ಬಂದರೆ ಅವನು ಮಲಗಿದ್ದವರಲ್ಲಿ ಒಬ್ಬನನ್ನು ಎಬ್ಬಿಸಿ ಕೂಡಿಸಿ ಅನಂತರ ತಾನು ಮಲಗಿಕೊಳ್ಳಬೇಕು; ಹೀಗೆ ಎಲ್ಲರೂ ಸಮವಾಗಿ ಸರದಿಯ ಮೇಲೆ ನಿದ್ದೆಮಾಡಿ ಎಚ್ಚರವಾಗಿರಬಹುದು—ಎಂದು ಒಪ್ಪಂದವಾಯಿತು.

ಮೊದಲು ಮಲಗಬೇಕಾದ ಇಬ್ಬರೂ ನೆಲಕ್ಕೆ ತಲೆ ಹಾಕಿದ್ದೇ ತಡ, ನಿದ್ದೆಹೋದರು. ಉಳಿದವನು ಮರಗಳ ಕೆಳಗೆ ಬಿದ್ದಿದ್ದ ತೊಗಟೆಯ ಚೂರುಗಳನ್ನೂ ತರಗೆಲೆಗಳನ್ನೂ ಆರಿಸಿ ರಾಸಿ ಹಾಕಿ ದೊಡ್ಡದಾಗಿ ಬೆಂಕಿ ಹೊತ್ತಿಸಿ ಅದರ ಪಕ್ಕದಲ್ಲಿ ಕಾವಲು ಕೂತ. ಅವನು ಹಾಗೆ ಕೂತ ಸ್ವಲ್ಪ ಹೊತ್ತಿಗೇ ಕೆಂಪು ಬಣ್ಣದ ಅಂಗಿ ತೊಟ್ಟಿದ್ದ ಒಬ್ಬ ಕುಳ್ಳ ಎಲ್ಲಿಂದಲೋ

ಅಲ್ಲಿಗೆ ನೆಗೆದು ಬಂದ. ಬೆಂಕಿಯ ಬದಿಯಲ್ಲಿ ಕುಳಿತಿದ್ದ ಸೈನಿಕನನ್ನು ನೋಡಿ ಕುಳ್ಳ "ಯಾರಲ್ಲಿ?" ಎಂದು ಕೂಗಿದ. ಸೈನಿಕ "ಯಾಕಣ್ಣಾ? ನಾವು!" ಎಂದ. ಕುಳ್ಳ "ನಾವು ಎಂದರೆ ಯಾರು? ಸ್ನೇಹಿತರೋ ಶತ್ರುಗಳೋ?" ಎಂದ. ಸೈನಿಕ "ಸ್ನೇಹಿತರೆ! ನಾನೊಬ್ಬ ಹಳೆಯ ಸೈನಿಕ. ನಾನೂ ನನ್ನ ಇಬ್ಬರು ಸಂಗಾತಿಗಳೂ ಹೊಟ್ಟೆಗಿಲ್ಲದೆ ಅಲೆದೂ ಅಲೆದೂ ಸೊರಗಿ ಸಾಯುತ್ತಿದ್ದೇವೆ. ಬಾರಪ್ಪಾ, ಹತ್ತಿರ ಬಾ, ನೀನೂ ಬೆಂಕಿ ಕಾಯಿಸಿಕೊ. ಚಳಿ ಬಹಳ!" ಎಂದ. ಇವನನ್ನು ನೋಡಿ ಕುಳ್ಳನಿಗೆ ಕನಿಕರವಾಯಿತು. ಅವನು "ಸ್ನೇಹಿತನೆ, ನೀನು ಒಳ್ಳೆಯವನ ಹಾಗೆ ಕಾಣುತ್ತೀಯ. ಆದ್ದರಿಂದ ನಿನಗೊಂದು ಸಹಾಯ ಮಾಡುತ್ತೇನೆ. ಇಗೋ, ಇದನ್ನು ತೆಗೆದುಕೊ. ಬೆಳಗ್ಗೆ ನಿನ್ನ ಸಂಗಾತಿಗಳು ಎದ್ದಾಗ ಅವರಿಗೂ ಇದನ್ನು ತೋರಿಸು" ಎಂದು ನಯವಾಗಿದ್ದ ಒಂದು ಸಣ್ಣ ಕಂಬಳಿಯನ್ನು ಸೈನಿಕನಿಗೆ ಕೊಟ್ಟು, "ಇದನ್ನು ಹೆಗಲ ಮೇಲೆ ಹೊದ್ದು ಕೊಂಡರೆ ಸಾಕು, ನೀನು ಅಪೇಕ್ಷೆ ಪಡುವ ಪದಾರ್ಥಗಳೆಲ್ಲಾ ನಿನಗೆ ದೊರೆಯುತ್ತವೆ" ಎಂದು ಹೇಳಿ, ಚಂಗನೆ ಹಾರಿ ಕಾಡಿನ ಕತ್ತಲಲ್ಲಿ ಎಲ್ಲೋ ಮಾಯವಾದ.

ಎರಡನೆಯ ಸೈನಿಕ ಕಾವಲಿರಬೇಕಾದ ಸರದಿ ಬಂತು. ಮೊದಲನೆ ಯವನು ನೆಲದ ಮೇಲೆ ಒರಗಿ ತಕ್ಷಣ ನಿದ್ದೆ ಹೋದ. ಸ್ವಲ್ಪ ಹೊತ್ತಿನಲ್ಲಿಯೇ ಹಿಂದೆ ಬಂದಿದ್ದ ಕೆಂಪಂಗಿಯ ಕುಳ್ಳ ಮತ್ತೆ ನೆಗೆದು ಬಂದ. ಮೊದಲನೆಯವನ ಹಾಗೆಯೇ ಎರಡನೆಯ ಸೈನಿಕನೂ ಕುಳ್ಳನಿಗೆ ಬಹಳ ಮರ್ಯಾದೆ ತೋರಿಸಿ ಅವನನ್ನು ಆದರದಿಂದ ಮಾತಾಡಿಸಿದ. ಕುಳ್ಳ ಪ್ರಸನ್ನನಾಗಿ ಅವನಿಗೆ ಒಂದು ದುಡ್ಡಿನ ಚೀಲವನ್ನು ಕೊಟ್ಟು "ನೀನು ಎಷ್ಟು ಬೇಕಾದರೂ ಖರ್ಚು ಮಾಡು; ಆ ಚೀಲ ಮಾತ್ರ ಬರಿದಾಗುವುದಿಲ್ಲ, ಅದರಲ್ಲಿ ಯಾವಾಗಲೂ ದುಡ್ಡು ತುಂಬಿರುತ್ತದೆ" ಎಂದು ತಿಳಿಸಿ ಹೋದ.

ಮೂರನೆಯ ಸೈನಿಕ ಕಾವಲಿದ್ದಾಗ ಅದೇ ಕೆಂಪಂಗಿಯ ಕುಳ್ಳನೇ ಇನ್ನೊಂದು ಸಾರಿ ಬಂದು ಅವನಿಗೆ ಒಂದು ಸೊಗಸಾದ ಕೊಂಬನ್ನು ಕೊಟ್ಟು ಹೋದ. ಅದನ್ನು ಊದಿದೊಡನೆ ಎಲ್ಲೆಲ್ಲಿದ್ದವರೂ ಸಾವಿರಾರು

ಜನ ಅವನ ಸುತ್ತಲೂ ನೆರೆದು ಕುಣಿದಾಡುವ ಹಾಗೆ ಮಾಡುವ ಶಕ್ತಿ ಆ ಕೊಂಬಿಗೆ ಇತ್ತು.

ಬೆಳಗಾದಾಗ ಮೂವರೂ ತಮ್ಮ ತಮ್ಮ ಅನುಭವವನ್ನು ಒಬ್ಬರಿಗೊಬ್ಬರು ಹೇಳಿ ಕುಳ್ಳ ತಮತಮಗೆ ಕೊಟ್ಟು ಹೋಗಿದ್ದ ವಸ್ತುಗಳನ್ನು ಹೊರಕ್ಕೆ ತೆಗೆದು ತೋರಿಸಿದರು. ಎಲ್ಲರೂ ಒಟ್ಟಿಗೆ ಇದ್ದು ಈ ಪದಾರ್ಥಗಳ ಸಹಾಯದಿಂದ ಸುಖಪಡಬೇಕೆಂದು ಅವರು ತೀರ್ಮಾನಿಸಿದರು.

ಅವರು ಮೊದಲು ಉಪಯೋಗಿಸಿದ ವಸ್ತು ಹಣದ ಚೀಲ. ಬೇಕು ಬೇಕಾದ ಹಾಗೆ ದುಡ್ಡು ಸುರಿದು ಸ್ವಲ್ಪ ಕಾಲ ಎಲ್ಲರೂ ಊರೂರು ಸುತ್ತಿ ದೇಶಸಂಚಾರ ಹೊರಟರು. ಆದರೆ ಒಂದೆರಡು ತಿಂಗಳಲ್ಲೇ ಅವರಿಗೆ ಈ ತಿರುಗಾಟದಿಂದ ಬೇಜಾರಾಯಿತು. ಎಲ್ಲರಿಗೂ ಎಲ್ಲಾದರೂ ಒಂದು ಕಡೆ ಸ್ಥಿರವಾಗಿ ನಿಲ್ಲಬೇಕು ಎನ್ನಿಸಿತು.

ಮೊದಲನೆಯ ಸೈನಿಕ ತನ್ನ ಕಂಬಳಿಯನ್ನು ಹೆಗಲ ಮೇಲೆ ಹೊದ್ದುಕೊಂಡು "ನಮಗೊಂದು ದೊಡ್ಡಮನೆ ದೊರೆಯಲಿ" ಎಂದು ಅಭಿಲಾಷೆಪಟ್ಟ. ತಕ್ಷಣವೇ ಅವರ ಎದುರಿಗೆ ಒಂದು ಎತ್ತರವಾದ ದಿವ್ಯವಾದ ಮನೆ ನಿಂತಿತು. ಅದರ ಸುತ್ತಲೂ ಕೋಟೆಯಂಥ ಗೋಡೆಯಿತ್ತು. ಕೋಟೆಯ ಒಳಗೆ ವಿಸ್ತಾರವಾದ ಹುಲ್ಲುಗಾವಲುಗಳೂ, ಸುಂದರವಾದ ತೋಟಗಳೂ, ಸಾವಿರಾರು ಹಸುಕರುಗಳೂ ಕುರಿಮೇಕೆಗಳೂ ಇದ್ದವು. ಅವರನ್ನು ಆ ಮನೆಗೆ ಕರೆದುಕೊಂಡು ಹೋಗಲು ಮೂರು ಉತ್ತಮವಾದ ಬಿಳಿಯ ಕುದುರೆಗಳನ್ನು ಕಟ್ಟಿದ್ದ ಗಾಡಿಯೊಂದು ಅವರ ಹತ್ತಿರ ಬಂದು ನಿಂತಿತು.

ಮನೆಯಲ್ಲಿ ಸೋಮಾರಿಗಳಾಗಿರುವುದು ಸೈನಿಕರಿಗೆ ಸರಿಬೀಳಲಿಲ್ಲ. ಕೆಲವು ದಿನ ಆದ ಮೇಲೆ ಆ ಬಗೆಯ ಜೀವನ ಅವರಿಗೆ ಸಾಕಾಯಿತು. ಆಗ ಮೂರು ಜನರೂ ತಮ್ಮ ಒಳ್ಳೊಳ್ಳೆಯ ಉಡುಗೆ ತೊಡಿಗೆಗಳನ್ನೆಲ್ಲಾ ತೆಗೆದುಕೊಂಡು, ಮೂರು ಬಿಳಿಯ ಕುದುರೆಗಳನ್ನು ಹೂಡಿದ್ದ ಗಾಡಿಯಲ್ಲಿ ಕುಳಿತು, ಅಲ್ಲಿಗೆ ಸ್ವಲ್ಪ ದೂರದಲ್ಲಿ ಆಳುತ್ತಿದ್ದ ಒಬ್ಬ ರಾಜನನ್ನು ನೋಡಿಕೊಂಡು ಬರಲು ಹೊರಟರು. ಆ ರಾಜನಿಗೆ ಒಬ್ಬಳೇ ಒಬ್ಬಳು ಮಗಳಿದ್ದಳು. ರಾಜಕುಮಾರರ ರೀತಿಯಲ್ಲಿ ಸಂಚಾರಮಾಡುತ್ತಿದ್ದ ಈ ಮೂವರು

ಸೈನಿಕರನ್ನು ನೋಡಿ ಅವನು ಇವರು ನಿಜವಾಗಿಯೂ ಯಾವುದೋ ದೇಶದ ರಾಜನ ಮಕ್ಕಳೇ ಆಗಿರಬೇಕೆಂದು ಭಾವಿಸಿದ. ಆದ್ದರಿಂದ ಅವರಿಗೆ ಬಹಳ ಗೌರವಪೂರ್ವಕವಾದ ಸತ್ಕಾರ ದೊರೆಯಿತು.

ಒಂದು ದಿವಸ ಎರಡನೆಯ ಸೈನಿಕ ರಾಜಕುಮಾರಿಯ ಜೊತೆಯಲ್ಲಿ ಅರಮನೆಯ ಹೂದೋಟದಲ್ಲಿ ಓಡಾಡುತ್ತಿದ್ದ. ಅವನ ಕೈಯಲ್ಲಿ ಕುಳ್ಳ ಕೊಟ್ಟಿದ್ದ ಹಣದ ಚೀಲವಿತ್ತು. ಅದನ್ನು ಅವಳು ಕಂಡಳು. ಆ ರಾಜ ಕುಮಾರಿ ಒಬ್ಬ ಮಾಟಗಾತಿ. ಸೈನಿಕರು ತಂದಿದ್ದ ವಸ್ತುಗಳ ವಿಚಾರ ವೆಲ್ಲಾ ಅವಳ ಮಂತ್ರಶಕ್ತಿಯಿಂದ ಅವಳಿಗೆ ಮೊದಲೇ ಗೊತ್ತಿತ್ತು. ಆದರೂ ಅವಳು ಅರಿಯದವಳಂತೆ ನಟಿಸಿ "ಅದೇನು ?" ಎಂದು ಅವನನ್ನು ಕೇಳಿದಳು. ಅವನು ಆವಳ ಸವಿ ಮಾತಿಗೆ ಬೆರಗಾಗಿ ಬುದ್ಧಿಗೆಟ್ಟು ಇದ್ದ ಸಂಗತಿಯನ್ನೆಲ್ಲಾ ಹೇಳಿಬಿಟ್ಟ.

ಅಂದೇ ಆ ಮಾಟಗಾತಿ ತನ್ನ ಕೈ ಚಳಕವನ್ನೆಲ್ಲಾ ಉಪಯೋಗಿಸಿ ಸೈನಿಕನ ಚೀಲದ ಹಾಗೆಯೇ ಇದ್ದ ಇನ್ನೊಂದು ಚೀಲವನ್ನು ಮಾಡಿದಳು. ಎರಡನ್ನೂ ಒಟ್ಟಿಗೆ ಇಟ್ಟರೆ ಕುಳ್ಳ ಕೊಟ್ಟಿದ್ದ ಚೀಲ ಯಾವುದು, ಮಾಟ ಗಾತಿ ಮಾಡಿದ್ದ ಚೀಲ ಯಾವುದು ಎಂದು ಕಂಡು ಹಿಡಿಯುವುದು ಯಾರಿಂದಲೂ ಆಗುತ್ತಿರಲಿಲ್ಲ.

ಅದು ಮುಗಿದ ಕೂಡಲೆ ಅವಳು ಆ ಸೈನಿಕನನ್ನು ತನ್ನ ಜೊತೆಯಲ್ಲಿ ಊಟಕ್ಕೆ ಕರೆದು, ತಾನು ಮೊದಲೇ ಸಿದ್ಧಮಾಡಿಕೊಂಡಿದ್ದ ಒಳ್ಳೆಯ ಹೆಂಡವನ್ನು ಅವನಿಗೆ ಕುಡಿಸಿದಳು. ಅದರ ಫಲವಾಗಿ ಅವನು ಮತ್ತು ಬಂದು, ಮೈಮರೆತು, ಬಿದ್ದುಕೊಂಡು ನಿದ್ದೆಹೋದ. ಆಗ ಅವಳು ಮೆಲ್ಲಗೆ ಅವನ ಜೇಬಿನಲ್ಲಿದ್ದ ಚೀಲವನ್ನು ತೆಗೆದುಕೊಂಡು ತಾನು ಹೆಣೆದಿದ್ದ ಚೀಲವನ್ನು ಅಲ್ಲಿಟ್ಟಳು.

ಮಾರನೆಯ ದಿನ ಸೈನಿಕರೆಲ್ಲರೂ ತಮ್ಮ ಕೋಟೆಯ ಮನೆಗೆ ಹೊರಟರು. ಮನೆಯನ್ನು ಸೇರಿದ ಸ್ವಲ್ಪ ಹೊತ್ತಿಗೆ ಅವರಿಗೆ ಯಾವುದೋ ಕೆಲಸಕ್ಕಾಗಿ ಹಣ ಬೇಕಾಯಿತು. ಚೀಲವನ್ನು ತೆಗೆದು ಬಾಯಿತೆರೆದು ನೋಡಿದರು. ಅದರಲ್ಲಿ ಹಣವೇನೋ ಇತ್ತು. ಆದರೆ ಅವರು ಅಲ್ಲಿ ಇದ್ದಷ್ಟು ಹಣವನ್ನೂ ಹೊರಕ್ಕೆ ಸುರಿಯಲು ಮತ್ತೆ ಚೀಲ ತುಂಬಿಕೊಳ್ಳಲೇ

ಇಲ್ಲ. ತಮಗೆ ಆಗಿದ್ದ ಮೋಸ ಅವರಿಗೆ ಆಗ ಹೊಳೆಯಿತು. ಎರಡನೆಯ ಸೈನಿಕ ತಾನು ರಾಜಕುಮಾರಿಯ ಜೊತೆಯಲ್ಲಿ ಅವಳ ಹೂದೋಟದಲ್ಲಿ ಓಡಾಡುತ್ತಿದ್ದುದು, ತಾನು ಅವಳಿಗೆ ಆ ಚೀಲದ ಗುಟ್ಟನ್ನು ಹೇಳಿದ್ದು, ಅವಳೊಡನೆ ಊಟಮಾಡಿ ಹಾಗೆಯೇ ಸಾರಾಯಿ ಕುಡಿದು ಜ್ಞಾನ ತಪ್ಪಿ ಮಲಗಿದ್ದುದು—ಎಲ್ಲವನ್ನೂ ಜ್ಞಾಪಿಸಿಕೊಂಡು ತನ್ನ ಅವಿವೇಕಕ್ಕಾಗಿ ಬಹಳ ಮರುಗಿದ. ಅವಳೇ ತನ್ನ ಚೀಲವನ್ನು ತೆಗೆದುಕೊಂಡಿರಬೇಕೆಂದು ಅವನಿಗೆ ಖಂಡಿತವಾಗಿ ತೋರಿತು. "ಅಯ್ಯೋ, ಎಂಥ ಬೆಪ್ಪ ನಾನು! ಮುಂದೆ ನಮ್ಮ ಗತಿಯೇನು?" ಎಂದು ವಿಧವಿಧವಾಗಿ ನೊಂದು ಕೊಂಡ.

ಇದನ್ನು ನೋಡಿ ಮೊದಲನೆಯ ಸೈನಿಕ "ಇದಕ್ಕೆ ಏಕಯ್ಯಾ ಇಷ್ಟೊಂದು ಗೋಳಾಡುತ್ತೀಯ? ನೀನು ಹೀಗೆ ವ್ಯಸನಪಟ್ಟರೆ ಎರಡು ಮೂರು ದಿನದಲ್ಲಿ ತಲೆಯೆಲ್ಲಾ ನರೆತು ಬೆಳ್ಳಗಾದೀತು! ನಿನ್ನ ಚೀಲವನ್ನು ನಾನು ತಂದು ಕೊಡುತ್ತೇನೆ! ಸುಮ್ಮನಿರು" ಎಂದು, ತನ್ನ ಕಂಬಳಿಯನ್ನು ಭುಜದ ಮೇಲೆ ಹಾಕಿಕೊಂಡು ತಾನು ಆ ಮಾಟಗಾತಿ ರಾಜಕುಮಾರಿಯ ಕೋಣೆಗೆ ಹೋಗಬೇಕೆಂದು ಅಪೇಕ್ಷೆಪಟ್ಟ.

ಅವನು ರಾಜಕುಮಾರಿಯ ಕೊಠಡಿಯನ್ನು ಪ್ರವೇಶಿಸಿದಾಗ ಅವಳು ಹಣದ ಚೀಲದಿಂದ ಮಳೆಯ ಹನಿಗಳಂತೆ ಎಡೆಬಿಡದೆ ಕೆಳಕ್ಕೆ ಉದುರುತ್ತಿದ್ದ ನಾಣ್ಯಗಳನ್ನು ಎಣಿಸಿ ಎಣಿಸಿ ರಾಶಿ ಹಾಕುತ್ತಿದ್ದಳು. ಇವನು ಬಂದುದು ಅವಳಿಗೆ ಗೊತ್ತೇ ಆಗಲಿಲ್ಲ.

ಆದರೆ ಆ ಸೈನಿಕ ಎರಡನೆಯವನಂತೆಯೇ ಬುದ್ಧಿಹೀನನಾದ. ಒಮ್ಮೊಂದೊಮ್ಮೆಗೇ ಮುಂದಕ್ಕೆ ಹಾರಿ ಅವಳ ಕೈಯಿಂದ ಚೀಲವನ್ನು ಕಿತ್ತುಕೊಂಡು ಮತ್ತೆ ತಮ್ಮ ಕೋಟೆಯ ಮನೆಗೆ ಹೋಗಬೇಕೆಂದು ಅಪೇಕ್ಷೆಪಡಬೇಕಾಗಿತ್ತು. ಹಾಗೆ ಮಾಡುವುದಕ್ಕೆ ಬದಲಾಗಿ ಅವನು ಅವಳನ್ನೇ ನೋಡುತ್ತಾ ಬಹಳ ಹೊತ್ತು ನಿಂತುಬಿಟ್ಟ. ಒಂದು ಸಾರಿ ಅವಳು ಅಕಸ್ಮಾತ್ ಹಿಂದಕ್ಕೆ ತಿರುಗಿದಾಗ ಇವನನ್ನು ನೋಡಿ ಚಿಟ್ಟನೆ ಚೀರಿ, ಮೇಲಕ್ಕೆ ಹಾರಿ, "ಕಳ್ಳ! ಕಳ್ಳ!" ಎಂದು ಗಟ್ಟಿಯಾಗಿ ಕಿರಿಚಿಕೊಂಡಳು.

ಅರಮನೆಯ ಆಳುಗಳು ಆಸ್ಥಾನಿಕರು ಎಲ್ಲರೂ ಅಲ್ಲಿಗೆ ಓಡಿಬಂದು ಸೈನಿಕನನ್ನು ಹಿಡಿಯಲು ಹೋದರು. ಆ ಗಾಬರಿಯಲ್ಲಿ ಅವನಿಗೆ ತನ್ನ ಹೆಗಲ ಮೇಲೆಯೇ ಇದ್ದ ಕಂಬಳಿಯ ಮಹಾತ್ಮೆ ಮರತೇ ಹೋಯಿತು. ನಿಂತ ಕಡೆಯೇ ಸುಮ್ಮನೆ "ನಮ್ಮ ಕೋಟೆಯ ಮನೆಗೆ ಹೋಗಬೇಕು" ಎಂದು ಅವನು ಅಪೇಕ್ಷೆ ಪಟ್ಟಿದ್ದರೆ, ಇವರ ಕಣ್ಣಿಗೆ ಕಾಣದ ಹಾಗೆ ಮಾಯವಾಗಬಹುದಾಗಿತ್ತು. ಆದರೆ ಹೆದರಿಕೆಯಿಂದ ಅವನಿಗೆ ದಿಕ್ಕು ತೋಚದಂತಾಯಿತು. ಏನಾದರೂ ಮಾಡಿ ತಪ್ಪಿಸಿಕೊಳ್ಳಬೇಕೆಂದು ಅವನು ಬಾಗಿಲ ಕಡೆಗೆ ಓಡಿದ. ಭುಜದ ಮೇಲೆ ನೇತಾಡುತ್ತಿದ್ದ ಅವನ ಕಂಬಳಿ ಬಾಗಿಲಿನಲ್ಲಿದ್ದ ಒಂದು ಮೊಳೆಗೆ ಸಿಕ್ಕಿಕೊಂಡಿತು. ಅವಸರದಲ್ಲಿ ಅವನು ಅದನ್ನು ಗಮನಿಸದೆ ಅಲ್ಲೇ ಬಿಟ್ಟು ಓಡಿಹೋದ. ಅದರ ಪ್ರಯೋಜನವನ್ನು ಅರಿತಿದ್ದ ಮಾಟಗಾತಿ ರಾಜಕುಮಾರಿಗೆ ಬಹಳ ಸಂತೋಷವಾಯಿತು. ಅವಳು ಅದನ್ನು ಮೊಳೆಯಿಂದ ಬಿಡಿಸಿ ತೆಗೆದಿಟ್ಟು ಕೊಂಡಳು.

ಪಾಪ! ಆ ಸೈನಿಕ ಕಾಲುನಡಿಗೆಯಲ್ಲೇ ಆದಷ್ಟು ವೇಗವಾಗಿ ಓಡಿ ಮನೆ ಸೇರಿಕೊಂಡ. ಅವನ ಮುಖವೆಲ್ಲಾ ದುಃಖದಿಂದ ಬಿಳಿಚಿಹೋಗಿತ್ತು. ಅವನ ಪಾಡು ನೋಡಿ ಮೂರನೆಯ ಸೈನಿಕ "ಧೈರ್ಯವಾಗಿರು. ನಿನ್ನ ಕಂಬಳಿ, ಅವನ ಚೀಲ—ಎರಡನ್ನೂ ನಾನು ತಂದುಕೊಡುತ್ತೇನೆ. ಅದೇನು ಮಹಾ ದೊಡ್ಡ ಕೆಲಸ!" ಎಂದು ತನ್ನ ಕೊಂಬನ್ನು ಕೈಗೆ ತೆಗೆದುಕೊಂಡು ಬಾಯಿಗೆತ್ತಿ ದೀರ್ಘವಾಗಿ ಧ್ವನಿ ಬರುವಂತೆ ಒಂದು ಸಾರಿ ಊದಿದ.

ಕೂಡಲೆ ಸಾವಿರಾರು ಜನ ಬಂದು ಅವನ ಅರಮನೆಯ ಮುಂದೆ ನಿಂತರು. ಇವರನ್ನೆಲ್ಲಾ ಕರೆದುಕೊಂಡು ಹೋಗಿ ಮೂವರು ಸೈನಿಕರೂ ಆ ಮಾಟಗಾತಿಯ ತಂದೆಯ ಮೇಲೆ ಯುದ್ಧ ಹೂಡಿ ಅವನ ಅರಮನೆಯ ಮೇಲೆ ಮುತ್ತಿಗೆ ಹಾಕಿದರು. ಹಣದ ಚೀಲವನ್ನೂ ಕಂಬಳಿಯನ್ನೂ ಹಿಂತಿರುಗಿ ಕೊಟ್ಟ ಹೊರತು ಅರಮನೆಯ ಒಂದು ಕಲ್ಲನ್ನೂ ಬಿಡದೆ ನುಚ್ಚು ನೂರು ಮಾಡುವುದಾಗಿ ಅವನನ್ನು ಬೆದರಿಸಿದರು.

ರಾಜ ತನ್ನ ಮಗಳಿದ್ದ ಕೋಣೆಗೆ ಹೋಗಿ ಅವಳಿಗೆ ಇದನ್ನೆಲ್ಲಾ ತಿಳಿಸಿದ. ಅವಳು "ಅಪ್ಪಾ, ನೀನು ಸುಮ್ಮನಿರು. ಇವರನ್ನು ಸೋಲಿಸಲು ನನ್ನಿಂದ ಆಗುವುದಿಲ್ಲವೆ? ನೋಡುತ್ತೇನೆ!" ಎಂದು ಅವನಿಗೆ ಸಮಾಧಾನ ಹೇಳಿ ಕಳುಹಿಸಿದಳು.

ಅನಂತರ ಅವಳು ಒಬ್ಬ ಹುಡುಗಿಯ ಹಾಗೆ ವೇಷ ಧರಿಸಿ, ಕೈಯಲ್ಲಿ ಒಂದು ಕುಕ್ಕೆ ಹಿಡಿದು, ರಾತ್ರಿ ಕತ್ತಲಾದಮೇಲೆ ತನ್ನ ಸೇವಕಿಯ ಸಂಗಡ ಸಣ್ಣಪುಟ್ಟ ಚೆಂದದ ಸಾಮಾನುಗಳನ್ನು ಮಾರಾಟಮಾಡುವವಳಂತೆ ನಟಿಸುತ್ತಾ ಶತ್ರುಗಳಿದ್ದ ಸ್ಥಳಕ್ಕೆ ಹೋದಳು.

ಬೆಳಗಾದ ಕೂಡಲೆ ಅವಳು ಒಳ್ಳೆಯ ಮಧುರವಾದ ಕಂಠದಲ್ಲಿ ಒಂದಾಗುತ್ತಲೊಂದರಂತೆ ಲಾವಣಿಗಳನ್ನು ಹಾಡುತ್ತಾ ಎದುರು ಪಕ್ಷದವರ ಪಾಳೆಯದಲ್ಲೆಲ್ಲಾ ಅತ್ತಿಂದಿತ್ತ ಅಲೆದಾಡಿದಳು. ಅವಳ ಹಾಡುಗಳನ್ನು ಕೇಳಲು ಶತ್ರು ಸೈನಿಕರೆಲ್ಲಾ ಗುಂಪುಗುಂಪಾಗಿ ನೂಕುನುಗ್ಗಲಾಗಿ ಓಡಿ ಬಂದರು. ಎಲ್ಲರೂ ಅವಳ ಇಂಪಾದ ಸ್ವರವನ್ನು ಕೇಳುವುದರಲ್ಲಿ ಮಗ್ನರಾಗಿ ಬೇರೆಯ ಯೋಚನೆಯನ್ನೇ ಮರೆತುಬಿಟ್ಟರು.

ಇವರ ಮಧ್ಯೆ ಕೊಂಬಿನ ಸೈನಿಕನೂ ಬಂದು ನಿಂತ. ಅವನನ್ನು ನೋಡಿದ ಕೂಡಲೆ ರಾಜಕುಮಾರಿ ತನ್ನ ಜೊತೆಯಲ್ಲಿದ್ದ ಸೇವಕಿಗೆ ಕಣ್ಣು ಸನ್ನೆ ಮಾಡಿದಳು. ಅವಳು ಮೆಲ್ಲನೆ ಆ ಸೈನಿಕನ ಬಿಡಾರಕ್ಕೆ ಹೋಗಿ ಅಲ್ಲಿದ್ದ ಅವನ ಕೊಂಬನ್ನು ತೆಗೆದು ಮುಚ್ಚಿಟ್ಟುಕೊಂಡು ರಾಜಕುಮಾರಿಯ ಬಳಿಗೆ ಬಂದು ನಿಂತಳು.

ಅನಂತರ ಅವರಿಬ್ಬರೂ ಅರಮನೆಗೆ ಹಿಂದಿರುಗಿದರು. ಮುತ್ತಿಗೆ ಹಾಕಲು ಬಂದಿದ್ದ ಜನರ ಗುಂಪು ಬಂದ ಹಾಗೆಯೇ ಹಿಂದಕ್ಕೆ ಹೋಯಿತು. ಕೆಂಪಂಗಿಯ ಕುಳ್ಳ ಸೈನಿಕರಿಗೆ ಕೊಟ್ಟಿದ್ದ ಮಹಾತ್ಮೆಯುಳ್ಳ ಮೂರು ವಸ್ತುಗಳೂ ರಾಜಕುಮಾರಿಯ ವಶವಾದವು. ಸೈನಿಕರು ಮೂವರೂ ಮತ್ತೆ ಬಿಕ್ಷುಕರಾದರು.

ಆಮೇಲೆ ಅವರೆಲ್ಲರೂ ಒಟ್ಟಿಗೆ ಇರಲು ಸಾಧ್ಯವಾಗಲಿಲ್ಲ. ಒಬ್ಬೊಬ್ಬರು ಒಂದೊಂದು ಕಡೆ ಹೋಗಿ ಅನ್ನ ಸಂಪಾದಿಸಬೇಕೆಂದು ಹಣದ ಚೀಲ ಕಳೆದುಕೊಂಡಿದ್ದ ಎರಡನೆಯ ಸೈನಿಕ ಸೂಚಿಸಿದ. ಆದರೆ

ಉಳಿದವರಿಬ್ಬರೂ ಒಬ್ಬರನ್ನೊಬ್ಬರು ಬಿಟ್ಟು ಇರಲು ಇಷ್ಟಪಡಲಿಲ್ಲ. ಆದ್ದರಿಂದ ಅವರಿಬ್ಬರೂ ಜೊತೆಯಾಗಿ ಒಂದು ದಿಕ್ಕಿಗೆ ಹೊರಟರು.

ಎರಡನೆಯ ಸೈನಿಕ ತಾನೇ ಬೇರೆಯಾಗಿ ಅಲ್ಲಿ ಇಲ್ಲಿ ಅಲೆದು ಒಂದು ಕಾಡಿಗೆ ಬಂದ. ಈ ಕಾಡು ಅವರೆಲ್ಲರೂ ಕೆಂಪಂಗಿಯ ಕುಳ್ಳನನ್ನು ಕಂಡಿದ್ದ ಕಾಡೇ ಆಗಿತ್ತು. ಆದರೂ ಅದು ಅವನಿಗೆ ಮೊದಲು ಗೊತ್ತಾಗಲಿಲ್ಲ. ಅವನು ಬಹಳ ಹೊತ್ತು ನಡೆದು, ಸಂಜೆಯಾಗಲು ಆಯಾಸದಿಂದ ಒಂದು ಮರದ ಕೆಳಗೆ ಕುಳಿತು ಹಾಗೆಯೇ ಮಲಗಿ ನಿದ್ದೆಹೋದ.

ಬೆಳಗಾದಾಗ ಅವನು ಕತ್ತೆತ್ತಿ ನೋಡಿದ. ಮರದ ಮೇಲೆ ಸೊಗಸಾದ ಸೇಬಿನ ಹಣ್ಣುಗಳು ಗೊಂಚಲು ಗೊಂಚಲಾಗಿ ಬಿಟ್ಟಿದ್ದವು. ಅನನಿಗೆ ಬಹಳ ಸಂತೋಷವಾಯಿತು. ಅದಕ್ಕೆ ಸರಿಯಾಗಿ ಅವನಿಗೆ ಹಸಿವೂ ಆಗಿದ್ದುದರಿಂದ ಅವನು ಮೊದಲು ಒಂದು, ಆಮೇಲೆ ಇನ್ನೊಂದು, ಆಮೇಲೆ ಮತ್ತೊಂದು, ಹೀಗೆ ಮೂರು ಸೇಬಿನ ಹಣ್ಣುಗಳನ್ನು ಕಿತ್ತು ತಿಂದ. ಮೂಗಿನಲ್ಲಿ ನವೆಯಾದ ಹಾಗೆ ತೋರಿತು. ನಾಲ್ಕನೆಯ ಸೇಬನ್ನು ಮರದಿಂದ ಕಿತ್ತು ಬಾಯಲ್ಲಿ ಇಟ್ಟುಕೊಳ್ಳುವುದಕ್ಕೆಂದು ಕೈಯೆತ್ತಿದ. ಅದಕ್ಕೆ ಏನೋ ಅಡಚಣೆಯಾಯಿತು. ಮುಟ್ಟಿ ನೋಡಿಕೊಳ್ಳುತ್ತಾನೆ—ಅವನದೇ ಮೂಗು! ಉದ್ದವಾಗುತ್ತಾ ಆಗುತ್ತಾ ಅದು ಆಗಲೇ ಅವನ ಎದೆಯುವರೆಗೂ ಬಂದಿತ್ತು! ಅಷ್ಟಕ್ಕೇ ನಿಲ್ಲಲಿಲ್ಲ—ಇನ್ನೂ ಬೆಳೆಯುತ್ತಲೇ ಇತ್ತು! ಅವನಿಗೆ ಗಾಬರಿಯಾಯಿತು. "ಇದೇನಪ್ಪ, ದೇವರೆ? ಇದು ಎಲ್ಲಿಗೆ ಕೊನೆಗಾಣುತ್ತದೆಯೊ!" ಎಂದುಕೊಂಡ. ಮೂಗು ಅಷ್ಟುಹೊತ್ತಿಗೆ ನೆಲದ ವರೆಗೂ ಇಳಿದು ಹಾಗೆಯೇ ಮುಂದು ಮುಂದಕ್ಕೆ ಹಾವಿನ ಹಾಗೆ ಹೋಗೇ ಹೋಯಿತು! ಅದರ ಭಾರವನ್ನು ಹೊತ್ತು ಕುಳಿತುಕೊಳ್ಳಲಾರದೆ ಅವನು ನೆಲಕ್ಕೆ ಬಿದ್ದುಬಿಟ್ಟ. ಮೂಗು ಮಾತ್ರ ಮರಗಳ ನಡುವೆ ಮುಂದುವರೆದು ಹಳ್ಳ ಇಳಿದು ತಿಟ್ಟನ್ನು ಏರಿ ಇನ್ನೂ ಉದ್ದವಾಗುತ್ತಲೇ ಇತ್ತು!

ಇಷ್ಟರಲ್ಲಿ ಅವನ ಸ್ನೇಹಿತರಿಬ್ಬರೂ ಅದೇ ಕಾಡಿಗೆ ಬಂದು ಸೇರಿದ್ದರು. ನಡೆಯುತ್ತಿದ್ದಾಗ ಅವರ ಕಾಲುಗಳು ಏನನ್ನೋ ಎಡವಿದವು. ನೋಡಿದರೆ ಮನುಷ್ಯನ ಮೂಗಿನಂತಿತ್ತು. ಅದು ಯಾರ ಮೂಗೋ ಕಂಡು ಹಿಡಿಯ

ಬೇಕೆಂದು ಅವರು ಅದರ ಪಕ್ಕದಲ್ಲೇ ನಡೆದುಹೋದರು. ಕಡೆಗೆ ಸೇಬಿನ ಮರದ ಕೆಳಗೆ ಮೂಗಿನ ಭಾರವನ್ನು ಹೊರಲಾರದೆ ಉಬ್ಬಸಪಡುತ್ತ ಬಿದ್ದಿದ್ದ ಎರಡನೆಯ ಸೈನಿಕ ಕಾಣಿಸಿದ.

ಅವರಿಬ್ಬರೂ ಅವನನ್ನು ಮೇಲಕ್ಕೆ ಎತ್ತಲು ಪ್ರಯತ್ನಪಟ್ಟರು. ಆಗಲಿಲ್ಲ. ನಿರಾಸೆಯಿಂದ ಚಿಂತೆ ಮಾಡುತ್ತ ಸುಮ್ಮನೆ ಕುಳಿತುಕೊಂಡು ಬಿಟ್ಟರು. ಅಷ್ಟು ಹೊತ್ತಿಗೆ ಅವರ ಹಳೆಯ ಸ್ನೇಹಿತ ಕೆಂಪಂಗಿಯ ಕುಳ್ಳ ಆಕಡೆ ಬಂದ. ಇವರ ಗತಿ ನೋಡಿ ಅವನಿಗೆ ನಗು ಉಕ್ಕಿತು. "ನಿನ್ನ ಮೂಗಿಗೆ ಔಷಧಿ ಕೊಡಬೇಕಾದ ಕೆಲಸ ಒಂದಿದೆ ಅಲ್ಲವೆ ನನಗೆ?" ಎನ್ನುತ್ತ ಅವನು ಅಲ್ಲೇ ಹತ್ತಿರದಲ್ಲಿದ್ದ ಒಂದು ಅಂಜೂರದ ಮರವನ್ನು ತೋರಿಸಿ, ಅದರ ಹಣ್ಣು ಕಿತ್ತು ತಿಂದರೆ ಮೂಗು ಮತ್ತೆ ಸರಿಹೋಗುವುದೆಂದು ಹೇಳಿದ. ಸದ್ಯ, ಸೈನಿಕ ಬದುಕಿದ! ಕುಳ್ಳ ಹಾಗೆಂದ ಒಡನೆ ಇನ್ನಿಬ್ಬರೂ ನಾಮುಂದು ತಾಮುಂದು ಎಂದು ಓಡಿಹೋಗಿ ಅಂಜೂರದ ಹಣ್ಣುಗಳನ್ನು ಕಿತ್ತು ತಂದರು. ಮೂಗು ಮೊದಲಿದ್ದ ಹಾಗೆಯೇ ಆಯಿತು. ಆಗ ಎರಡನೆಯ ಸೈನಿಕನ ಸಂತೋಷ ಹೇಳತೀರದು.

ಕುಳ್ಳ ಅವನನ್ನು ಕುರಿತು "ಯಾರಾದರೂ ಈ ಸೇಬಿನ ಹಣ್ಣು ತಿಂದರೆ ಅವರ ಮೂಗು ಈಗ ನಿನ್ನ ಮೂಗು ಆದ ಹಾಗೆ ಉದ್ದವಾಗುತ್ತ ಹೋಗುತ್ತದೆ. ಈ ಮರದ ಅಂಜೂರ ಒಂದು ತಿಂದರೆ ಅದು ಮತ್ತೆ ಸರಿಹೋಗುತ್ತದೆ. ಒಂದಿಷ್ಟು ಸೇಬಿನ ಹಣ್ಣುಗಳನ್ನೂ ಅಂಜೂರಗಳನ್ನೂ ಕಿತ್ತುಕೊಂಡು ಆ ರಾಜಕುಮಾರಿಯ ಬಳಿಗೆ ಹೋಗಿ ಏನಾದರೂ ಉಪಾಯ ಮಾಡಿ ಅವಳಿಗೆ ಒಂದು ಸೇಬನ್ನು ತಿನ್ನಿಸು. ಅವಳ ಮೂಗು ನಿನ್ನ ಮೂಗು ಬೆಳೆದುದಕ್ಕಿಂತಲೂ ಇಪ್ಪತ್ತರಷ್ಟು ಉದ್ದವಾಗಿ ಬೆಳೆಯುತ್ತದೆ. ಅನಂತರ ಬುದ್ಧಿವಂತಿಕೆ ಉಪಯೋಗಿಸಿದರೆ ನೀವು ಕಳೆದುಕೊಂಡಿರುವ ಪದಾರ್ಥಗಳನ್ನೆಲ್ಲಾ ಹಿಂದಕ್ಕೆ ಪಡೆಯುವುದು ಅತಿಸುಲಭ" ಎಂದ.

ಕುಳ್ಳನಿಂದ ತಮಗೆ ದೊರೆತ ಸಹಾಯಕ್ಕೆ ಅವರು ಅವನನ್ನು ಬಹಳವಾಗಿ ವಂದಿಸಿದರು. ಸೇಬಿನ ಹಣ್ಣಿನ ಮಹಾತ್ಮೆಯನ್ನು ಸ್ವತಃ ಅನುಭವದಿಂದ ಅರಿತುಕೊಂಡಿದ್ದ ಎರಡನೆಯ ಸೈನಿಕನೇ ಅದನ್ನು ರಾಜಕುಮಾರಿಯ ಮೇಲೆ ಪ್ರಯೋಗಿಸಬೇಕೆಂದು ತೀರ್ಮಾನವಾಯಿತು.

ಎರಡನೆಯ ಸೈನಿಕ ಒಬ್ಬ ತೋಟಗಾರನ ಮಗನಂತೆ ವೇಷ ಹಾಕಿಕೊಂಡು ರಾಜನ ಅರಮನೆಗೆ ಹೋಗಿ "ಮಾರುವುದಕ್ಕೆ ಒಳ್ಳೆಯ ಸೇಬುಗಳಿವೆ! ಇಂಥ ಹಣ್ಣುಗಳನ್ನು ಹಿಂದೆ ಯಾರೂ ಕಂಡಿರಲಿಲ್ಲ, ಮುಂದೆ ಕಾಣುವುದಿಲ್ಲ!" ಎಂದು ಕೂಗಿದ. ಅರಮನೆಯ ಒಳಗಿದವರೆಲ್ಲಾ ಆ ಹಣ್ಣುಗಳನ್ನು ಮೆಚ್ಚಿ ರುಚಿ ನೋಡಲು ಅಭಿಲಾಷೆಪಟ್ಟರು. ಆದರೆ ಅವನು ತಾನು ರಾಜಕುಮಾರಿಗೋಸ್ಕರ ಎಂದೇ ವಿಶೇಷ ಶ್ರಮ ವಹಿಸಿ ಅವುಗಳನ್ನು ತಂದಿದ್ದುದಾಗಿಯೂ ಅವಳೊಬ್ಬಳ ಹೊರತು ಇನ್ನಾರಿಗೂ ಅವನ್ನು ತಿನ್ನಲು ಯೋಗ್ಯತೆಯಿರಲಿಲ್ಲವೆಂದೂ ಹೇಳಿದ.

ಈ ವರ್ತಮಾನ ರಾಜಕುಮಾರಿಯ ಕಿವಿಗೆ ಬಿತ್ತು. ಅವಳು ಹಣ್ಣುಗಳನ್ನು ಕೊಂಡು ತರಲು ತನ್ನ ಸೇವಕಿಯನ್ನು ಕಳುಹಿಸಿದಳು. ಸೇವಕಿ ತಂದ ಹಣ್ಣುಗಳು ಕೆಂಪಗೆ ಮೃದುವಾಗಿ ಮಾಗಿದ್ದವು. ರಾಜಕುಮಾರಿ ಗಬಗಬನೆ ಹತ್ತು ಹನ್ನೆರಡು ಹಣ್ಣುಗಳನ್ನು ಒಂದೇ ಸಾರಿ ತಿಂದುಬಿಟ್ಟಳು. ತಿಂದುದೇ ತಡ—ಅವಳ ಮೂಗಿನಲ್ಲಿ ನವೆ ಆರಂಭವಾಯಿತು. ಮೂಗು ಬೆಳೆಯುತೊಡಗಿತು. ಸ್ವಲ್ಪ ಹೊತ್ತಿನಲ್ಲೇ ಅದು ಕಿಟಕಿಯ ಮೂಲಕ ಹೊರಗೆ ಹೋಗಿ ಅರಮನೆಯ ತೋಟವನ್ನು ದಾಟಿ ಊರಿನ ಬೀದಿಯಲ್ಲೆಲ್ಲಾ ಚಾಚಿಕೊಂಡಿತು.

ಮಗಳ ಸ್ಥಿತಿಯನ್ನು ನೋಡಿ ದೊರೆಗೆ ದಿಗ್ಭ್ರಮೆಯಾಯಿತು. ಅವನು ರಾಜಕುಮಾರಿಯ ಮೂಗನ್ನು ಸರಿಪಡಿಸಿದವರಿಗೆ ಉತ್ತಮವಾದ ಬಹುಮಾನ ದೊರೆಯುವುದೆಂದು ಊರಿನಲ್ಲೆಲ್ಲಾ ಡಂಗೂರ ಹೊಡೆಸಿದ. ಅನೇಕರು ಬಂದು ಏನೇನೋ ಮಾಡಿದರು. ಪ್ರಯೋಜನವಾಗಲಿಲ್ಲ.

ಆಗ ಎರಡನೆಯ ಸೈನಿಕ ಒಂದು ಮರೆಯಾದ ಸ್ಥಳಕ್ಕೆ ಹೋಗಿ, ತೋಟಗಾರನ ಉಡುಪನ್ನು ತೆಗೆದು ಹಾಕಿ, ವೈದ್ಯನಂತೆ ವೇಷ ಧರಿಸಿ, ಅರಮನೆಗೆ ಬಂದು ತಾನು ರಾಜಕುಮಾರಿಯ ಮೂಗನ್ನು ಸರಿಪಡಿಸುವುದಾಗಿ ತಿಳಿಸಿದ.

ರಾಜ ಆಗಬಹುದು ಎನ್ನಲು, ಸೈನಿಕ ರಾಜಕುಮಾರಿ ಇದ್ದ ಕೋಣೆಗೆ ಹೋಗಿ ಅವಳ ಮೂಗನ್ನು ಪರೀಕ್ಷಿಸುವವನ ಹಾಗೆ ನಟಿಸಿದ. ಅನಂತರ ಅವಳಿಗೆ ಇನ್ನೂ ಸ್ವಲ್ಪ ಶಿಕ್ಷೆ ಕೊಡಬೇಕೆಂಬ ಉದ್ದೇಶದಿಂದ

ತನ್ನ ಜೇಬಿನಲ್ಲೇ ಇಟ್ಟುಕೊಂಡು ಬಂದಿದ್ದ ಒಂದು ಸೇಬಿನ ಹಣ್ಣನ್ನು ಹೊರಕ್ಕೆ ತೆಗೆದು, ಒಂದು ಹೋಳು ಕತ್ತರಿಸಿ ಅವಳಿಗೆ ತಿನ್ನಿಸಿ, ಮಾರನೆಯ ದಿನ ಮತ್ತೆ ಬಂದು ನೋಡುವುದಾಗಿ ಹೇಳಿ ಹೊರಟು ಹೋದ.

ಮಾರನೆಯ ದಿನ ಅವನು ಬರುವ ಹೊತ್ತಿಗೆ ರಾಜಕುಮಾರಿ ಗಟ್ಟಿಯಾಗಿ ಅಳುತ್ತಾ ಮಲಗಿದ್ದಳು. ಏಕೆಂದರೆ ಅವಳ ಮೂಗು ಸರಿಹೋಗುವುದಕ್ಕೆ ಬದಲಾಗಿ ರಾತ್ರಿಯೆಲ್ಲಾ ಬೆಳೆದು ಹಿಂದಿನ ದಿನ ಇದ್ದುದಕ್ಕಿಂತಲೂ ಹೆಚ್ಚು ಉದ್ದವಾಗಿತ್ತು. ಆ ದಿನ ಸೈನಿಕ ಅವಳಿಗೆ ಒಂದು ಚೂರು ಅಂಜೂರವನ್ನು ಕೊಟ್ಟು "ನಾಳೆ ಬಂದು ನೋಡುತ್ತೇನೆ" ಎಂದು ಹೇಳಿ ಹೋದ.

ಮೂರನೆಯ ದಿನ ಅವನು ಅವಳನ್ನು ನೋಡಲು ಹೋದಾಗ ಮೂಗು ಸ್ವಲ್ಪ ಸಣ್ಣದಾಗಿತ್ತು; ಆದರೂ ಮೊದಲನೆಯ ದಿನ ಇದ್ದುದ ಕ್ಕಿಂತಲೂ ದೊಡ್ಡದಾಗಿತ್ತು.

ಆಗ ಅವನು ತನ್ನ ಮನಸ್ಸಿನಲ್ಲೇ "ಇವಳು ಮಾಟಗಾತಿ, ಬಹಳ ಉಪಾಯಗಾರಳು! ನಮ್ಮ ಪದಾರ್ಥಗಳನ್ನು ಸುಮ್ಮನೆ ಕೇಳಿದರೆ ಕೊಟ್ಟುಬಿಡುವವಳಲ್ಲ. ಇವಳನ್ನು ಇನ್ನೊಂದಿಷ್ಟು ಚೆನ್ನಾಗಿ ಹೆದರಿಸ ಬೇಕು!" ಎಂದು ಯೋಚಿಸಿ, ಮತ್ತೊಂದು ಹೋಳು ಸೇಬನ್ನು ಕತ್ತರಿಸಿ ಅವಳಿಗೆ ತಿನ್ನಿಸಿ, "ನಾಳೆ ಬರುತ್ತೇನೆ" ಎಂದು ಹೇಳಿ ಹೋದ.

ನಾಲ್ಕನೆಯ ದಿನ ಅವನು ಬಂದು ನೋಡುವ ವೇಳೆಗೆ ಮೂಗು ಮೊದಲಿದ್ದುದಕ್ಕಿಂತಲೂ ಹತ್ತರಷ್ಟು ಬೆಳೆದಿತ್ತು. ಅವನು ಆಶ್ಚರ್ಯ ಪಡುವವನಂತೆ ನಟಿಸುತ್ತ "ಅಮ್ಮ! ಯಾವುದೋ ದೈವಶಕ್ತಿ ನನಗೆ ವಿರೋಧವಾಗಿ ಕೆಲಸ ಮಾಡುತ್ತಿದೆ! ಇಲ್ಲದಿದ್ದರೆ ನನ್ನ ಔಷಧಿ ಹೀಗೆ ಉಪಯೋಗವಿಲ್ಲದೆ ಹೋಗುವುದು ಎಂದರೆ ಏನು! ಆದರೆ, ಆ ಶಕ್ತಿ ಏನೆಂಬುದನ್ನು ನಾನು ನನ್ನ ವಿದ್ಯೆಯ ಪ್ರಭಾವದಿಂದ ಕಂಡುಹಿಡಿದಿದ್ದೇನೆ. ನೀನು ಬೇರೆ ಯಾರಿಗೋ ಸೇರಿದ ಪದಾರ್ಥಗಳನ್ನು ಕದ್ದಿರಬೇಕು. ಅವು ನಿನ್ನ ಹತ್ತಿರವೇ ಇವೆಯೆಂದು ತೋರುತ್ತದೆ. ಅವನ್ನು ನೀನು ಅವರಿಗೆ ಹಿಂದಕ್ಕೆ ಕೊಟ್ಟಹೊರತು ನಾನು ನಿನ್ನ ಮೂಗನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ!" ಎಂದ.

ಅವಳು ಏನೂ ಅರಿಯದವಳಂತೆ ಮುಖ ಸಪ್ಪಗೆ ಮಾಡಿಕೊಂಡು ತನ್ನ ಹತ್ತಿರ ಬೇರೆಯವರ ವಸ್ತು ಯಾವುದೂ ಇಲ್ಲವೇ ಇಲ್ಲವೆಂದು ಖಂಡಿತವಾಗಿ ಹೇಳಿದಳು. ಅದಕ್ಕೆ ಅವನು "ಇದರ ಮೇಲೆ ನಿನ್ನ ಇಷ್ಟ! ಇದ್ದ ಸಂಗತಿ ಹೇಳಿದ್ದೇನೆ! ಒಪ್ಪಿಕೊಳ್ಳದಿದ್ದರೆ ಅನುಭವಿಸುವವಳು ನೀನು, ನಾನಲ್ಲ! ಹೀಗೆಯೇ ಇನ್ನೊಂದೆರಡು ದಿನ ಇದ್ದರೆ ನಿನಗೆ ಸಾವು ತಪ್ಪಿದ್ದಲ್ಲ!" ಎಂದು ಹೇಳಿ, ನೇರವಾಗಿ ರಾಜನ ಬಳಿಗೆ ಹೋಗಿ ಅವನಿಗೆ ಎಲ್ಲವನ್ನೂ ವಿಶದಪಡಿಸಿದ.

ರಾಜ ಅವಳು ಕದ್ದು ಮುಚ್ಚಿಟ್ಟುಕೊಂಡಿದ್ದ ಕಂಬಳಿಯನ್ನೂ ಹಣದ ಚೀಲವನ್ನೂ ಕೊಂಬನ್ನೂ ಹಿಂದಕ್ಕೆ ಕಳುಹಿಸಿಬಿಡಬೇಕೆಂದು ಮಗಳಿಗೆ ಕಟ್ಟಪ್ಪಣೆ ಮಾಡಿದ. ತಂದೆಯ ಮಾತನ್ನು ಮೀರಲಾರದೆ ರಾಜಕುಮಾರಿ ಸೇವಕಿಯನ್ನು ಕಳುಹಿಸಿ ಆ ಮೂರು ಪದಾರ್ಥಗಳನ್ನೂ ತರಿಸಿ, ಅವನ್ನು ವೈದ್ಯನ ಕೈಗೆ ಕೊಟ್ಟು ಅವು ಯಾರಿಗೆ ಸೇರಿದ್ದವೋ ಅವರಿಗೆ ತಲಪಿಸಬೇಕೆಂದು ಬೇಡಿಕೊಂಡಳು.

ಅವು ತನ್ನ ವಶಕ್ಕೆ ಬಂದ ಮೇಲೆ ವೈದ್ಯ ಒಂದು ಇಡಿ ಅಂಜೂರದ ಹಣ್ಣನ್ನು ಅವಳಿಗೆ ತಿನ್ನಲು ಕೊಟ್ಟ. ಅದನ್ನು ತಿನ್ನುತ್ತಿದ್ದಂತೆಯೇ ಅವಳ ಮೂಗು ಸರಿಹೋಯಿತು.

ಅನಂತರ ಅವನು ತನ್ನ ಹೆಗಲ ಮೇಲೆ ಕಂಬಳಿಯನ್ನು ಹೊದ್ದುಕೊಂಡು ರಾಜನಿಗೂ ಅವನ ಪರಿವಾರದವರಿಗೂ "ಹೋಗಿಬರುತ್ತೇನೆ" ಎಂದು ಹೇಳಿ ಕ್ಷಣಮಾತ್ರದಲ್ಲಿ ತನ್ನ ಗೆಳೆಯರು ಇನ್ನಿಬ್ಬರು ಸೈನಿಕರು ಇದ್ದ ಸ್ಥಳಕ್ಕೆ ಬಂದ. ಅಲ್ಲಿಂದ ಅವರೆಲ್ಲರೂ ತಮ್ಮ ಕೋಟೆಯ ಮನೆಯನ್ನು ಸೇರಿ, ಒಂದು ತೊಂದರೆಯೂ ಇಲ್ಲದೆ, ಯಾವ ಗೋಜಿಗೂ ಹೋಗದೆ ಸುಖವಾಗಿದ್ದರು. ಬೇಜಾರಾದಾಗ ಮಾತ್ರ ತಮ್ಮ ಬಿಳಿಯ ಕುದುರೆಗಳನ್ನು ಹೂಡಿದ್ದ ಗಾಡಿಯಲ್ಲಿ ಕುಳಿತು ಸಂಚಾರ ಹೊರಡುವುದು ಅವರ ವಾಡಿಕೆಯಾಗಿತ್ತು.

# ಎತ್ತಿಗೆ ನರಿ ಮಾಡಿದ ಸಹಾಯ

ಒಬ್ಬ ರೈತನ ಹತ್ತಿರ ನಾಲ್ಕಾರು ಜೊತೆ ಎತ್ತುಗಳಿದ್ದವು. ಅವುಗಳಲ್ಲಿ ಒಂದು ಎತ್ತು ಕರುವಾಗಿದ್ದಾಗಿನಿಂದಲೂ ಅವನ ಮನೆಯಲ್ಲೇ ಬೆಳೆದು ಅವನಿಗಾಗಿ ದುಡಿದು ಮುದಿಯಾಗಿತ್ತು. ಮುಪ್ಪು ಹೆಚ್ಚಾದ ಹಾಗೆಲ್ಲಾ ಆ ಎತ್ತಿನ ಶಕ್ತಿ ಕಡಿಮೆಯಾಗುತ್ತಾ ಬಂತು. ಕೊನೆಗೆ ಅದರಿಂದ ಯಾವ ಕೆಲಸವೂ ಸಾಗದಂತಾಯಿತು. ಕೆಲಸ ಮಾಡದ ಪ್ರಾಣಿಗೆ ಏಕೆ ಅನ್ಯಾಯ ವಾಗಿ ಕೂಳು ಹಾಕಬೇಕು ಎಂದು ಆ ಕಟುಕಿ ರೈತ ಯೋಚಿಸಿ, ಅದನ್ನು ಕೊಟ್ಟಿಗೆಯಿಂದ ಓಡಿಸಿಬಿಟ್ಟ. "ಹುಲಿಯ ಹಾಗೆ ಗಟ್ಟಿಮುಟ್ಟಾಗಿ ಬಲಶಾಲಿಯಾಗಿ ಹಿಂದಿರುಗಿದರೆ, ಮತ್ತೆ ನಿನ್ನನ್ನು ಮನೆಗೆ ಸೇರಿಸುತ್ತೇನೆ. ಇಲ್ಲದಿದ್ದರೆ ಎಲ್ಲಾದರೂ ಹಾಳಾಗಿಹೋಗು!" ಎಂದು ಅದಕ್ಕೆ ಹೇಳಿದ.

ಪಾಪ! ಆ ಬಡಪಾಯಿ ಮುದಿ ಎತ್ತು ಏನು ಮಾಡುವುದಕ್ಕೂ ತೋಚದೆ ಕಾಡಿಗೆ ಹೋಗಿ ಅತ್ತಿಂದಿತ್ತ ಮರಗಳ ಮಧ್ಯೆ ಸುತ್ತಾಡುತ್ತಿತ್ತು. ಮಳೆ ಬಂದರೆ ಅಥವಾ ಚಳಿಯಾದರೆ ಬೆಚ್ಚಗೆ ಮಲಗಲು ಕೂಡ ಅದಕ್ಕೆ ಒಂದಿಷ್ಟು ಸ್ಥಳವಿರಲಿಲ್ಲ. ತನ್ನ ಹಿಂದಿನ ಜೀವನವನ್ನೂ ಈಗಿನ ಗತಿಯನ್ನೂ ರೈತನ ನಿರ್ದಯೆಯನ್ನೂ ನೆನೆದು ಅದರ ಎರಡು ಕಣ್ಣು ಗಳಲ್ಲೂ ಗಳಗಳನೆ ನೀರುಕ್ಕಿತು.

ಅಷ್ಟು ಹೊತ್ತಿಗೆ ಅದೃಷ್ಟವಶಾತ್ ಅಲ್ಲಿಗೆ ಒಂದು ನರಿ ಬಂತು. ಅದು ಎತ್ತನ್ನು ನೋಡಿ, "ಸ್ನೇಹಿತನೆ, ಏನು ಸಮಾಚಾರ? ಹೀಗೇಕೆ ತಲೆ ತಗ್ಗಿಸಿಕೊಂಡು ವ್ಯಸನದಿಂದ ಇದ್ದೀಯ?" ಎಂದಿತು. ಎತ್ತು "ಅಯ್ಯೋ, ಏನು ಹೇಳಲಿ? ಜಿಪುಣರಿಗೆ ನ್ಯಾಯ ಅನ್ಯಾಯ ಎರಡೂ ಒಂದೇ! ನಾನು ಇಷ್ಟು ವರ್ಷಗಳೂ ತನಗಾಗಿ ದುಡಿದದ್ದನ್ನೆಲ್ಲಾ ನನ್ನ ಯಜಮಾನ ಮರೆತುಬಿಟ್ಟಿದ್ದಾನೆ. ನನಗೆ ಈಗ ಕೆಲಸ ಮಾಡಲು ಶಕ್ತಿ

ಇಲ್ಲದ್ದರಿಂದ ನನ್ನನ್ನು ಅಟ್ಟಬಿಟ್ಟಿದ್ದಾನೆ. ಹುಲಿಯ ಹಾಗೆ ಬಲಶಾಲಿಯಾದ ಹೊರತು ನಾನು ಮತ್ತೆ ಅವನ ಮನೆಗೆ ಕಾಲಿಡಕೂಡದಂತೆ. ನಾನು ಹುಲಿಯ ಹಾಗೆ ಆಗುವುದು ಎಂದಿಗಾದರೂ ಸಾಧ್ಯವಾದೀತೆ? ಏನು ಮಾಡಲಿ, ನಾನೀಗ?" ಎಂದು ತನ್ನ ಕಷ್ಟವನ್ನು ಹೇಳಿಕೊಂಡು ಗೊಳೋ ಎಂದು ರೋದಿಸಿತು.

ಎತ್ತಿನ ಮಾತುಗಳನ್ನು ಕೇಳಿ ನರಿಗೆ ಬಹಳ ಕನಿಕರ ಹುಟ್ಟಿತು. ಅದು ಎತ್ತನ್ನು ಕುರಿತು "ಇಷ್ಟಕ್ಕೆಲ್ಲಾ ನೀನೇಕೆ ಚಿಂತಿಸುತ್ತೀಯ? ಸಂತೋಷದಿಂದಿರು. ನಾನು ನಿನಗೆ ಸಹಾಯ ಮಾಡುತ್ತೇನೆ. ಅದೋ ನೋಡು—ಅಲ್ಲಿ ಅಲುಗಾಡದೆ ಸುಮ್ಮನೆ ಬಿದ್ದುಕೊಂಡು ಸತ್ತವನ ಹಾಗೆ ನಟಿಸು" ಎಂದಿತು.

ಎತ್ತು ನರಿ ಹೇಳಿದ ಹಾಗೆಯೇ ಮಾಡಿತು.

ನರಿ ಅಲ್ಲಿಂದ ನೇರವಾಗಿ ಹುಲಿಯ ಹತ್ತಿರಕ್ಕೆ ಹೋಗಿ, "ಇಲ್ಲೊಂದು ಎತ್ತು ಸತ್ತುಬಿದ್ದಿದೆ. ಒಳ್ಳೆ ದೊಡ್ಡ ದೇಹ! ಎರಡು ದಿನವಾದರೂ ಪಟ್ಟಾಗಿ ಹೊಟ್ಟೆ ಬಿರಿಯುವವರೆಗೂ ತಿನ್ನಬಹುದು!" ಎಂದಿತು.

ಹುಲಿಗೆ ಬಹಳ ಆನಂದವಾಯಿತು. ಅದು ಕೂಡಲೆ ಎತ್ತು ಬಿದ್ದಿದ್ದ ಸ್ಥಳಕ್ಕೆ ಹೊರಟಿತು. ಅವೆರಡೂ ಆ ಸ್ಥಳವನ್ನು ಸೇರಿದಾಗ ನರಿ ಹುಲಿಯ ಕಡೆ ತಿರುಗಿ, "ಇಲ್ಲಿ ಇತರ ಪ್ರಾಣಿಗಳ ಗಲಭೆ ಬಹಳ. ನಿರಾತಂಕವಾಗಿ ಎತ್ತನ್ನು ತಿನ್ನುವುದಕ್ಕೆ ಆಗುವುದಿಲ್ಲ. ನಾನು ಒಂದು ಉಪಾಯ ಹೇಳುತ್ತೇನೆ, ಕೇಳು. ಅದರ ಬಾಲವನ್ನು ನಿನ್ನ ಹಿಂಗಾಲಿಗೆ ಬಲವಾಗಿ ಕಟ್ಟುತ್ತೇನೆ. ಆಗ ನೀನು ಅದನ್ನು ಸುಲಭವಾಗಿ ನಿನ್ನ ಗುಹೆಗೇ ಎಳೆದು ಕೊಂಡು ಹೋಗಿ ತಿನ್ನಬಹುದು" ಎಂದಿತು.

ಈ ಸಲಹೆ ಬಹಳ ಸಾಧುವಾದುದೆಂದು ಹುಲಿಗೆ ತೋರಿತು. ಅದು ಎತ್ತಿನ ಬಾಲವನ್ನು ತನ್ನ ಕಾಲಿಗೆ ಬಿಗಿದು ಕಟ್ಟಲು ನರಿಗೆ ಅನುಕೂಲವಾಗಲೆಂದು ನೆಲದ ಮೇಲೆ ಮಗ್ಗುಲಾಗಿ ಮಲಗಿಕೊಂಡಿತು. ನರಿ ಮೆಲ್ಲನೆ ಹುಲಿಯ ಕಾಲುಗಳೆಲ್ಲಕ್ಕೂ ಬಲವಾಗಿ ಕಾಡಿನ ಬಳ್ಳಿಗಳನ್ನು ಬಿಗಿದು ಅವನ್ನು ಎತ್ತಿನ ಕಾಲಿಗೆ ಕಟ್ಟಿ "ಎದ್ದು ಬಿದ್ದು ಓಡು! ಓಡಿ ಮನೆಗೆ ನೋಡು!" ಎಂದು ಕೂಗಿತು.

ಎತ್ತು ತಕ್ಷಣ ಮೇಲಕ್ಕೆ ನೆಗೆದು ಹುಲಿಯನ್ನೂ ಎಳೆದುಕೊಂಡು ಓಡಿತು. ಹುಲಿ ಕೋಪದಿಂದ ಅಬ್ಬರಿಸಿತು. ಅದರ ಗರ್ಜನೆಗೆ ಅರಣ್ಯದಲ್ಲಿದ್ದ ಪಕ್ಷಿಗಳೆಲ್ಲಾ ಹೆದರಿ ಹಾರಿಹೋದವು. ಎತ್ತು ಮಾತ್ರ ಸ್ವಲ್ಪವೂ ಹಿಂಜರಿಯದೆ ಅದನ್ನು ಎಳೆದುಕೊಂಡು ಓಡಿ ತನ್ನ ಯಜಮಾನನಾಗಿದ್ದ ರೈತನ ಮನೆಯ ಮುಂದೆ ಬಂದು ನಿಂತು, "ಒಡೆಯನೆ, ಇಲ್ಲಿ ನೋಡು! ಹುಲಿಯನ್ನು ಹಿಡಿದುತಂದಿದ್ದೇನೆ!" ಎಂದು ಕೂಗಿತು.

ರೈತ ಹೊರಕ್ಕೆ ಬಂದು ನೋಡಿದಾಗ ತನ್ನ ಕಣ್ಣನ್ನು ತಾನೇ ನಂಬದೆ ಹೋದ. ಇಂಥ ರಾಜಎತ್ತಿಗೆ ಎಂಥ ತೊಂದರೆ ಕೊಟ್ಟೆನಲ್ಲಾ ಎಂದು ಅವನು ಪಶ್ಚಾತ್ತಾಪದಿಂದ ಮರುಗಿದ. ನೆರೆಹೊರೆಯವರೆಲ್ಲಾ ಸೇರಿ ಹುಲಿಯನ್ನು ದೊಣ್ಣೆಗಳಿಂದ ಹೊಡೆದು ಕೊಂದರು. ಆ ಮುದಿ ಎತ್ತಿಗೆ ಅಂದಿನಿಂದ ದನದ ಕೊಟ್ಟಿಗೆಯಲ್ಲಿ ಅತಿಶಯವಾದ ಮರ್ಯಾದೆ ದೊರೆಯಿತು.

# ಒಕ್ಕಣ್ಣು, ಇಕ್ಕಣ್ಣು, ಮುಕ್ಕಣ್ಣು

ಒಬ್ಬ ಹೆಂಗಸಿಗೆ ಮೂವರು ಹೆಣ್ಣುಮಕ್ಕಳಿದ್ದರು. ಅವರಲ್ಲಿ ದೊಡ್ಡವಳಿಗೆ ಹಣೆಯ ಮಧ್ಯೆ ಒಂದೇ ಒಂದು ಕಣ್ಣಿತ್ತು. ಎರಡನೆಯವಳಿಗೆ ಎಲ್ಲರಂತೆ ಎರಡು ಕಣ್ಣುಗಳಿದ್ದವು. ಕಿರಿಯವಳಿಗೆ ಮೂರು ಕಣ್ಣುಗಳಿದ್ದವು. ಮೂರನೆಯ ಕಣ್ಣು ಅವಳಿಗೂ ಹಣೆಯ ನಡುವೆ ಇತ್ತು. ಈ ಕಾರಣದಿಂದ ಅವರಿಗೆ ಕ್ರಮವಾಗಿ ಒಕ್ಕಣ್ಣಿನವಳು, ಇಕ್ಕಣ್ಣಿನವಳು, ಮುಕ್ಕಣ್ಣಿನವಳು ಎಂದು ಹೆಸರುಗಳು ಬಂದಿದ್ದವು. ಇಕ್ಕಣ್ಣಿನವಳಿಗೆ ಸಾಮಾನ್ಯ ಜನಗಳಂತೆಯೇ ಎರಡೇ ಕಣ್ಣುಗಳಿದ್ದುದರಿಂದ ಅವಳ ತಾಯಿಗೂ ಅಕ್ಕತಂಗಿಯರಿಗೂ ಅವಳನ್ನು ಕಂಡರೆ ಆಗುತ್ತಿರಲಿಲ್ಲ. ಅವಳನ್ನು ಕಂಡಾಗಲೆಲ್ಲಾ ಅವರು "ನೀನು ಸರ್ವೇಸಾಧಾರಣರಾದ ಜನರಿಗಿಂತಲೂ ಏನೂ ಹೆಚ್ಚಿನವಳಲ್ಲ. ಅವರಿಗಿರುವಷ್ಟು ಕಣ್ಣುಗಳೇ ನಿನಗೂ ಇವೆ. ನೀನು ನಮ್ಮ ಜೊತೆಯಲ್ಲಿ ಇರಲು ಯೋಗ್ಯಳಲ್ಲ" ಎಂದು ಬೈದಾಡಿ ಅತ್ತಿಂದಿತ್ತ ನೂಕುತ್ತಿದ್ದರು. ಅವರು ಉಂಡು ಬಿಟ್ಟಿದ್ದನ್ನು ಅವಳು ತಿನ್ನಬೇಕಾಗಿತ್ತು. ಅವರು ಉಟ್ಟುಬಿಟ್ಟ ಹಳೆಯ ಬಟ್ಟೆಗಳನ್ನು ಅವಳು ಉಡಬೇಕಾಗಿತ್ತು. ಹೀಗೆ ಮನೆಯಲ್ಲಿ ಅವಳು ಬಹಳ ಹಿಂಸೆಗೆ ಗುರಿಯಾಗಿದ್ದಳು.

ಪ್ರತಿದಿವಸವೂ ಇಕ್ಕಣ್ಣಿನವಳು ಅವರ ಮನೆಯಲ್ಲಿದ್ದ ಹಸುವಿನ ಕರುವನ್ನು ಕಾಡಿಗೆ ಹೊಡೆದುಕೊಂಡು ಹೋಗಿ ಮೇಯಿಸಿಕೊಂಡು ಬರುತ್ತಿದ್ದಳು. ಒಂದು ದಿನ ಅವಳಿಗೆ ಬಹಳ ಹಸಿವಾಯಿತು. ಮನೆಯಲ್ಲಿ ಅಕ್ಕತಂಗಿಯರು ಕೊಟ್ಟ ಆಹಾರ ಅವಳಿಗೆ ಸಾಕಾಗಿರಲಿಲ್ಲ. ಆದ್ದರಿಂದ ಅವಳು ಮರಗಳ ನೆರಳಿನಲ್ಲಿದ್ದ ಒಂದು ಬಂಡೆಯ ಮೇಲೆ ಕುಳಿತು ಗಟ್ಟಿಯಾಗಿ ಅಳತೊಡಗಿದಳು. ಅವಳ ಕಣ್ಣುಗಳಿಂದ ಎರಡು

ಪುಟ್ಟ ಹೊಳೆಗಳು ಕೆಳಕ್ಕೆ ಹರಿದವು. ಅಳುತ್ತಾ ಹಾಗೆಯೇ ಒಂದು ಸಾರಿ ಅವಳು ಕತ್ತನ್ನು ಮೇಲಕ್ಕೆ ಎತ್ತಿದಳು. ಪಕ್ಕದಲ್ಲಿ ಒಬ್ಬ ಹೆಂಗಸು ನಿಂತಿದ್ದಳು. ಅವಳು "ಇಕ್ಕಣ್ಣಿನವಳೆ, ಏಕೆ ಅಳುತ್ತಿದ್ದೀಯ?" ಎಂದು ಕೇಳಿದಳು.

ಇಕ್ಕಣ್ಣಿನವಳು "ಅಳದೆ ಇನ್ನೇನು ಮಾಡಲಿ? ಇತರರ ಹಾಗೆ ನನಗೂ ಎರಡೇ ಕಣ್ಣುಗಳಿರುವುದೇ ನನ್ನ ಅಪರಾಧವಾಗಿಬಿಟ್ಟಿದೆ. ಅದನ್ನು ನೋಡಿ ನನ್ನ ತಾಯಿಗೂ ಅಕ್ಕತಂಗಿಯರಿಗೂ ಸಹನೆಯೇ ಇಲ್ಲ. ಅವರು ನನ್ನನ್ನು ಮೂಲೆಯಿಂದ ಮೂಲೆಗೆ ಗುದ್ದಿ ನೂಕಾಡುತ್ತಾರೆ. ಕಸಕಡ್ಡಿಯನ್ನೆಲ್ಲಾ ನನ್ನ ಮೇಲೆ ಎಸೆಯುತ್ತಾರೆ. ತಾವು ತಿಂದು ಚೂರುಪಾರು ಏನಾದರೂ ಮಿಕ್ಕಿದ್ದರೆ ಅದನ್ನು ನನಗೆ ತಿನ್ನಲು ಕೊಡುತ್ತಾರೆ. ಈ ದಿವಸ ನಾನು ತಿಂದದ್ದು ಒಂದು ಸಾರಿ ಬಾಯಿಗೆ ಹಾಕಿಕೊಳ್ಳುವಷ್ಟು ಕೂಡ ಇರಲಿಲ್ಲ. ಹಸಿವಿನಿಂದ ಉಸಿರೇ ಹೊರಡದ ಹಾಗೆ ಆಗಿದೆ" ಎಂದಳು.

ಇದಕ್ಕೆ ಆ ಹೆಂಗಸು "ಇಕ್ಕಣ್ಣಿನವಳೆ, ಅಳಬೇಡ; ಮುಖ ಒರಸಿಕೊ. ಇನ್ನು ಮೇಲೆ ನೀನು ಹಸಿವಿನಿಂದ ನರಳದ ಹಾಗೆ ಒಂದು ಉಪಾಯ ಹೇಳಿಕೊಡುತ್ತೇನೆ. ಹಸಿವಾದಾಗಲೆಲ್ಲಾ ನೀನು ನಿನ್ನ ಹಸುವಿನ ಕರುವಿನ ಎದುರಿಗೆ ನಿಂತು,

'ಆಕಳ ಕರುವೇ, ಮೆಲುಕನು ಹಾಕು,<br>
ತಟ್ಟೆಯೆ, ತಿನ್ನಲು ಅನ್ನವು ಬೇಕು'

ಎಂದರೆ ಕೂಡಲೆ ಒಳ್ಳೆಯ ಆಹಾರ ತುಂಬಿದ ತಟ್ಟೆ ನಿನ್ನ ಮುಂದೆ ಬರುತ್ತದೆ. ನೀನು ಬೇಕಾದಷ್ಟನ್ನು ತಿನ್ನಬಹುದು. ಹೊಟ್ಟೆ ತುಂಬಿದ ಮೇಲೆ ಮತ್ತೆ

'ಆಕಳ ಕರುವೇ, ಮೆಲುಕನು ಹಾಕು,<br>
ತಟ್ಟೆಯೆ, ಇನ್ನೆನಗನ್ನವು ಸಾಕು'

ಎಂದರೆ ತಟ್ಟೆ ನಿನ್ನ ಕಣ್ಣೆದುರಿಗೇ ಮಾಯವಾಗುತ್ತದೆ" ಎಂದು ಹೇಳಿ ಹೊರಟುಹೋದಳು.

ಇಕ್ಕಣ್ಣಿನವಳು "ಆಕೆ ಹೇಳಿದುದು ನಿಜವೋ ಸುಳ್ಳೋ ಈಗಲೇ ಪರೀಕ್ಷೆ ಮಾಡಿ ನೋಡಿಬಿಡಬೇಕು" ಎಂದುಕೊಂಡು,

'ಆಕಳ ಕರುವೇ, ಮೆಲುಕನು ಹಾಕು,
ತಟ್ಟೆಯೆ, ತಿನ್ನಲು ಅನ್ನವು ಬೇಕು'

ಎಂದು ಮೆಲ್ಲನೆ ಹಾಡಿದಳು. ಅವಳು ಹಾಗೆಂದುದೇ ತಡ, ಅವಳ ಎದುರಿಗೆ ಸೊಗಸಾದ ಬಿಸಿಬಿಸಿಯಾದ ಊಟದ ಪದಾರ್ಥಗಳು ತುಂಬಿದ್ದ ಒಂದು ಬೆಳ್ಳಿಯ ತಟ್ಟೆ ಎಲ್ಲಿಂದಲೋ ಬಂದು ಕುಳಿತುಕೊಂಡಿತು. ಅದರ ಮೇಲೆ ಚೊಕ್ಕಟವಾದ ಬಿಳಿಯ ವಸ್ತ್ರದ ಹೊದ್ದಿಕೆಯಿತ್ತು.

ಇಕ್ಕಣ್ಣಿನವಳ ಸಂತೋಷ ಹೇಳತೀರದು. ಅವಳು ಮನಸ್ಸಿನಲ್ಲೇ ದೇವರನ್ನು ವಂದಿಸಿ, ಹೊಟ್ಟೆ ತುಂಬುವವರೆಗೂ ತಟ್ಟೆಯಲ್ಲಿದ್ದುದನ್ನು ತಿಂದಳು. ಸ್ವಲ್ಪ ಹೊತ್ತಿನಲ್ಲೇ ಅವಳ ಹೊಟ್ಟೆ ಬಿರಿಯುವಂತಾಗಿ ತೇಗು ಬಂದಿತು. ಅವಳು "ಈವತ್ತು ಇನ್ನು ಹೆಚ್ಚಿಗೆ ತಿನ್ನಬಾರದು" ಎಂದು ಕೊಂಡು,

'ಆಕಳ ಕರುವೇ, ಮೆಲುಕನು ಹಾಕು,
ತಟ್ಟೆಯೆ, ಇನ್ನೆನಗನ್ನವು ಸಾಕು'

ಎಂದಳು. ತಟ್ಟೆ ಮಾಯವಾಯಿತು. ಇಕ್ಕಣ್ಣಿನವಳ ಮುಖ ಆನಂದ ದಿಂದ ಅರಳಿತು. "ಇನ್ನು ನನಗೆ ಯಾವ ಕಷ್ಟವೂ ಇರಲಾರದು" ಎಂದು ಅವಳು ಒಂದು ಸಾರಿ ಗಿರ್ರನೆ ತಿರುಗಿ ಕುಣಿದಳು.

ಸಾಯಂಕಾಲ ಅವಳು ಕರುವಿನೊಡನೆ ಮನೆಗೆ ಹಿಂತಿರುಗುವ ಹೊತ್ತಿಗೆ ಅವಳ ಅಕ್ಕತಂಗಿಯರು ಒಂದೆರಡು ಚೂರು ಸೀಕಲು ರೊಟ್ಟಿ ಯನ್ನು ಅವಳಿಗೆ ಎಂದು ಮಣ್ಣಿನ ತಟ್ಟೆಯಲ್ಲಿ ಒಂದುಕಡೆ ಇಟ್ಟಿದ್ದರು. ಅವಳು ಅದನ್ನು ಮುಟ್ಟಲೇ ಇಲ್ಲ. ಮಾರನೆಯ ದಿನ ಬೆಳಗ್ಗೆ ಅವರು ಬೇರೆ ಇಟ್ಟಿದ್ದ ಚೂರುಗಳನ್ನೂ ಹಾಗೆಯೇ ಬಿಟ್ಟು ಕರುವಿನ ಜೊತೆಯಲ್ಲಿ ಕಾಡಿಗೆ ಹೊರಟು ಹೋದಳು. ಮೊದಲನೆಯ ಸಾರಿಯೂ ಎರಡನೆಯ ಸಾರಿಯೂ ಇದು ಅವಳ ಅಕ್ಕತಂಗಿಯರ ಕಣ್ಣಿಗೆ ಬೀಳಲಿಲ್ಲ. ಪ್ರತಿ ಸಾರಿಯೂ ಹೀಗೆಯೇ ಆಗಲು ಅವರು "ಇಕ್ಕಣ್ಣಿನವಳಿಗೆ ಮೈಯಲ್ಲಿ

ಸರಿಯಾಗಿಲ್ಲವೋ ಏನೊ! ಏನನ್ನೂ ಮುಟ್ಟುವುದೇ ಇಲ್ಲ. ಮೊದಲು ಏನು ಕೊಟ್ಟರೂ ತಿನ್ನುತ್ತಿದ್ದಳು. ಇನ್ನಾವ ರೀತಿಯಲ್ಲಾದರೂ ಆಹಾರ ಸಂಪಾದಿಸುವ ಗುಟ್ಟು ಏನಾದರೂ ಕಲಿತಿದ್ದಾಳೆಯೋ?" ಎಂದು ತಮ್ಮ ತಮ್ಮಲ್ಲೇ ಮಾತಾಡಿಕೊಂಡರು. ಕಡೆಗೆ ಅವರ ಕುತೂಹಲ ಹೆಚ್ಚಿತು. ಒಕ್ಕಣ್ಣಿನವಳು ತಾನೂ ಅವಳೊಡನೆ ಕಾಡಿಗೆ ಹೋಗಿ, ಅವಳ ಓಡಾಟ ವನ್ನೆಲ್ಲಾ ಗಮನಿಸಿ, ಯಾರಾದರೂ ಅವಳಿಗೆ ಆಹಾರ ತಂದುಕೊಡುವ ರೇನೋ ಕಂಡು ಹಿಡಿಯುವುದಾಗಿ ನಿಶ್ಚಯಿಸಿದಳು.

ಮೂರನೆಯ ದಿನ ಇಕ್ಕಣ್ಣಿನವಳು ಕರುವಿನ ಹಿಂದೆ ಕಾಡಿಗೆ ಹೋಗಲು ಸಿದ್ಧವಾದಾಗ ಒಕ್ಕಣ್ಣಿನವಳು ಅವಳ ಬಳಿಗೆ ಹೋಗಿ "ಈ ದಿನ ನಾನೂ ನಿನ್ನ ಜೊತೆಯಲ್ಲಿ ಕಾಡಿಗೆ ಬರುತ್ತೇನೆ. ಇಬ್ಬರೂ ಸೇರಿ ಕರುವನ್ನು ಚೆನ್ನಾಗಿ ಮೇಯಿಸಿಕೊಂಡು ಬರೋಣ" ಎಂದಳು.

ಒಕ್ಕಣ್ಣಿನವಳ ದುರುದ್ದೇಶ ಇಕ್ಕಣ್ಣಿನವಳಿಗೆ ಅರ್ಥವಾಯಿತು. ಅವಳು ಕರುವನ್ನು ಉದ್ದವಾಗಿ ಬೆಳೆದಿದ್ದ ಹುಲ್ಲಿನ ಮಧ್ಯೆ ಹೊಡೆದು ಕೊಂಡು ಹೋಗಿ "ಒಕ್ಕಣ್ಣಿನವಳೆ, ಬಾ, ಇಲ್ಲಿ ತಣ್ಣಗಿದೆ, ಕುಳಿತು ಕೊಳ್ಳೋಣ; ಕರು ತನ್ನ ಪಾಡಿಗೆ ತಾನು ಮೇಯುತ್ತಿರುತ್ತದೆ. ಅಷ್ಟರಲ್ಲಿ ನಾನು ನಿನಗೊಂದು ಹಾಡು ಹೇಳುತ್ತೇನೆ, ಎಂದಳು.

ಕಾಡಿನಲ್ಲಿ ನಡೆದು ಅಭ್ಯಾಸವಿಲ್ಲದಿದ್ದುದರಿಂದ ಒಕ್ಕಣ್ಣಿನವಳಿಗೆ ಬಹಳ ಆಯಾಸವಾಗಿತ್ತು. ಬಿಸಿಲು ಜೋರಾಗಿತ್ತು. ಆದ್ದರಿಂದ ಅವಳು ಹುಲ್ಲಿನ ಮೇಲೆ ತಲೆಯಿಟ್ಟು ಮಲಗಿದಳು. ಇಕ್ಕಣ್ಣಿನವಳು

'ಒಕ್ಕಣ್ಣೆ, ಒಕ್ಕಣ್ಣೆ, ಮಲಗುಮಲಗೆಲೆ ಕಣ್ಣೆ,
ಮಲಗು ಬೇಗನೆ ಕಣ್ಣೆ, ಮಲಮಲಗು ಒಕ್ಕಣ್ಣೆ'

ಎಂದು ಹಾಡಿದಳು. ಒಕ್ಕಣ್ಣಿನವಳಿಗೆ ಗಾಢವಾದ ನಿದ್ದೆ ಬಂತು. ಅವಳ ಕಣ್ಣಿನ ರೆಪ್ಪೆಗಳು ಅಂಟುಹಾಕಿದಂತೆ ಮುಚ್ಚಿಕೊಂಡವು. ಆಮೇಲೆ ಏನು ನಡೆಯಿತೆಂದು ಅವಳಿಗೆ ಗೊತ್ತಾಗಲೇ ಇಲ್ಲ. ಕೂಡಲೆ ಇಕ್ಕಣ್ಣಿನವಳು

'ಆಕಳ ಕರುವೇ, ಮೆಲುಕನು ಹಾಕು,
ತಟ್ಟೆಯು, ತಿನ್ನಲು ಅನ್ನವು ಬೇಕು'

ಎಂದು ಮೆಲ್ಲನೆ ಹಾಡಿದಳು. ತಕ್ಷಣ ತಿಂಡಿಯ ಪದಾರ್ಥಗಳು ತುಂಬಿದ್ದ ತಟ್ಟೆ ಅವಳ ಎದುರಿಗೆ ಬಂದಿತು. ಅವಳು ತನಗೆ ಬೇಕಾದಷ್ಟನ್ನು ತಿಂದು ತೃಪ್ತಿಯಾದಮೇಲೆ

'ಆಕಳ ಕರುವೇ, ಮೆಲುಕನು ಹಾಕು,
ತಟ್ಟೆಯೆ, ಇನ್ನೆನಗನ್ನವು ಸಾಕು'

ಎಂದಳು. ಅವಳು ಹಾಗೆನ್ನುತ್ತಿದ್ದಂತೆಯೇ ಎಲ್ಲಾ ಮಾಯವಾಯಿತು.

ಅನಂತರ ಇಕ್ಕಣ್ಣಿನವಳು ಒಕ್ಕಣ್ಣಿನವಳನ್ನು ಎಬ್ಬಿಸಿ "ಒಕ್ಕಣ್ಣಿನವಳೆ, ಬಹಳ ಚೆನ್ನಾಗಿ ಕಾವಲಿರುತ್ತೀಯ! ನೀನು ಹೀಗೆ ನಿದ್ದೆಮಾಡುತ್ತಿದ್ದರೆ ಕರು ಎಲ್ಲಿಗಾದರೂ ನುಣುಚಿಕೊಂಡು ಹೋಗುವುದು ಖಂಡಿತ! ಹೊತ್ತಾಯಿತು, ನಡೆ, ಮನೆಗೆ ಹೋಗೋಣ" ಎಂದಳು.

ಇಬ್ಬರೂ ಮನೆಗೆ ಹೋದರು. ಇಕ್ಕಣ್ಣಿನವಳು ಆ ದಿವಸವೂ ಮನೆಯಲ್ಲಿ ಒಂದು ತುಣುಕು ಆಹಾರವನ್ನೂ ಬಾಯಿಗೆ ಹಾಕಲಿಲ್ಲ. ಅವಳು ಏಕೆ ಹೀಗೆ ಮಾಡುತ್ತಿದ್ದಳು ಎಂದು ತಾಯಿಗೆ ಹೇಳಲು ಒಕ್ಕಣ್ಣಿನವಳಿಗೆ ಆಗಲಿಲ್ಲ. ಅವಳು "ಅಮ್ಮಾ, ನನಗೆ ನಿದ್ದೆ ಬಂದುಬಿಟ್ಟಿತು. ಏನಾಯಿತೆಂದು ಹೇಗೆ ಹೇಳಲಿ?" ಎಂದುಬಿಟ್ಟಳು.

ಮಾರನೆಯ ದಿನ ಅವರ ತಾಯಿ ಮುಕ್ಕಣ್ಣಿನವಳನ್ನು ಕೂಗಿ "ಈ ದಿವಸ ನೀನು ಹೋಗಿ ಇಕ್ಕಣ್ಣಿನವಳಿಗೆ ಯಾರಾದರೂ ತಿಂಡಿಯನ್ನು ತಂದು ಕೊಡುತ್ತಾರೆಯೇನೋ ತಿಳಿದು ಬರಬೇಕು. ಯಾರೋ ಅವಳಿಗೆ ಗುಟ್ಟಾಗಿ ಆಹಾರ ಒದಗಿಸುತ್ತ ಇರಲೇ ಬೇಕು. ಇಲ್ಲದಿದ್ದರೆ ಅವಳು ಹೀಗೇಕೆ ಆಗುತ್ತಿದ್ದಳು?" ಎಂದಳು.

ಮುಕ್ಕಣ್ಣಿನವಳು ಇಕ್ಕಣ್ಣಿನವಳ ಹತ್ತಿರಕ್ಕೆ ಬಂದು "ಈ ದಿನ ನಾನು ನಿನ್ನ ಜೊತೆಯಲ್ಲಿ ಬರುತ್ತೇನೆ. ಕರುವಿಗೆ ಸರಿಯಾಗಿ ಹುಲ್ಲು ನೀರು ಸಿಕ್ಕುತ್ತದೆಯೋ ಇಲ್ಲವೋ ನಾನು ನೋಡಿಕೊಂಡು ಬರಬೇಕು" ಎಂದಳು.

ಇಕ್ಕಣ್ಣಿನವಳಿಗೆ ಇವಳ ಉದ್ದೇಶವೂ ಗೊತ್ತಾಯಿತು. ಅವಳು ಕರುವನ್ನು ಉದ್ದವಾದ ಹುಲ್ಲಿನ ಮಧ್ಯೆ ಹೊಡೆದುಕೊಂಡು ಹೋಗಿ

"ಮುಕ್ಕಣ್ಣಿನವಳೇ ನಾವು ಇಲ್ಲೇ ಕುಳಿತುಕೊಳ್ಳೋಣ. ನಿನಗೊಂದು ಹಾಡನ್ನು ಹೇಳಬೇಕೆಂದು ನನಗೆ ಆಸೆ" ಎಂದಳು. ಬಹಳ ದೂರ ಬಿಸಿಲಿನಲ್ಲಿ ನಡೆದು ದಣಿದಿದ್ದ ಮುಕ್ಕಣ್ಣಿನವಳು ನೆಲದ ಮೇಲೆ ಕೈಯೂರಿ ಕುಳಿತುಕೊಂಡಳು. ಇಕ್ಕಣ್ಣಿನವಳು ಅನೇಕ ಸಾರಿ

'ಮುಕ್ಕಣ್ಣೆ, ಮುಕ್ಕಣ್ಣೆ, ಎಚ್ಚರಾಗಿಹೆಯಾ?'

ಎಂದು ಹಾಡಿದಳು. ಆದರೆ ಅವಳ ಮನಸ್ಸು ಎಲ್ಲೋ ಇತ್ತು. ಆದ್ದರಿಂದ ಅವಳು ಮರೆತು

'ಇಕ್ಕಣ್ಣೆ, ಇಕ್ಕಣ್ಣೆ, ನಿದ್ದೆಹೋಗಿಹೆಯಾ?'

ಎಂಬ ಎರಡನೆಯ ಸಾಲನ್ನೂ ಸೇರಿಸುತ್ತಿದ್ದಳು. ಮತ್ತೆ ಮತ್ತೆ

'ಮುಕ್ಕಣ್ಣೆ, ಮುಕ್ಕಣ್ಣೆ, ಎಚ್ಚರಾಗಿಹೆಯಾ?<br>ಇಕ್ಕಣ್ಣೆ, ಇಕ್ಕಣ್ಣೆ, ನಿದ್ದೆಹೋಗಿಹೆಯಾ?'

ಎಂಬ ಚರಣಗಳು ಅವಳ ಬಾಯಿಂದ ಹೊರಬಿದ್ದವು. ಮುಕ್ಕಣ್ಣಿನವಳು ತನ್ನ ಕಣ್ಣುಗಳಲ್ಲಿ ಎರಡನ್ನು ಮಾತ್ರ ಮುಚ್ಚಿಕೊಂಡು ನಿದ್ದೆಹೋದಳು. ಮೂರನೆಯ ಕಣ್ಣಿಗೆ ನಿದ್ದೆ ಬರಲಿಲ್ಲ. ಮುಕ್ಕಣ್ಣಿನವಳು ಅದನ್ನೂ ಮುಚ್ಚಿಕೊಂಡು ಅದಕ್ಕೂ ನಿದ್ದೆಹತ್ತಿದಂತೆ ನಟಿಸಿದಳು. ಆದರೆ ಬೇಕಾಧಾಗ ಅದನ್ನು ತೆರೆದು ಅವಳು ಎಲ್ಲವನ್ನೂ ನೋಡಬಹುದಾಗಿತ್ತು. ಪಾಪ, ಇಕ್ಕಣ್ಣಿನವಳು ಮುಕ್ಕಣ್ಣಿನವಳು ಗಾಢವಾಗಿ ನಿದ್ರಿಸುತ್ತಿದ್ದಳೆಂದು ನಂಬಿ ಮೆಲ್ಲನೆ

'ಆಕಳ ಕರುವೇ, ಮೆಲುಕನು ಹಾಕು,<br>ತಟ್ಟೆಯೆ, ತಿನ್ನಲು ಅನ್ನವು ಬೇಕು"

ಎಂದು ಹಾಡಿದಳು.

ತಟ್ಟೆ ಎದುರಿಗೆ ಬಂದ ಕೂಡಲೆ ಹೊಟ್ಟೆ ತುಂಬುವ ವರೆಗೂ ತಿಂದು,

'ಆಕಳ ಕರುವೇ, ಮೆಲುಕನು ಹಾಕು,<br>ತಟ್ಟೆಯೆ, ಇನ್ನೆನಗನ್ನವು ಸಾಕು

ಎಂದಳು. ಇದನ್ನೆಲ್ಲಾ ಮುಕ್ಕಣ್ಣಿನವಳು ಕದ್ದು ನೋಡುತ್ತಿದ್ದುದು ಅವಳ ಗಮನಕ್ಕೆ ಬರಲೇ ಇಲ್ಲ.

ಇಕ್ಕಣ್ಣಿನವಳು ಮುಕ್ಕಣ್ಣಿನವಳ ಬಳಿಗೆ ಬಂದು ಅವಳನ್ನು ಎಬ್ಬಿಸಿ "ಬಹಳ ಚೆನ್ನಾಗಿ ಕಾವಲಿರುತ್ತೀಯ! ಹೀಗೆ ಎಚ್ಚರವಾಗಿದ್ದರೆ ದೇವರೇ ಗತಿ! ಹೊತ್ತಾಯಿತು, ಬಾ, ಮನೆಗೆ ಹೋಗೋಣ" ಎಂದು ಹಾಸ್ಯ ಮಾಡಿದಳು.

ಮನೆಯಲ್ಲಿ ಮತ್ತೆ ಇಕ್ಕಣ್ಣಿನವಳು ಏನನ್ನೂ ತಿನ್ನಲಿಲ್ಲ. ಮುಕ್ಕಣ್ಣಿನವಳು ತಾನು ಕಂಡಿದ್ದುದನ್ನೆಲ್ಲಾ ತಾಯಿಗೆ ತಿಳಿಸಿದಳು. "ಈ ಜಂಬಗಾತಿ ನಾವು ಕೊಡುವ ಆಹಾರವನ್ನು ಏಕೆ ತಿನ್ನುವುದಿಲ್ಲವೆಂದು ನನಗೆ ಗೊತ್ತಾಯಿತು. ಕರುವನ್ನು ಬಯಲಿಗೆ ಹೊಡೆದುಕೊಂಡು ಹೋಗಿ ಅವಳು

'ಆಕಳ ಕರುವೇ, ಮೆಲುಕನು ಹಾಕು,
ತಟ್ಟೆಯೆ, ತಿನ್ನಲು ಅನ್ನವು ಬೇಕು'

ಎನ್ನುತ್ತಾಳೆ. ನಮ್ಮ ಮನೆಯಲ್ಲಿರುವುದಕ್ಕಿಂತಲೂ ಒಳ್ಳೊಳ್ಳೆಯ ಪದಾರ್ಥಗಳು ತುಂಬಿದ ತಟ್ಟೆ ಅವಳೆದುರಿಗೆ ಬರುತ್ತದೆ. ತನಗೆ ಬೇಕಾದಷ್ಟನ್ನು ತಿಂದುದು ಮುಗಿದ ಮೇಲೆ ಅವಳು

'ಆಕಳಕರುವೇ, ಮೆಲುಕನು ಹಾಕು,
ತಟ್ಟೆಯೆ, ಇನ್ನೆನಗನ್ನವು ಸಾಕು'

ಎನ್ನುತ್ತಾಳೆ. ಕೂಡಲೆ ಎಲ್ಲವೂ ಮಾಯವಾಗುತ್ತದೆ. ನಾನು ಪ್ರತಿಯೊಂದನ್ನೂ ನೋಡಿದೆನು. ಅವಳು ತನ್ನ ಹಾಡಿನಿಂದ ನನ್ನ ಎರಡು ಕಣ್ಣುಗಳಿಗೆ ನಿದ್ದೆ ಬರಸಿದಳು, ಆದರೆ ನನ್ನ ಅದೃಷ್ಟದಿಂದ ಮೂರನೆಯ ಕಣ್ಣು ಎಚ್ಚರವಾಗಿಯೇ ಇತ್ತು" ಎಂದಳು.

ಇದನ್ನು ಕೇಳಿ ಅವಳ ತಾಯಿಗೆ ಅಸೂಯೆಯಿಂದ ಹೊಟ್ಟೆಯಲ್ಲಿ ಬೆಂಕಿ ಹಾಕಿದ ಹಾಗೆ ಆಯಿತು. ಅವಳು "ನಮಗಿಲ್ಲದ ಸುಖ ನಿನಗೇಕೆ? ಇನ್ನು ಮುಂದೆ ಅದು ಹೇಗೆ ಆಹಾರವನ್ನು ಪಡೆಯುವೆಯೊ ನೋಡೋಣ" ಎನ್ನುತ್ತ ಒಂದು ದೊಡ್ಡ ಚೂರಿಯನ್ನು ತಂದು ಸ್ವಲ್ಪವೂ ಕರುಣೆಯಿಲ್ಲದವಳಂತೆ ಕರುವನ್ನು ಕೊಂದುಹಾಕಿದಳು.

ಇದನ್ನು ನೋಡಲಾರದೆ ಇಕ್ಕಣ್ಣಿನವಳು ದುಃಖದಿಂದ ಓಡಿಹೋಗಿ ತಾನು ಯಾವಾಗಲೂ ಕುಳಿತುಕೊಳ್ಳುತ್ತಿದ್ದ ಬಂಡೆಯ ಮೇಲೆ ಕುಳಿತು ಅಳತೊಡಗಿದಳು.

ಒಂದೆರಡು ನಿಮಿಷಗಳಲ್ಲೇ ಹಿಂದೆ ಬಂದಿದ್ದ ಹೆಂಗಸು ಅವಳ ಪಕ್ಕದಲ್ಲಿ ಬಂದು ನಿಂತು "ಇಕ್ಕಣ್ಣಿನವಳೆ, ಏಕೆ ಅಳುತ್ತಿರುವೆ?" ಎಂದು ಕೇಳಿದಳು.

ಇಕ್ಕಣ್ಣಿನವಳು "ಅಳದೆ ಇನ್ನೇನು ಮಾಡಲಿ? ಪ್ರತಿದಿನವೂ ನನಗೆ ಆಹಾರವನ್ನು ದೊರಕಿಸಿಕೊಡುತ್ತಿದ್ದ ಕರುವನ್ನು ಈ ದಿನ ನಮ್ಮ ಅಮ್ಮ ಕೊಂದುಬಿಟ್ಟಳು. ಇನ್ನು ನನ್ನ ಹಸಿವು ಬಾಯಾರಿಕೆಯನ್ನು ಕಳೆದು ಕೊಳ್ಳುವುದು ಹೇಗೆ?" ಎಂದಳು.

ಆ ಹೆಂಗಸು "ಇಕ್ಕಣ್ಣಿನವಳೆ, ನಾನು ನಿನಗೆ ಸಹಾಯ ಮಾಡುತ್ತೇನೆ; ನನ್ನ ಮಾತನ್ನು ಕೇಳು. ಸತ್ತುಹೋದ ಆ ಕರುವಿನ ಕರುಳನ್ನು ಕೊಡಬೇಕೆಂದು ನಿನ್ನ ಅಕ್ಕತಂಗಿಯರನ್ನು ಬೇಡಿ ಅದನ್ನು ನಿಮ್ಮ ಮನೆಯ ಮುಂದಿರುವ ಅಂಗಳದಲ್ಲಿ ಬಾಗಿಲ ಎದುರಿಗೆ ಸರಿಯಾಗಿ ಹೂಳು. ಅದು ನಿನಗೆ ಒಳ್ಳೆಯ ಫಲವನ್ನು ತರುತ್ತದೆ" ಎಂದು ಹೇಳಿ ಮಾಯವಾದಳು.

ಇಕ್ಕಣ್ಣಿನವಳು ಮನೆಗೆ ಓಡಿಹೋಗಿ ಕರುವಿನ ಕರುಳನ್ನಾದರೂ ತನಗೆ ಕೊಡಬೇಕೆಂದು ತಾಯಿಯನ್ನೂ ಅಕ್ಕತಂಗಿಯರನ್ನೂ ಅಂಗಲಾಚಿ ಬೇಡಿಕೊಂಡಳು. ಅವರು "ಅಷ್ಟೇ ತಾನೆ, ತೆಗೆದುಕೊಂಡು ಹಾಳಾಗಿ ಹೋಗು, ಸುಮ್ಮನೆ ಪೀಡಿಸಬೇಡ" ಎಂದು ಗೊಣಗುತ್ತಾ ಕರುವಿನ ಕರುಳನ್ನು ಅವಳ ಕಡೆಗೆ ಎಸೆದರು. ಉಳಿದ ಮಾಂಸವೆಲ್ಲಾ ಅವರ ಹೊಟ್ಟೆಯ ಪಾಲಾಯಿತು.

ಇಕ್ಕಣ್ಣಿನವಳು ಮೇಕೆಯ ಕರುಳನ್ನು ಸಂಜೆಯವರೆಗೂ ಒಂದು ಕಡೆ ಜೋಪಾನವಾಗಿಟ್ಟಿದ್ದು, ಕತ್ತಲಾದ ಮೇಲೆ ಯಾರೂ ಇಲ್ಲದಿದ್ದಾಗ ಅದನ್ನು ಅಂಗಳದಲ್ಲಿ ಹೂಳಿದಳು.

ಮಾರನೆಯ ದಿನ ಎಲ್ಲರೂ ಎದ್ದು ಬಾಗಿಲು ತೆಗೆದು ನೋಡಿದಾಗ ಮನೆಯ ಮುಂದೆ ಒಂದು ಸೊಗಸಾದ ಮರವಿತ್ತು. ಅದರ ಎಲೆಗಳೆಲ್ಲಾ ಬೆಳ್ಳಿಯವು. ಅವುಗಳ ನಡುವೆ ಬಂಗಾರದ ಹಣ್ಣುಗಳು ಜೋತಾಡುತ್ತಿದ್ದವು. ಜಗತ್ತಿನಲ್ಲಿ ಇಂತಹ ಸುಂದರವಾದ ಮರವೂ ಇಷ್ಟು ಬೆಲೆ ಬಾಳುವ ಹಣ್ಣುಗಳೂ ಖಂಡಿತ ಬೇರೆ ಎಲ್ಲಿಯೂ ಇರಲಿಲ್ಲ. ಒಂದೇ

ರಾತ್ರಿಯಲ್ಲಿ ಆ ಮರ ಅಲ್ಲಿ ಹೇಗೆ ಬಂದಿತ್ತೆಂದು ಯಾರಿಗೂ ಗೊತ್ತಾಗಲಿಲ್ಲ. ಇಕ್ಕಣ್ಣಿನವಳು ಮಾತ್ರ ಅದು ತಾನು ಕರುವಿನ ಕರುಳನ್ನು ಹೂಳಿದ್ದ ಸ್ಥಳದಲ್ಲಿ ಬೆಳೆದಿದ್ದುದನ್ನು ಗಮನಿಸಿದಳು.

ಅವರ ತಾಯಿ ಒಕ್ಕಣ್ಣಿನವಳ ಕಡೆಗೆ ತಿರುಗಿ "ಮಗೂ, ನೀನು ಮರವನ್ನು ಹತ್ತಿ ಅದರಲ್ಲಿ ಬಿಟ್ಟಿರುವ ಹಣ್ಣುಗಳನ್ನೆಲ್ಲಾ ಕೀಳು" ಎಂದಳು.

ಒಕ್ಕಣ್ಣಿನವಳು ಮರವನ್ನೇನೋ ಹತ್ತಿದಳು. ಆದರೆ ಅವಳು ಹಣ್ಣು ಕೀಳಲು ಕೈಚಾಚಿದಾಗಲೆಲ್ಲಾ ಹಣ್ಣಿದ್ದ ಕೊಂಬೆ ಹಿಂದಕ್ಕೆ ಹೋಗುತ್ತಿತ್ತು. ಅವಳು ಯಾವಾವ ರೀತಿಯಲ್ಲಿ ಎಷ್ಟು ಪ್ರಯತ್ನ ಪಟ್ಟರೂ ಒಂದು ಹಣ್ಣನ್ನು ಕೀಳುವುದಕ್ಕೆ ಕೂಡ ಅವಳಿಂದ ಆಗಲಿಲ್ಲ.

ಆಗ ತಾಯಿ ಮೂರನೆಯ ಮಗಳ ಕಡೆಗೆ ತಿರುಗಿ "ಮುಕ್ಕಣ್ಣಿನವಳೆ, ನೀನು ಮರವನ್ನು ಹತ್ತು. ನಿನಗೆ ಮೂರು ಕಣ್ಣುಗಳಿರುವುದರಿಂದ ನೀನು ಒಕ್ಕಣ್ಣಿನವಳಿಗಿಂತಲೂ ಚೆನ್ನಾಗಿ ನೋಡಬಲ್ಲೆ" ಎಂದಳು.

ಒಕ್ಕಣ್ಣಿನವಳು ಮರದಿಂದ ಕೆಳಕ್ಕೆ ಇಳಿದಳು. ಮುಕ್ಕಣ್ಣಿನವಳು ಅದರ ಮೇಲಕ್ಕೆ ಅಡರಿದಳು. ಆದರೆ ಒಕ್ಕಣ್ಣಿನವಳಿಗಾದ ಗತಿಯೇ ಇವಳಿಗೂ ಆಯಿತು. ಅವಳು ಪ್ರಯತ್ನಪಟ್ಟಂತೆಲ್ಲಾ ಹಣ್ಣುಗಳು ತಪ್ಪಿಸಿಕೊಂಡು ಹಿಂದೆಹಿಂದಕ್ಕೆ ಹೋದವು.

ಕೊನೆಗೆ ತಾಯಿ ತಾಳ್ಮೆಗೆಟ್ಟು ತಾನೇ ಮರವನ್ನು ಏರಿದಳು. ಆದರೆ ಒಕ್ಕಣ್ಣಿನವಳಿಗೂ ಮುಕ್ಕಣ್ಣಿನವಳಿಗೂ ಎಷ್ಟು ಜಯ ದೊರೆತಿತ್ತೋ ಅಷ್ಟೇ ಇವಳಿಗೂ ದೊರೆತದ್ದು. ಕೈ ಚಾಚಿದಾಗಲೆಲ್ಲಾ ಅವಳು ಹಿಡಿದುಕೊಂಡದ್ದು ಬರಿಯ ಗಾಳಿಯನ್ನೇ ಹೊರತು ಹಣ್ಣನ್ನಲ್ಲ.

ಇಕ್ಕಣ್ಣಿನವಳು "ನಾನು ಮರವನ್ನು ಹತ್ತುತ್ತೇನೆ, ಬಹುಶಃ ಹಣ್ಣು ನನ್ನ ಕೈಗೆ ಸಿಕ್ಕಬಹುದು" ಎಂದಳು.

ಅವಳ ಅಕ್ಕತಂಗಿಯರಿಬ್ಬರೂ "ನೀನು! ಎರಡೇ ಕಣ್ಣುಗಳಿರುವ ನಿನ್ನ ಕೈಲೇನಾದೀತು?" ಎಂದು ಕೂಗಾಡಿದರು.

ಅವರ ಅಬ್ಬರವನ್ನು ಲಕ್ಷಿಸದೆ ಇಕ್ಕಣ್ಣಿನವಳು ಮರವನ್ನು ಹತ್ತಿದಳು. ಬಂಗಾರದ ಹಣ್ಣುಗಳು ಅವಳು ಕೈ ಚಾಚಿದಾಗ ಹಿಂದಕ್ಕೆ ಹೋಗಲಿಲ್ಲ.

ಅವು ತಾವಾಗಿ ತಾವೇ ಅವಳ ಕೈಗೆ ಬಂದು ಸಿಕ್ಕಿಬೀಳುತ್ತಿದ್ದಂತೆ ತೋರುತ್ತಿತ್ತು. ಅವಳು ಒಂದಾಗುತ್ತಲೊಂದರಂತೆ ಹಣ್ಣನ್ನು ಕೊಯ್ದು ಮಡಿಲಿನ ತುಂಬಾ ತುಂಬಿಕೊಂಡು ಕೆಳಗಿಳಿದು ಬಂದಳು. ಕೂಡಲೆ ತಾಯಿ ಅವನ್ನೆಲ್ಲಾ ಅವಳಿಂದ ಕಿತ್ತುಕೊಂಡಳು. ಇದರಿಂದ ಇಕ್ಕಣ್ಣಿನವಳ ಮೇಲೆ ಅವರ ಪ್ರೀತಿ ಹೆಚ್ಚಲಿಲ್ಲ. ತಮ್ಮಲ್ಲಿ ಯಾರಿಂದಲೂ ಆಗದ ಕೆಲಸ ಅವಳಿಂದ ಆಯಿತಲ್ಲಾ ಎಂದು ಅವರು ಹೊಟ್ಟೆಯುರಿಯಿಂದ ಅವಳಿಗೆ ಮೊದಲಿಗಿಂತಲೂ ಹೆಚ್ಚು ಕಿರುಕುಳ ಕೊಡಲು ಆರಂಭಿಸಿದರು.

ಒಂದು ದಿನ ಅವರೆಲ್ಲರೂ ಮರದ ಕೆಳಗೆ ನಿಂತಿದ್ದರು. ಇಕ್ಕಣ್ಣಿನವಳು ಆಗತಾನೆ ಮಡಿಲಿನ ತುಂಬಾ ಬಂಗಾರದ ಹಣ್ಣುಗಳನ್ನು ಕೊಯ್ದುಕೊಂಡು ಕೆಳಗಿಳಿದು ಬಂದಿದ್ದಳು. ಆ ಸಮಯಕ್ಕೆ ಸರಿಯಾಗಿ ನೆರೆಯೂರಿನ ದೊರೆಯ ಮಗ ಕುದುರೆಯ ಮೇಲೆ ಕುಳಿತು ಆ ಕಡೆ ಬಂದ.

ಅವನನ್ನು ದೂರದಿಂದ ನೋಡಿದ ಕೂಡಲೆ ಒಕ್ಕಣ್ಣಿನವಳೂ ಮುಕ್ಕಣ್ಣಿನವಳೂ "ಇಕ್ಕಣ್ಣಿನವಳೆ, ಇಕ್ಕಣ್ಣಿನವಳೆ, ಬೇಗ, ಬೇಗ, ಎಲ್ಲಿಯಾದರೂ ಮರೆಯಾಗು; ಇಲ್ಲದಿದ್ದರೆ ಹಾಗೆಯೇ ನೆಲದ ಮೇಲೆ ಮುದುರಿಕೊಂಡು ಕಾಣಿಸದ ಹಾಗೆ ಕುಳಿತುಕೊ. ನಿನ್ನ ಜೊತೆಯಲ್ಲಿದ್ದರೆ ನಮಗೆ ಮಾನ ಉಳಿಯುವುದಿಲ್ಲ" ಎಂದು ಒಂದೇ ಸಮನೆ ಗದರಿಸಿಕೊಂಡರು. ಇಷ್ಟು ಸಾಲದೆ ಅವರು ಅಲ್ಲೇ ಮಗ್ಗುಲಲ್ಲಿದ್ದ ಮುಚ್ಚಳವಿಲ್ಲದ ಹಳೆಯದೊಂದು ದೊಡ್ಡ ಮರದ ಪೆಟ್ಟಿಗೆಯನ್ನು ಇಕ್ಕಣ್ಣಿನವಳ ತಲೆಯ ಮೇಲೆ ಬೋರಲು ಹಾಕಿ ಅವಳು ಕಿತ್ತಿದ್ದ ಹಣ್ಣುಗಳನ್ನೆಲ್ಲಾ ಅದರ ಕೆಳಗೆ ತೂರಿಸಿ ಮುಚ್ಚಿಟ್ಟರು.

ದೊರೆಯ ಮಗ ಹತ್ತಿರ ಬಂದ. ಬೆಳ್ಳಿಬಂಗಾರದಿಂದ ಥಳಥಳಿಸುತ್ತಿದ್ದ ಆ ಮರವನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ಅವನು ಅಲ್ಲಿದ್ದವರ ಕಡೆಗೆ ತಿರುಗಿ "ಈ ಮರ ಯಾರದು? ಇದರಿಂದ ಒಂದು ರೆಂಬೆಯನ್ನು ನನಗೆ ಕೊಡುವವರು ಅದಕ್ಕೆ ಬದಲಾಗಿ ತಮಗೆ ಬೇಕಾದ ಪ್ರತಿಫಲ ಪಡೆಯಬಹುದು" ಎಂದ.

ಒಕ್ಕಣ್ಣಿನವಳೂ ಮುಕ್ಕಣ್ಣಿನವಳೂ ಮರ ತಮ್ಮದೆಂದು ಸುಳ್ಳು ಹೇಳಿದರು. ಆದರೆ ಅದರ ಒಂದು ರೆಂಬೆಯನ್ನು ಕೀಳಲು ಅವರು ಪಟ್ಟ

ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಅವರು ಕೈಯೆತ್ತಿದಕೂಡಲೆ ರೆಂಬೆಗಳೂ ಹಣ್ಣುಗಳೂ ಹಿಂದಕ್ಕೆ ಸರಿಯುತ್ತಿದ್ದವು.

ದೊರೆಯ ಮಗ "ಇದೆಂತಹ ವೈಚಿತ್ರ್ಯ! ಮರ ನಿಮ್ಮದೆನ್ನುತ್ತೀರಿ, ಆದರಿಂದ ಒಂದು ರೆಂಬೆಯ ಚೂರನ್ನು ಮುರಿಯಲು ನಿಮಗೆ ಸಾಮರ್ಥ್ಯ ವಿಲ್ಲ!" ಎಂದು ಅವರನ್ನು ಹೀಯಾಳಿಸಿದ.

ಇಷ್ಟಾದರೂ ಅವರು ಮರ ತಮ್ಮದೇ ಎನ್ನುವುದನ್ನು ಮಾತ್ರ ಬಿಡಲಿಲ್ಲ. ಇವರು ಸುಳ್ಳಾಡುತ್ತಿದ್ದುದನ್ನು ಕೇಳಿ ಇಕ್ಕಣ್ಣಿನವಳಿಗೆ ಕೋಪಬಂತು. ಅವಳು ಮೆಲ್ಲನೆ ಪೆಟ್ಟಿಗೆಯ ಕೆಳಗಿನಿಂದ ನಾಲ್ಕಾರು ಬಂಗಾರದ ಹಣ್ಣುಗಳನ್ನು ಹೊರಕ್ಕೆ ಉರುಳಿಬಿಟ್ಟಳು. ಅವು ಓಡಿಓಡಿ ಬಂದು ದೊರೆಯ ಮಗನ ಪಾದಕ್ಕೆ ತಗುಲಿ ನಿಂತವು. ಅವನ್ನು ನೋಡಿ ಅವನ ಅಚ್ಚರಿ ಮತ್ತೂ ಹೆಚ್ಚಿತು. ಅವನು ಅವು ಎಲ್ಲಿಂದ ಬಂದುವೆಂದು ಕೇಳಿದ. ಒಕ್ಕಣ್ಣಿನವಳೂ ಮುಕ್ಕಣ್ಣಿನವಳೂ "ನಮ್ಮ ಒಡಹುಟ್ಟಿದವಳು ಇನ್ನೊಬ್ಬಳಿದ್ದಾಳೆ. ಆದರೆ ಅವಳಿಗೆ ಇರುವುದು ಸಾಧಾರಣ ಜನರ ಹಾಗೆ ಎರಡೇ ಕಣ್ಣು. ಅದ್ದರಿಂದ ಅವಳು ಯಾರಾದರೂ ಬಂದರೆ ಅವರಿಗೆ ಮುಖತೋರಿಸಲಾರದೆ ನಾಚಿಕೆಯಿಂದ ಎಲ್ಲಿಯಾದರೂ ಮುಚ್ಚಿಟ್ಟುಕೊಳ್ಳು ತ್ತಾಳೆ" ಎಂದರು. ಅವಳನ್ನು ತಾನು ನೋಡಲೇ ಬೇಕೆಂದು ರಾಜನ ಮಗ ಹಟ ಹಿಡಿದ. ಅವರು "ಇಕ್ಕಣ್ಣಿನವಳೆ, ಈಚೆಗೆ ಬಾ" ಎಂದು ಕೂಗಿದರು.

ಇಕ್ಕಣ್ಣಿನವಳು ಪೆಟ್ಟಿಗೆಯ ಕೆಳಗಿನಿಂದ ಹೂರಕ್ಕ ಬಂದಳು. ರಾಜಕುಮಾರನಿಗೋ ಆಶ್ಚರ್ಯದ ಮೇಲೆ ಆಶ್ಚರ್ಯ! ಅವಳ ಸೌಂದರ್ಯ ವನ್ನು ನೋಡಿ ಅವನು ಮುಗ್ಧನಾದ. "ಇಕ್ಕಣ್ಣಿನವಳೆ, ನೀನಾದರೂ ನನಗೆ ಈ ಮರದ ಒಂದು ರೆಂಬೆಯನ್ನು ಮುರಿದುಕೊಡು; ಆ ಕೆಲಸ ನಿನ್ನಿಂದ ಆಗುತ್ತದೆ, ಸಂದೇಹವಿಲ್ಲ" ಎಂದ.

ಇಕ್ಕಣ್ಣಿನವಳು "ಹೌದು, ಆ ಕೆಲಸ ನನ್ನಿಂದ ಆಗುತ್ತದೆ; ಏಕೆಂದರೆ ಮರ ನನ್ನದು" ಎಂದು ಹೇಳುತ್ತಾ, ಮರವನ್ನು ಹತ್ತಿ ಬೆಳ್ಳಿಯ ಎಲೆಗಳೂ ಬಂಗಾರದ ಹಣ್ಣುಗಳೂ ತುಂಬಿದ್ದ ಒಂದು ರೆಂಬೆಯನ್ನು ಮುರಿದು ಅವನ ಕೈಗೆ ಕೊಟ್ಟಳು.

ಅವನು "ಇಕ್ಕಣ್ಣಿನವಳೆ, ಇದಕ್ಕೆ ಪ್ರತಿಯಾಗಿ ನನ್ನಿಂದ ನಿನಗೆ ಏನುಬೇಕು?" ಎಂದ.

ಇಕ್ಕಣ್ಣಿನವಳು "ನಾನು ಇಲ್ಲಿ ಬೆಳಗಿನಿಂದ ರಾತ್ರಿಯವರೆಗೂ ಹಸಿವು ಬಾಯಾರಿಕೆಯನ್ನೂ ವಿಧವಿಧವಾದ ಕಷ್ಟಗಳನ್ನೂ ಅನುಭವಿಸಿ ಸಂಕಟ ಪಡುತ್ತಿದ್ದೇನೆ. ನೀನು ನನ್ನನ್ನು ಇಲ್ಲಿಂದ ಬಿಡುಗಡೆ ಮಾಡಿ ನಿನ್ನ ಜೊತೆಯಲ್ಲಿ ಕರೆದುಕೊಂಡು ಹೋದರೆ ಬಹಳ ಉಪಕಾರ ಮಾಡಿದ ಹಾಗಾಗುತ್ತದೆ" ಎಂದಳು.

ರಾಜಕುಮಾರ ಇಕ್ಕಣ್ಣಿನವಳನ್ನು ಎರಡು ಕೈಗಳಿಂದಲೂ ಎತ್ತಿ ಕುದುರೆಯ ಮೇಲೆ ಕೂಡಿಸಿಕೊಂಡು ತನ್ನ ಅರಮನೆಗೆ ಕರೆತಂದ. ಅಲ್ಲಿ ಅವಳಿಗೆ ಉಡಲು ಸೊಗಸಾದ ಹೊಸ ಹೊಸ ಬಟ್ಟೆಗಳೂ, ಉಣ್ಣಲು ರುಚಿರುಚಿಯಾದ ಆಹಾರ ಪಾನೀಯಗಳೂ ದೊರೆತವು. ಕೆಲವು ದಿವಸ ಗಳಲ್ಲೇ ರಾಜಕುಮಾರನೊಡನೆ ಅವಳ ಮದುವೆ ವೈಭವದಿಂದ ನೆರವೇರಿತು.

ಇಕ್ಕಣ್ಣಿನವಳನ್ನು ರಾಜಕುಮಾರ ಕರೆದುಕೊಂಡು ಹೋದಾಗ ಅವಳ ಅಕ್ಕತಂಗಿಯರಿಗೆ ಆದ ಅಸೂಯೆ ಅಷ್ಟಿಷ್ಟಲ್ಲ. ಅವರು "ಅವಳು ರಾಜನ ಮನೆಗೆ ಹೋದರೇನಂತೆ? ಈ ಅದ್ಭುತವಾದ ಮರ ಇನ್ನೂ ನಮ್ಮದೇ ಆಗಿದೆಯಲ್ಲಾ, ಇಷ್ಟೇ ಸಾಕು. ಇದರಿಂದ ಒಂದು ಕೊಂಬೆ ಯನ್ನೂ ಮುರಿಯಲು ನಮ್ಮ ಕೈಲಾಗುವುದಿಲ್ಲ ನಿಜ. ಆದರೇನು ಹಾದಿಯಲ್ಲಿ ಹೋಗಿಬರುವವರೆಲ್ಲಾ ಇದನ್ನು ನೋಡಿ ನಿಂತೇ ನಿಲ್ಲುತ್ತಾರೆ, ನಮ್ಮನ್ನು ಮಾತಾಡಿಸಿ ಅದರ ವಿಚಾರವನ್ನು ಕೇಳುತ್ತಾರೆ, ನಮ್ಮ ಖ್ಯಾತಿ ಎಲ್ಲಾಕಡೆಯೂ ಹರಡುತ್ತದೆ; ಇದರಿಂದ ಮುಂದೆ ನಮಗೆ ಏನೇನು ಲಾಭವುಂಟೋ ಯಾರಿಗೆ ಗೊತ್ತು!" ಎಂದು ತಮಗೆ ತಾವೇ ಸಮಾಧಾನ ಹೇಳಿಕೊಂಡರು.

ಪಾಪ, ಮಾರನೆಯದಿನ ಬೆಳಗಾಗುವ ಹೊತ್ತಿಗೆ ಆ ಮರ ಮಾಯ ವಾಗಿತ್ತು. ಅದರೊಂದಿಗೆ ಅವರ ಆಶಯಗಳೂ ಕರಗಿ ಹೋದವು. ಇತ್ತ, ಇಕ್ಕಣ್ಣಿನವಳು ಅರಮನೆಯಲ್ಲಿ ತನ್ನ ಕೋಣೆಯ ಕಿಟಕಿಯ ಮೂಲಕ ಇಣಕಿ ನೋಡಲು, ಹೊರಗಡೆ ಆ ಮರ ಕಾಣಿಸಿತು. ಅದು ತನ್ನನ್ನೇ ಹಿಂಬಾಲಿಸಿ ಬಂದಿದ್ದುದಕ್ಕೆ ಅವಳ ಸಂತೋಷ ಉಕ್ಕಿತು.

ಇಕ್ಕಣ್ಣಿನವಳು ಅನೇಕ ವರ್ಷಗಳು ಸುಖವಾಗಿ ಬಾಳಿದಳು. ಒಂದು ಸಾರಿ ಇಬ್ಬರು ಬಿಕ್ಷುಕಿಯರು ಅರಮನೆಯ ಬಾಗಿಲಿಗೆ ಬಂದು ನಿಂತು ತಿರುಪೆ ಬೇಡಿದರು. ಅವರ ಮುಖಗಳನ್ನು ಕಣ್ಣಿಟ್ಟು ನೋಡಿದೊಡನೆ ಅವರು ತನ್ನ ಅಕ್ಕತಂಗಿಯರೆಂದು ಇಕ್ಕಣ್ಣಿನವಳಿಗೆ ತಿಳಿಯಿತು. ಅವರಿಬ್ಬರೂ ಈಗ ಹೊಟ್ಟೆಗಿಲ್ಲದೆ ಮನೆಮನೆಗೆ ಅಲೆದು ಬಿಕ್ಷೆ ಬೇಡುವ ಗತಿಗೆ ಇಳಿದಿದ್ದರು. ಆದರೆ ಅವರನ್ನು ಕಂಡು ಇಕ್ಕಣ್ಣಿನವಳಿಗೆ ಕನಿಕರ ಹುಟ್ಟಿತು. ಅವಳು ಅವರಿಬ್ಬರನ್ನೂ ಒಳಕ್ಕೆ ಬರಮಾಡಿಕೊಂಡು ಸತ್ಕರಿಸಿದಳು. ಅವಳ ಉದಾರ ಬುದ್ಧಿಯನ್ನು ನೋಡಿ ಅವರು ತಾವು ಅವಳಿಗೆ ಕೊಟ್ಟಿದ್ದ ಕಷ್ಟಗಳನ್ನೆಲ್ಲಾ ನೆನೆದು ಪಶ್ಚಾತ್ತಾಪ ಪಟ್ಟರು.

# ಆರು ಜನ ಸೇವಕರು

ಹಿಂದಿನ ಕಾಲದಲ್ಲಿ ಒಬ್ಬ ರಾಣಿಯಿದ್ದಳು. ಅವಳಿಗೊಬ್ಬ ಬಹಳ ಚೆಲುವೆಯಾದ ಮಗಳಿದ್ದಳು. ರಾಣಿಯ ಹೃದಯ ಕಲ್ಲಿನಂತೆ ಕಠಿಣ ವಾದುದು. ಜೊತೆಗೆ ಅವಳು ಮಾಟಗಾತಿ ಬೇರೆ ಆಗಿದ್ದಳು. ರಾಜ ಕುಮಾರಿಯನ್ನು ಮದುವೆಯಾಗಲು ಅಪೇಕ್ಷೆಪಟ್ಟು ನೆರೆಹೊರೆಯ ದೊರೆ ಗಳ ಮಕ್ಕಳು ಅನೇಕರು ಅಲ್ಲಿಗೆ ಬರುತ್ತಿದ್ದರು. ಅವರನ್ನೆಲ್ಲಾ ಹಾಳು ಮಾಡುವುದೇ ರಾಣಿಗೆ ದೊಡ್ಡ ಕೆಲಸವಾಗಿತ್ತು. ಬಂದವರೆಲ್ಲಾ ತಾನು ಹೇಳಿದ ಮೂರು ಕೆಲಸಗಳನ್ನು ಮಾಡಬೇಕೆಂದೂ, ಯಾರು ಎಲ್ಲಾ ಕೆಲಸಗಳನ್ನೂ ಮಾಡಿ ಜಯಶೀಲರಾಗುತ್ತಿದ್ದರೋ ಅವರು ತನ್ನ ಮಗಳನ್ನು ಮದುವೆಯಾಗಬಹುದೆಂದೂ ಅವಳ ನಿಬಂಧನೆ. ಹಾಗೆ ಅವಳು ಕೊಟ್ಟ ಕೆಲಸಗಳನ್ನು ಮಾಡಲಾಗದವರು ಸಾಯಬೇಕಾಗಿತ್ತು. ಅರಮನೆಯ ಸೇವಕರು ಅವರನ್ನು ರಾಣಿ ಕುಳಿತಿದ್ದ ಸಿಂಹಾಸನದ ಮುಂದಕ್ಕೆ ಎಳೆದುಕೊಂಡು ಬರುತ್ತಿದ್ದರು. ಅವರು ಅವಳ ಪಾದಗಳ ಬಳಿ ಮೊಣಕಾಲೂರಿ ತಲೆಬಾಗಬೇಕಾಗಿತ್ತು. ಅವಳು ತನ್ನ ಕೈಯಲ್ಲಿದ್ದ ಕತ್ತಿಯಿಂದ ಅವರ ತಲೆಗಳನ್ನು ಕತ್ತರಿಸಿ ಹಾಕುತ್ತಿದ್ದಳು. ಎಷ್ಟೋ ಜನ ರಾಜಕುಮಾರರು ಹೀಗೆ ತಮ್ಮ ಪ್ರಾಣಗಳನ್ನು ಕಳೆದು ಕೊಂಡರು.

ಈ ರಾಜಕುಮಾರಿಯ ಚೆಲುವು ಎಂತಹುದೆಂದು ಕೇಳಿದ್ದ ಒಬ್ಬ ರಾಜನ ಮಗ ತನ್ನ ತಂದೆಯ ಹತ್ತಿರ ಬಂದು "ಅಪ್ಪ, ನಾನು ಹೋಗಿ ಅವಳನ್ನು ವರಿಸಿ ಮದುವೆಯಾಗಿ ಬರುತ್ತೇನೆ, ಅಪ್ಪಣೆಕೊಡು" ಎಂದು ಕೇಳಿದ.

ರಾಜ "ಕೂಡದು, ಎಂದಿಗೂ ಕೂಡದು. ನೀನು ಅಲ್ಲಿಗೆ ಹೋದರೆ ಸಾವು ತಪ್ಪದು" ಎಂದು ಖಂಡಿತವಾಗಿ ಹೇಳಿಬಿಟ್ಟ.

ಇದರ ಫಲವಾಗಿ ರಾಜಕುಮಾರ ಕೊರಗಿನಿಂದ ಹಾಸಿಗೆ ಹಿಡಿದ. ಏಳು ವರ್ಷ ಅವನು ಏಳಲೇ ಇಲ್ಲ. ಎಂತೆಂತಹ ವೈದ್ಯರು ಏನೇನು ಮಾಡಿದರೂ ಪ್ರಯೋಜನವಾಗಲಿಲ್ಲ.

ಕಡೆಗೆ ರಾಜ "ಹೀಗಿದ್ದರೆ ಮಗ ಸಾಯುವುದು ದಿಟ. ಹೇಗಾದರೂ ಸಾಯುತ್ತಾನೆ. ಅದೃಷ್ಟವಿದ್ದರೆ ರಾಜಕುಮಾರಿಯನ್ನು ಒಲಿಸಿಕೊಂಡು ಬದುಕಿ ಬರಬಹುದು" ಎಂದುಕೊಂಡು ಅವನು ತನ್ನ ಇಷ್ಟದಂತೆ ನಡೆಯ ಬಹುದೆಂದು ಒಪ್ಪಿಗೆಕೊಟ್ಟ. ಇನ್ನೇನು ಮಾಡುವುದಕ್ಕೂ ಅವನಿಗೆ ತೋಚಲಿಲ್ಲ.

ಮಾರನೆಯ ದಿನವೇ ರಾಜಕುಮಾರನ ಕಾಯಿಲೆ ಗುಣಮುಖ ವಾಯಿತು. ಅವನು ಹಾಸಿಗೆಯಿಂದ ಮೇಲೆದ್ದು ಸಂತೋಷದಿಂದ ಉಬ್ಬಿ ಒಂದು ಒಳ್ಳೆಯ ಕುದುರೆಯ ಮೇಲೆ ಕುಳಿತು ಹೊರಟ.

ದಾರಿಯಲ್ಲಿ ದೂರದಿಂದ ದಿಣ್ಣೆಯ ಹಾಗೆ ಕಾಣುತ್ತಿದ್ದುದು ಏನೋ ಬಿದ್ದಿತ್ತು. ಅವನು ಹತ್ತಿರ ಹೋಗಿ ನೋಡಿದ. ಅಲ್ಲಿದ್ದುದು ದಿಣ್ಣೆಯಲ್ಲ, ಒಬ್ಬ ಮನುಷ್ಯ. ದೂರಕ್ಕೆ ದಿಣ್ಣೆಯ ಹಾಗೆ ಕಾಣುತ್ತಿದ್ದುದು ಆ ಮನುಷ್ಯನ ಹೊಟ್ಟೆ!

ರಾಜಕುಮಾರನನ್ನು ಕಾಣುತ್ತಲೆ ಆ ದೊಡ್ಡ ಹೊಟ್ಟೆಯವನು "ಮಹಾಪ್ರಭು, ನಿಮಗೊಬ್ಬ ಸೇವಕ ಬೇಕಾಗಿದ್ದರೆ ನಾನು ಸಿದ್ಧವಾಗಿದ್ದೇನೆ" ಎಂದ.

ರಾಜಕುಮಾರ "ಬೆಟ್ಟದಹಾಗೆ ಹೊಟ್ಟೆ ಬೆಳಿಸಿದ್ದೀಯೆ. ನಿನ್ನನ್ನು ಕಟ್ಟಿಕೊಂಡು ನಾನೇನು ಮಾಡಲಿ? ನೀನು ಕೈಕಾಲಾಡಿಸುವುದೇ ಕಷ್ಟ; ನಿನ್ನಿಂದ ಯಾವ ಕೆಲಸ ಆದೀತು?" ಎಂದ.

ಹೊಟ್ಟೆಯವನು "ಓ, ಅದರ ಯೋಚನೆ ನಿನಗೇಕೆ? ನನ್ನ ನಡತೆ ಸರಿಯಾಗಿದ್ದರೆ ಆಯಿತೋ ಇಲ್ಲವೋ? ಬೇಕಾದರೆ ನನ್ನ ಹೊಟ್ಟೆ ಯನ್ನು ಈಗ್ಗಿರುವುದಕ್ಕಿಂತಲೂ ಸಾವಿರದಷ್ಟು ದೊಡ್ಡದಾಗಿ ಮಾಡಬಲ್ಲೆ" ಎಂದ.

ರಾಜಕುಮಾರ "ಹಾಗಾದರೆ ನೀನು ನನ್ನ ಜೊತೆಯಲ್ಲಿ ಬಾ. ಮುಂದೆ ನಿನ್ನಿಂದ ನನಗೆ ಏನಾದರೂ ಉಪಯೋಗವಾಗಬಹುದು; ಯಾರು ಬಲ್ಲರು?"-ಎಂದ.

ಇಬ್ಬರೂ ಮುಂದುವರಿದರು. ಸ್ವಲ್ಪ ದೂರ ಹೋಗುವುದರಲ್ಲೇ ಕಾಲುಚಾಚಿಕೊಂಡು ನೆಲದ ಮೇಲೆ ಮಗ್ಗುಲಾಗಿ ಮಲಗಿದ್ದವನೊಬ್ಬ ರಾಜಕುಮಾರನ ಕಣ್ಣಿಗೆ ಬಿದ್ದ. ಅವನು ಕಿವಿಯನ್ನು ಹುಲ್ಲಿನ ಮೇಲೆ ಒತ್ತಿಹಿಡಿದು ಏನನ್ನೋ ಲಾಲಿಸುತ್ತಿರುವಂತೆ ಕಂಡುಬಂದ.

ರಾಜಕುಮಾರ ಅವನನ್ನು ಕುರಿತು "ಏನು ಮಾಡುತ್ತಿರುವೆ?" ಎಂದ.

ಅವನು "ಕಿವಿಗೊಟ್ಟು ಕೇಳುತ್ತಿದ್ದೇನೆ" ಎಂದ.

ರಾಜಕುಮಾರ "ಇಷ್ಟು ಗಮನವಿಟ್ಟು ಏನು ನೀನು ಕೇಳುತ್ತಿರುವುದು?" ಎಂದ.

ಅವನು "ಪ್ರಪಂಚದಲ್ಲಿ ನಡೆಯುವುದನ್ನೆಲ್ಲಾ ಕೇಳುತ್ತಿದ್ದೇನೆ. ನನ್ನ ಕಿವಿಗಳು ಬಹಳ ಭೂಟಿಯಾಗಿವೆ. ಯಾವುದೂ ಅವಕ್ಕೆ ಗೋಚರವಾಗದೆ ಹೋಗುವಹಾಗಿಲ್ಲ. ಹುಲ್ಲುಗರಿಕೆ ಬೆಳೆಯುವ ಶಬ್ದ ಕೂಡ ನನಗೆ ಕೇಳಿಸುತ್ತದೆ" ಎಂದ.

ರಾಜಕುಮಾರ "ಹಾಗಾದರೆ ಆ ಮಾಟಗಾತಿ ರಾಣಿಯ ಅರಮನೆಯಲ್ಲಿ ಏನು ನಡೆಯುತ್ತಿದೆ, ಕೇಳಿ ಹೇಳಬಲ್ಲೆಯಾ ನನಗೆ?" ಎಂದ.

ಅವನು "ಓಹೋ, ರಾಜಕುಮಾರಿಯನ್ನು ವರಿಸಲು ಬರುವವರ ತಲೆಗಳನ್ನು ಕತ್ತರಿಸುವುದಕ್ಕೆಂದು ಕತ್ತಿಮಸೆಯುತ್ತಿದ್ದಾರೆ. ಮಸೆಯುವ ಕಲ್ಲಿನ ಮೇಲೆ ಕತ್ತಿಯನ್ನು ಹರಿತ ಮಾಡುವ ಶಬ್ದ ನನಗೆ ಈಗ ಚೆನ್ನಾಗಿ ಕೇಳಿಸುತ್ತದೆ" ಎಂದ.

ಆಗ ರಾಜಕುಮಾರ ಅವನಿಗೆ "ನಿನ್ನಿಂದ ನನಗೆ ಪ್ರಯೋಜನವುಂಟು. ನನ್ನ ಜೊತೆಯಲ್ಲಿ ಬಾ" ಎಂದು ಹೇಳಿದ.

ಮೂವರು ಮುಂದೆ ನಡೆದರು.

ಅಲ್ಲಿಗೆ ಸುಮಾರು ಕಾಲು ಮೈಲಿಯ ಆಚೆ ಅವರಿಗೆ ಎರಡು ಪಾದಗಳೂ ಕಾಲುಗಳ ಕೆಳಭಾಗಗಳೂ ಕಾಣಿಸಿದವು. ಮೊದಲು ಇನ್ನೇನೂ

ಕಾಣಿಸಲಿಲ್ಲ. ಅವರು ಮುಂದಕ್ಕೆ ಎಷ್ಟೋ ದೂರ ನಡೆದ ಮೇಲೆ ದೇಹದ ಇತರ ಭಾಗಗಳನ್ನೂ ತಲೆಯನ್ನೂ ಕಂಡರು.

ರಾಜಕುಮಾರನಿಗೆ ಆಶ್ಚರ್ಯವಾಯಿತು. "ಯಾರಯ್ಯ ನೀನು? ಇಷ್ಟು ಉದ್ದವಾಗಿದ್ದೀಯು!" ಎಂದನು.

ಅಲ್ಲಿ ಮಲಗಿದ್ದವನು "ಹೌದು, ನಾನು ಉದ್ದವಾಗಿದ್ದೇನೆ. ಪೂರ್ತಿಯಾಗಿ ಕಾಲು ಚಾಚಿದರೆ ಈಗಿರುವುದಕ್ಕಿಂತಲೂ ಮೂರು ಸಾವಿರದಷ್ಟು ಉದ್ದವಾಗುತ್ತೇನೆ. ನಾನು ನಿಂತುಕೊಂಡರೆ ಪ್ರಪಂಚದಲ್ಲಿರುವ ಯಾವ ಪರ್ವತವೂ ನನ್ನ ಎದೆಯ ಮಟ್ಟಕ್ಕೆ ಬರುವುದಿಲ್ಲ. ನೀನು ಒಪ್ಪಿದರೆ ನಿನ್ನ ಸೇವಕನಾಗಲು ಸಿದ್ಧನಾಗಿದ್ದೇನೆ" ಎಂದ.

ರಾಜಕುಮಾರ "ಹಾಗಾದರೆ ಬಾ, ನಿನ್ನಿಂದಲೂ ಉಪಯೋಗವಾಗಬಹುದು" ಎಂದ.

ನಾಲ್ಕು ಮಂದಿಯೂ ಮುಂದೆ ನಡೆದು ಹೋದರು. ಕೊಂಚ ದೂರದ ಆಚೆ ದಾರಿಯ ಬದಿಯಲ್ಲಿ ಕಣ್ಣುಗಳೆರಡಕ್ಕೂ ಬಲವಾಗಿ ಬಟ್ಟೆಯನ್ನು ಬಿಗಿದುಕೊಂಡಿದ್ದವನೊಬ್ಬ ಕುಳಿತಿದ್ದ. ರಾಜಕುಮಾರ ಬಹುಶಃ ಅವನ ಕಣ್ಣುಗಳು ಬಹಳ ನಿರ್ಬಲವಾಗಿದ್ದುವೆಂದೂ ಬೆಳಕನ್ನು ತಡೆದುಕೊಳ್ಳಲು ಅವುಗಳಿಗೆ ಅಸಾಧ್ಯವಾಗಿದ್ದಿತೆಂದೂ ಭಾವಿಸಿ, ಅವನು ಕಣ್ಣು ಕಟ್ಟಿಕೊಂಡಿದ್ದುದಕ್ಕೆ ಕಾರಣವೇನೆಂದು ಕೇಳಿದ.

ಅವನು "ಇಲ್ಲ. ನನ್ನ ಕಣ್ಣುಗಳ ದೃಷ್ಟಿ ಬೆಂಕಿಯ ಹಾಗೆ ತೀಕ್ಷ್ಣವಾದುದು. ನಾನು ಕಣ್ಣುಬಿಟ್ಟು ನೋಡಿದರೆ ಎದುರಿಗಿರುವ ಪದಾರ್ಥಗಳೆಲ್ಲಾ ಲಟಲಟನೆ ಛಿದ್ರವಾಗಿ ಚೂರುಚೂರಾಗಿ ಹೋಗುತ್ತವೆ. ಆದ್ದರಿಂದಲೆ ಸದಾ ಕಣ್ಣಿಗೆ ಬಟ್ಟೆ ಬಿಗಿದೇ ಇರುತ್ತೇನೆ. ನನ್ನಲ್ಲಿರುವ ಶಕ್ತಿ ಇಂತಹುದು. ಇದರಿಂದ ನಿನಗೆ ಏನಾದರೂ ಉಪಯೋಗವಿದ್ದರೆ ನನ್ನನ್ನು ನಿನ್ನ ಸೇವಕನಾಗಿ ನೇಮಿಸಿಕೊ" ಎಂದ.

ರಾಜಕುಮಾರ "ಬಾ, ಹೊರಡು; ನಿನ್ನಿಂದಲೂ ನನಗೆ ಪ್ರಯೋಜನವಾಗಬಹುದು" ಎಂದ.

ಅವರೆಲ್ಲರೂ ಒಟ್ಟಿಗೆ ಮುಂದೆ ನಡೆದರು. ಮಧ್ಯಾಹ್ನವಾಯಿತು. ಬಿಸಿಲು ಬಹಳವಾಯಿತು. ಆಗ ಅವರಿಗೆ ಬಿಸಿಲಿನಲ್ಲಿ ನಿಂತು ತರ ತರ

ತರ ತರ ನಡುಗುತ್ತಿದ್ದ ಒಬ್ಬನು ಕಾಣಿಸಿದ. ಅವನ ದೇಹದ ರೋಮ ರೋಮವೂ ನಡುಗುತ್ತಿತ್ತು.

ರಾಜಕುಮಾರ "ಏನಯ್ಯಾ ಇದು? ಬಿಸಿಲು ನೋಡಿದರೆ ಸಹಿಸುವುದಕ್ಕೆ ಆಗದ ಹಾಗಿದೆ; ನೀನಾದರೆ ಮಂಜಿನಗಡ್ಡೆಗಳ ಮಧ್ಯೆ ಇರುವವನ ಹಾಗೆ ನಡುಗುತ್ತಿದ್ದೀಯ!" ಎಂದ.

ಅವನು "ನನ್ನ ಸ್ವಭಾವ ಇತರರ ಸ್ವಭಾವದ ಹಾಗಲ್ಲ. ಹೊರಗಡೆ ಬಿಸಿಲು, ಸೆಖೆ, ಹೆಚ್ಚಿದ ಹಾಗೆಲ್ಲಾ ನನಗೆ ಚಳಿ ಹೆಚ್ಚುತ್ತದೆ, ನಡುಕ ಹುಟ್ಟುತ್ತದೆ. ಹೊರಗಡೆ ಶೀತವಾಗಿದ್ದರೆ ನನಗೆ ಸೆಖೆ ಹೆಚ್ಚಾಗಿ ಬೆವರು ಸುರಿಯುತ್ತದೆ. ಹಿಮದ ನಡುವೆ ನಿಂತಿದ್ದರೆ ಸೆಖೆಯಿಂದ ನನಗೆ ಉಸಿರಾಡುವುದಕ್ಕೇ ಆಗುವುದಿಲ್ಲ. ಕಮ್ಮಾರರ ಕುಲುಮೆಯಲ್ಲಿ ಹೋಗಿ ಕೂತರೆ ಚಳಿಯಿಂದ ಮೈಯೆಲ್ಲಾ ಗಡ್ಡೆಕಟ್ಟಿಹೋಗುತ್ತದೆ" ಎಂದು ಉತ್ತರ ಕೊಟ್ಟ.

ರಾಜಕುಮಾರ "ನೀನೊಬ್ಬ ವಿಚಿತ್ರ ಮನುಷ್ಯ! ನನ್ನ ಸೇವಕನಾಗಲು ಇಷ್ಟವಿದ್ದರೆ ಇವರೆಲ್ಲರ ಜೊತೆಗೆ ನೀನೂ ಬಾ" ಎಂದ.

ಅವರು ಮುಂದೆ ನಡೆದುಹೋದರು. ದಾರಿಯಲ್ಲಿ ಒಂದು ಅಡಕೆಯ ಮರದಷ್ಟು ಉದ್ದವಾದ ಕುತ್ತಿಗೆಯಿದ್ದ ಮನುಷ್ಯನೊಬ್ಬ ನಿಂತುಕೊಂಡು ಸುತ್ತಲೂ ಕತ್ತು ತಿರುಗಿಸಿ ಪರ್ವತಗಳ ಆಚೆ ಇದ್ದುದನ್ನೆಲ್ಲಾ ನೋಡುತ್ತಿದ್ದ.

ರಾಜಕುಮಾರ "ಇಷ್ಟೊಂದು ಗಮನವಿಟ್ಟು ಏನು ನೋಡುತ್ತಿದ್ದೀಯ?" ಎಂದು ಅವನನ್ನು ಕೇಳಿದ.

ಅವನು "ನನ್ನ ಕಣ್ಣು ಬಹಳ ಸೂಕ್ಷ್ಮ. ಪ್ರಪಂಚದ ಮೂಲೆ ಮೂಲೆಗಳಲ್ಲಿ ಎಲ್ಲಿ ಏನಿದ್ದರೂ ನನಗೆ ಕಾಣುತ್ತದೆ" ಎಂದ.

ರಾಜಕುಮಾರ "ಹಾಗಾದರೆ ನೀನೂ ನನ್ನ ಸಂಗಡ ಬಾ. ನಿನ್ನಂಥವನನ್ನು ಬಿಟ್ಟುಹೋಗುವುದುಂಟೆ?" ಎಂದ.

ಆಮೇಲೆ ಸ್ವಲ್ಪ ಹೊತ್ತಿಗೆ ರಾಜಕುಮಾರನೂ ಅವನ ಆರು ಮಂದಿ ಅಸಾಧಾರಣರಾದ ಸೇವಕರೂ ರಾಣಿಯಿದ್ದ ಊರನ್ನು ಸೇರಿದರು. ರಾಜಕುಮಾರ ನೇರವಾಗಿ ರಾಣಿಯ ಬಳಿಗೆ ಹೋಗಿ, ತಾನು ಯಾರೆಂಬುದನ್ನು ಅವಳಿಗೆ ತಿಳಿಸದೆ, ರಾಜಕುಮಾರಿಯನ್ನು ತನಗೆ ಮದುವೆ ಮಾಡಿಕೊಡ

ಬೇಕೆಂದೂ, ಅದಕ್ಕೆ ಪ್ರತಿಯಾಗಿ ತಾನು ಯಾವ ಕೆಲಸವನ್ನು ಬೇಕಾದರೂ ಮಾಡುವುದಾಗಿಯೂ ಹೇಳಿದ.

ಸೊಗಸಾದ ವೈಕಟ್ಟುಳ್ಳ ಸುಂದರನಾದ ಇನ್ನೊಬ್ಬ ಯುವಕ ತನ್ನ ಬಲೆಗೆ ಬೀಳಲು ಬಂದುದನ್ನು ಕಂಡು ಆ ಮಾಟಗಾತಿಗೆ ಬಹಳ ಸಂತೋಷ ವಾಯಿತು. ಅವಳು "ನಾನು ನಿನಗೆ ಮೂರು ಕೆಲಸಗಳನ್ನು ಹೇಳುತ್ತೇನೆ. ಅವೆಲ್ಲವನ್ನೂ ಮಾಡಿ ಮುಗಿಸಿದರೆ ನೀನು ನನ್ನ ಮಗಳನ್ನು ಮದುವೆ ಯಾಗಬಹುದು" ಎಂದಳು.

ರಾಜಕುಮಾರ "ಮೊದಲನೆಯ ಕೆಲಸ ಯಾವುದು?" ಎಂದು ಉತ್ಸಾಹದಿಂದ ಕೇಳಿದ.

ಅವಳು "ನಾನು ಸಮುದ್ರದ ತಳಕ್ಕೆ ಒಂದು ಉಂಗುರವನ್ನು ಎಸೆದು ಬಂದಿದ್ದೇನೆ. ನೀನು ಅದನ್ನು ಹುಡುಕಿ ತಂದುಕೊಡಬೇಕು" ಎಂದಳು.

ರಾಜಕುಮಾರ ತನ್ನ ಸೇವಕರಿದ್ದ ಸ್ಥಳಕ್ಕೆ ಹೋಗಿ "ಗೆಳೆಯರೆ, ನಾನು ಮಾಡಬೇಕಾಗಿರುವ ಮೊದಲನೆಯ ಕೆಲಸವೇ ಕಷ್ಟವಾಗಿರುವ ಹಾಗೆ ಕಾಣುತ್ತದೆ. ಸಮುದ್ರದ ತಳದಿಂದ ಒಂದು ಉಂಗುರವನ್ನು ಹುಡುಕಿ ಮೇಲಕ್ಕೆ ತರಬೇಕು. ಎಲ್ಲಾದರೂ ಸಾಧ್ಯವೆ?" ಎಂದ.

ಬೆಂಕಿಯ ಕಣ್ಣಿನ ಮನುಷ್ಯ "ಉಂಗುರ ಸಮುದ್ರದಲ್ಲಿ ಎಲ್ಲದ ಎಂದು ನಾನು ನೋಡಿ ಹೇಳುತ್ತೇನೆ? ಎನ್ನುತ್ತಾ ತನ್ನ ಕಣ್ಣುಗಳೆರಡನ್ನೂ ಸಮುದ್ರದ ಕಡೆಗೆ ತಿರುಗಿಸಿ ದುರುಗುಟ್ಟಿಕೊಂಡು ನೀರಿನಲ್ಲೆಲ್ಲಾ ನೋಡಿದ. ಕಡೆಗೆ "ಅದು ಒಂದು ಬಂಡೆಯ ಮೇಲೆ ಚೂಪಾದ ಕಲ್ಲಿನ ತುದಿಯಲ್ಲಿ ಸಿಕ್ಕಿಕೊಂಡು ನೇತಾಡುತ್ತಿದೆ" ಎಂದ.

ಉದ್ದನೆಯಮನುಷ್ಯ "ಅದು ನನ್ನ ಕಣ್ಣಿಗೆ ಕಾಣುವಹಾಗಿದ್ದಿದ್ದರೆ ಒಂದು ಸಾರಿ ಕೈಚಾಚಿ ಈಚೆಗೆ ತೆಗೆದುಬಿಡುತ್ತಿದ್ದೆ" ಎಂದ.

ಇದನ್ನು ಕೇಳಿ ದಪ್ಪಹೊಟ್ಟೆಯವನು "ಇಷ್ಟೇ ತಾನೆ ನಿನ್ನ ಕಷ್ಟ!" ಎನ್ನುತ್ತಾ ಸಮುದ್ರದ ತೀರಕ್ಕೆ ಇಳಿದು ನೀರಿಗೆ ಸರಿಯಾಗಿ ತನ್ನ ತೆರೆದ ಬಾಯನ್ನು ಒಡ್ಡಿ ಕುಳಿತ. ಅಲೆಗಳು ಪೊಟ್ಟರೆಯಂತಿದ್ದ ಅವನ ಬಾಯಿ ಯೊಳಕ್ಕೆ ನುಗ್ಗಿ ಸದ್ದು ಮಾಡಿದವು. ಹಾಗೆಯೇ ಅವನು ಸಮುದ್ರದಲ್ಲಿದ್ದ

ನೀರನ್ನೆಲ್ಲಾ ಹೀರಿ ಕುಡಿದುಬಿಟ್ಟ. ಸಮುದ್ರದ ತಳದಲ್ಲಿ ಒಂದು ಬೊಗಸೆ ನೀರೂ ಉಳಿಯಲಿಲ್ಲ.

ಆಗ ಉದ್ದನೆಯ ಮನುಷ್ಯ ಸ್ವಲ್ಪ ಮುಂದಕ್ಕೆ ಬಾಗಿ ಕೈಚಾಚಿ ಉಂಗುರವನ್ನು ಮೇಲಕ್ಕೆ ತೆಗೆದ.

ಸಂತೋಷದಿಂದ ಕುಣಿದಾಡುತ್ತ ರಾಜಕುಮಾರ ಉಂಗುರವನ್ನು ತೆಗೆದುಕೊಂಡು ಹೋಗಿ ಮಾಟಗಾತಿಗೆ ಕೊಟ್ಟ.

ಅವಳು ಅವನಿಂದ ಈ ಕೆಲಸ ಆಗುವುದಿಲ್ಲ ಎಂದುಕೊಂಡಿದ್ದಳು. ಆದ್ದರಿಂದ ಅವನು ಉಂಗುರವನ್ನು ತಂದುದನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. ಆದರೂ ಅವಳು ಮೆಚ್ಚಿಕೆಯನ್ನು ನಟಿಸುತ್ತ "ಮೊದಲನೆಯ ಕೆಲಸವೇನೋ ಆಯಿತು. ಇನ್ನು ಎರಡನೆಯ ಕೆಲಸವಿದೆ. ಅಲ್ಲಿ ನೋಡು. ಹೊರಗಡೆ ಹುಲ್ಲುಗಾವಲಿನಲ್ಲಿ ಮುನ್ನೂರು ಕೋಣಗಳು ಮೇಯುತ್ತಿವೆ. ನೀನು ಅವನ್ನೆಲ್ಲಾ ತಿಂದು ಹಾಕಬೇಕು. ಕೂದಲು, ಕೊಂಬು, ಎಲುಬು ಏನೊಂದನ್ನೂ ಬಿಡಕೂಡದು. ಹಾಗೆಯೇ ಅರಮನೆಯ ಉಗ್ರಾಣದಲ್ಲಿ ಮುನ್ನೂರು ಪೀಪಾಯಿ ಹೆಂಡವಿದೆ. ಕೋಣವನ್ನು ತಿಂದುದು ಮುಗಿದ ಮೇಲೆ ನೀನು ಅಷ್ಟು ಹೆಂಡವನ್ನೂ ಕುಡಿಯಬೇಕು. ಒಂದು ತೊಟ್ಟು ಏನಾದರೂ ಉಳಿಯಿತೋ ನಿನಗೆ ಸಾವು ಖಂಡಿತ" ಎಂದಳು.

ರಾಜಕುಮಾರ "ಒಪ್ಪಿದೆ. ಆದರೆ ನನ್ನ ಜೊತೆಗೆ ಒಬ್ಬ ಸ್ನೇಹಿತನನ್ನು ಕರೆತರುವುದಕ್ಕೆ ಅನುಮತಿ ಕೊಡು. ಇಷ್ಟೊಂದು ಸಮೃದ್ಧಿಯಾದ ಊಟ ಜೊತೆಗೆ ಯಾರೂ ಇಲ್ಲದಿದ್ದರೆ ರುಚಿಸುವುದಿಲ್ಲ; ಒಬ್ಬನೇ ಕೂತು ತಿನ್ನುವುದಕ್ಕೆ ಬೇಜಾರಾಗುತ್ತದೆ" ಎಂದ.

ಮಾಟಗಾತಿ ಒಂದು ಸಾರಿ ಕೆಟ್ಟ ನಗೆ ನಕ್ಕು "ಬೇಕಾದರೆ ಒಬ್ಬನೇ ಒಬ್ಬ ಮನುಷ್ಯನನ್ನು ನಿನ್ನ ಜೊತೆಗೆ ಸೇರಿಸಿಕೊಳ್ಳಬಹುದು. ಒಬ್ಬನಿಗಿಂತಲೂ ಹೆಚ್ಚಿಗೆ ಮಾತ್ರ ಕೂಡದು" ಎಂದಳು.

ರಾಜಕುಮಾರ ತನ್ನ ಸೇವಕರ ಹತ್ತಿರಕ್ಕೆ ಹಿಂದಿರುಗಿ ದಪ್ಪಹೊಟ್ಟೆಯವನನ್ನು ನೋಡಿ "ಏಳು, ಈವತ್ತು ನೀನು ನನಗೆ ಅತಿಥಿಯಾಗಬೇಕು; ಬೇಗ ಹೊರಡು, ನಿನ್ನ ಜನ್ಮದಲ್ಲಿ ಎಂದೂ ತಿನ್ನದಷ್ಟು ಆಹಾರವನ್ನು

ತಿನ್ನುವೆಯಂತೆ" ಎಂದ.

ದಪ್ಪಹೊಟ್ಟೆಯವನು ಸೊಂಟಕ್ಕೆ ಬಿಗಿದಿದ್ದ ನಡುಪಟ್ಟಿಯನ್ನು ಬಿಚ್ಚಿದ. ಅವನ ಹೊಟ್ಟೆ ಮೊದಲಿದ್ದುದಕ್ಕಿಂತ ಸಾವಿರದಷ್ಟು ದೊಡ್ಡದಾಯಿತು. ಆಮೇಲೆ ಮುನ್ನೂರು ಕೋಣಗಳನ್ನು ತಿನ್ನುವುದು ಅವನಿಗೆ ಸ್ವಲ್ಪವೂ ಕಷ್ಟವಾಗಲಿಲ್ಲ. ಒಂದು ಎಲುಬಿನ ಚೂರನ್ನೂ ಬಿಡದೆ ಎಲ್ಲವನ್ನೂ ನುಂಗಿ, "ಇನ್ನೂ ಏನಾದರೂ ಇದೆಯೆ?" ಎಂದು ಕೇಳಿದ. ಮತ್ತೆ ಮುನ್ನೂರು ಕೋಣಗಳು ಸಿಕ್ಕಿದರೂ ಅವನು ತಿಂದುಹಾಕುತ್ತಿದ್ದ. ಅವನ ಹೊಟ್ಟೆಯಲ್ಲಿ ಅಷ್ಟು ಸ್ಥಳವಿತ್ತು. ಅನಂತರ ಅವನು ಮುನ್ನೂರು ಸೀಪಾಯಿಗಳ ತುಂಬಾ ಇದ್ದ ಸೊರೆಸೊರೆಯಾದ ಹುಳಿಯ ಹೆಂಡವನ್ನು ಒಂದು ತೊಟ್ಟೂ ಬಿಡದೆ ಕುಡಿದ.

ರಾಜಕುಮಾರ ಮಾಟಗಾತಿಯ ಬಳಿಗೆ ಹೋಗಿ ಅವಳು ಕೊಟ್ಟಿದ್ದ ಎರಡನೆಯ ಕೆಲಸವೂ ಪೂರ್ತಿಯಾಗಿ ಮುಗಿಯಿತೆಂದು ಹೇಳಿದ. ಇದನ್ನು ಕೇಳಿ ಅವಳು ಅತ್ಯಾಶ್ಚರ್ಯದಿಂದ ಬೆಚ್ಚಿಬಿದ್ದಳು. "ಇದುವರೆಗೂ ನಾನು ಹೇಳಿದ ಕೆಲಸಗಳಲ್ಲಿ ಒಂದನ್ನು ಮಾಡಿದವರೂ ಇಲ್ಲ. ನೀನು ಎರಡನ್ನು ಪೂರೈಸಿರುವೆ. ಆದರೂ ಇನ್ನೊಂದು ಉಳಿದಿದೆ. ಇದು ಎಲ್ಲಕ್ಕಿಂತಲೂ ಕಷ್ಟವಾದುದು. ಇದರ ಫಲವಾಗಿ ನಿನ್ನ ತಲೆ ಹೋಗುವುದು ಖಂಡಿತ" ಎಂದಳು.

ರಾಜಕುಮಾರ ಕುತೂಹಲದಿಂದ "ಯಾವುದು ಆ ಕೆಲಸ? ಹೇಳಿಬಿಡಬಾರದೆ?" ಎಂದು ಕೇಳಿದ.

ರಾಣಿ "ಈ ದಿನ ಸಾಯಂಕಾಲ ನಾನು ನನ್ನ ಮಗಳನ್ನು ನಿನ್ನ ಕೋಣೆಗೆ ಕರೆತಂದು ಬಿಟ್ಟು ಬರುತ್ತೇನೆ. ನೀನು ಎರಡು ತೋಳುಗಳಿಂದಲೂ ಅವಳನ್ನು ಅಪ್ಪಿಕೊಂಡು ಕುಳಿತುಕೊಳ್ಳಬಹುದು, ಆದರೆ ನಿದ್ದೆ ಮಾತ್ರ ಹೋಗಕೂಡದು, ಎಚ್ಚರವಾಗಿಯೇ ಇರಬೇಕು. ನಾನು ಮತ್ತೆ ಮಧ್ಯರಾತ್ರಿ ಹನ್ನೆರಡು ಗಂಟೆಗೆ ಸರಿಯಾಗಿ ಬರುತ್ತೇನೆ. ಆಗ ಅವಳೇನಾದರೂ ಅಲ್ಲಿಲ್ಲದೆ ಮಾಯವಾಗಿದ್ದರೆ ನಿನ್ನ ಗತಿ ಮುಗಿದಂತೆಯೆ!" ಎಂದಳು.

ರಾಜಕುಮಾರ "ಇದೇನೂ ಅಷ್ಟು ಕಷ್ಟವಾದ ಕೆಲಸವಾಗಿ ತೋರುವುದಿಲ್ಲ. ರಾಜಕುಮಾರಿ ನನ್ನ ತೋಳುಗಳಲ್ಲಿ ಸಿಕ್ಕಿಬಿದ್ದಿರುವಾಗ ಕಣ್ಣು ಮುಚ್ಚಿಕೊಂಡು ನಿದ್ದೆ ಮಾಡಲು ನಾನೇನು ಹೆಡ್ಡನೆ?" ಎಂದು ಮನಸ್ಸಿನಲ್ಲೇ ಯೋಚಿಸಿ, ಆ ಕೆಲಸವನ್ನೂ ಮಾಡುವುದಾಗಿ ಒಪ್ಪಿಕೊಂಡು, ತನ್ನ ಸೇವಕರಿದ್ದ ಸ್ಥಳಕ್ಕೆ ಬಂದು ಎಲ್ಲವನ್ನೂ ಅವರಿಗೆ ತಿಳಿಸಿದ. "ಈ ಕೆಲಸವೇನೋ ಸುಲಭವಾಗಿ ತೋರುತ್ತದೆ. ಆದರೆ ಆ ಮಾಟಗಾತಿ ಏನೇನು ಮೋಸ ಮಾಡಲು ಹವಣಿಸಿದ್ದಾಳೋ ಹೇಳುವುದು ಹೇಗೆ? ಆದ್ದರಿಂದ ನೀವೆಲ್ಲಾ ಜೋಪಾನವಾಗಿ ಕಾವಲಿದ್ದು ರಾಜಕುಮಾರಿ ನನ್ನ ಕೋಣೆಯಿಂದ ತಪ್ಪಿಸಿಕೊಳ್ಳದ ಹಾಗೆ ನೋಡಿಕೊಳ್ಳಬೇಕು" ಎಂದು ಅವರನ್ನು ಕೋರಿದ.

ಕತ್ತಲಾದ ಕೂಡಲೆ ಮಾಟಗಾತಿ ಮಗಳನ್ನು ರಾಜಕುಮಾರನ ಕೋಣೆಗೆ ಕರೆತಂದು ಅವನ ತೊಡೆಯ ಮೇಲೆ ಕೂಡಿಸಿ ಹೋದಳು. ರಾಜಕುಮಾರ ಅವಳನ್ನು ಎರಡು ತೋಳುಗಳಿಂದಲೂ ಬಿಗಿಯಾಗಿ ಅಪ್ಪಿಕೊಂಡು ಕುಳಿತ. ಅನಂತರ ಉದ್ದನೆಯ ದೇಹದವನು ಅವರಿಬ್ಬರ ಸುತ್ತಲೂ ತನ್ನ ಮೈಯನ್ನು ಚಕ್ರದ ಹಾಗೆ ಸುರಳಿ ಮಾಡಿಕೊಂಡು ಮಲಗಿಧ. ಯಾರಿಗೂ ಹೊರಕ್ಕೆ ಹೋಗುವುದಕ್ಕಾಗಲಿ ಒಳಕ್ಕೆ ಬರುವುದಕ್ಕಾಗಲಿ ಆಸ್ಪದವಿಲ್ಲದಂತೆ ದಪ್ಪಹೊಟ್ಟೆಯವನು ಕೋಣೆಯ ಬಾಗಿಲಿಗೆ ಅಡ್ಡವಾಗಿ ಕುಳಿತ. ರಾಜಕುಮಾರಿ ಒಂದು ಮಾತನ್ನೂ ಆಡಲಿಲ್ಲ. ಚಂದ್ರನ ಕಿರಣಗಳು ಕಿಟಕಿಯ ಮೂಲಕ ಕೋಣೆಯನ್ನು ಪ್ರವೇಶಿಸಿ ಅವಳ ಮುಖವನ್ನು ಬೆಳಗಿದವು. ರಾಜಕುಮಾರ ಸುಮ್ಮನೆ ಅವಳನ್ನು ನೋಡುತ್ತ ಕುಳಿತುಬಿಟ್ಟ. ಅವನ ಹೃದಯ ಆನಂದದಿಂದಲೂ ಪ್ರೇಮದಿಂದಲೂ ತುಂಬಿಹೋಗಿತ್ತು. ಅವಳನ್ನು ಎಷ್ಟು ನೋಡಿದರೂ ಅವನ ಕಣ್ಣಿಗೆ ಸಾಕಾಗಲಿಲ್ಲ, ಮನಸ್ಸಿಗೆ ತೃಪ್ತಿಯಾಗಲಿಲ್ಲ. ಹೀಗೆಯೇ ಇರಲು ರಾತ್ರಿ ಹನ್ನೊಂದು ಗಂಟೆಯಾಯಿತು. ಮಾಟಗಾತಿ ಅವರೆಲ್ಲರ ಮೇಲೂ ತನ್ನ ಮಾಯೆಯನ್ನು ಬೀಸಿದಳು. ಎಲ್ಲರಿಗೂ ತಡೆಯಲಾರದಷ್ಟು ನಿದ್ದೆ ಬಂತು. ಆಗ ರಾಣಿ ರಾಜಕುಮಾರಿಯನ್ನು ಹೊರಕ್ಕೆ ಎತ್ತಿಕೊಂಡು ಹೋಗಿ ತನ್ನ ಮಂತ್ರಶಕ್ತಿಯಿಂದ ಯಾರಿಗೂ ತಿಳಿಯದ ಕಡೆ

ಮುಚ್ಚಿಟ್ಟಳು. ಹನ್ನೊಂದೂಮುಕ್ಕಾಲು ಗಂಟೆಯವರೆಗೂ ಒಬ್ಬನಿಗೂ ಎಚ್ಚರವಾಗಲಿಲ್ಲ. ಅಷ್ಟು ಹೊತ್ತಿಗೆ ಸರಿಯಾಗಿ ರಾಣಿಯ ಮಾಟ ಮುಗಿಯಿತು. ಎಲ್ಲರಿಗೂ ಎಚ್ಚರಿಕೆಯಾಯಿತು.

ರಾಜಕುಮಾರ ಕಣ್ಣು ತೆರೆಯುತ್ತಲೇ "ಅಯ್ಯಯ್ಯೋ! ಎಂಥ ಕೆಲಸ ವಾಗಿಹೋಯಿತು! ಇನ್ನು ನನ್ನ ಜೀವ ಉಳಿಯುವುದಿಲ್ಲ. ನಾನು ಕೆಟ್ಟೆ" ಎನ್ನುತ್ತ ಮೇಲಕ್ಕೆದ್ದ.

ಅವನ ಸೇವಕರೆಲ್ಲಾ ಕೈ ಕೈ ಹಿಸುಕಿಕೊಂಡರು. ಕಡೆಗೆ ಘೂಟಿಯಾದ ಕಿವಿಗಳಿದ್ದವನು "ಎಲ್ಲರೂ ಸುಮ್ಮನಿರಿ" ಎಂದು ಎಲ್ಲಾ ಕಡೆಗೂ ತನ್ನ ಕಿವಿಗಳನ್ನು ತಿರುಗಿಸಿ, ಒಂದು ದಿಕ್ಕಿನಲ್ಲಿ ಸ್ವಲ್ಪ ಹೊತ್ತು ಒಂದೇ ಸಮನೆ ಕೇಳಿ ಏನನ್ನೋ ಕೇಳುತ್ತಿರುವವನಂತೆ ನಿಂತು, "ಅವಳು ಇಲ್ಲಿಂದ ಮುನ್ನೂರು ಗಂಟೆಗಳ ಪ್ರಯಾಣದ ದೂರದಲ್ಲಿರುವ ಒಂದು ಬಂಡೆಯ ಕೆಳಗೆ ಕುಳಿತು ತನ್ನ ದೌರ್ಭಾಗ್ಯವನ್ನು ನೆನೆಸಿಕೊಂಡು ಅಳುತ್ತಿದ್ದಾಳೆ. ಈಗ ಉದ್ದನೆಯ ದೇಹದವನು ನಮಗೆ ಸಹಾಯ ಮಾಡಬೇಕು. ಎರಡು ಮೂರು ಹೆಜ್ಜೆ ಇಟ್ಟರೆ ಅವನು ಅಲ್ಲಿಗೆ ಹೋಗಬಹುದು" ಎಂದ.

ಉದ್ದನೆಯ ದೇಹದವನು "ಅಗತ್ಯವಾಗಿ ಆಗಬಹುದು. ಆದರೆ ಬೆಂಕಿಯ ಕಣ್ಣಿನವನೂ ನನ್ನ ಜೊತೆಗೆ ಬರಬೇಕು. ಇಲ್ಲದಿದ್ದರೆ ಬಂಡೆ ಯನ್ನು ಭೇದಿಸುವುದು ನನ್ನಿಂದ ಎಲ್ಲಾಗುತ್ತದೆ?" ಎಂದು ಹೇಳಿ, ಬೆಂಕಿಯ ಕಣ್ಣಿನವನನ್ನು ಭುಜದ ಮೇಲೆ ಕೂಡಿಸಿಕೊಂಡು ಬೆರಳಿನಿಂದ ಒಂದು ನೆಟಿಕೆ ಮುರಿಯುವಷ್ಟರಲ್ಲಿ ರಾಜಕುಮಾರಿ ಹುದುಗಿದ್ದ ಮಾಟದ ಬಂಡೆಯಿದ್ದ ಸ್ಥಳಕ್ಕೆ ಹೋದ. ಅಲ್ಲಿ ಅವನು ತನ್ನ ಕಣ್ಣಿನ ಸುತ್ತಲೂ ಬಿಗಿದುಕೊಂಡಿದ್ದ ಪಟ್ಟೆಯನ್ನು ಬಿಚ್ಚಿದ. ಅವನು ಒಂದು ಸಾರಿ ಕಣ್ಣು ತೆರೆದು ನೋಡಿದ ಕೂಡಲೆ ಆ ಬಂಡೆ ಪುಡಿಪುಡಿಯಾಯಿತು. ಉದ್ದನೆಯ ದೇಹದವನು ರಾಜಕುಮಾರಿಯನ್ನು ಎತ್ತಿಕೊಂಡು ತನ್ನ ಒಡೆಯನಿದ್ದ ಕೋಣೆಗೆ ಹಿಂತಿರುಗಿದ. ಹನ್ನೆರಡು ಗಂಟೆ ಹೊಡೆದ ಕೂಡಲೆ ರಾಣಿ ಅಲ್ಲಿಗೆ ಬಂದು ನೋಡಿದಾಗ ಎಲ್ಲವೂ ಅವಳ ಮಾಟಕ್ಕೆ ಮೊದಲು ಇದ್ದ ಹಾಗೆಯೇ ಇತ್ತು. "ಈ ಸಾರಿ ಇವನು ತನ್ನ ಬಲೆಗೆ ಬೀಳುವುದು ಖಂಡಿತ" ಎಂದು ಹಿಗ್ಗುತ್ತಾ ಅಲ್ಲಿಗೆ ಬಂದ ಆ ಮಾಟಗಾತಿ ತನ್ನ ಮಗಳು

ಇನ್ನೂ ರಾಜಕುಮಾರನ ತೋಳುಗಳ ಬಂಧನದಲ್ಲೇ ಇದ್ದುದನ್ನು ಕಂಡು, "ಇವನು ನನಗಿಂತಲೂ ಹೆಚ್ಚು ಅದ್ಭುತಗಳನ್ನು ಮಾಡಬಲ್ಲ" ಎಂದು ಹೆದರಿಕೆಯಿಂದ ಗೊಣಗಿಕೊಂಡಳು.

ಇನ್ನು ಉಳಿದಿದ್ದುದು ರಾಣಿಯು ಮಗಳನ್ನು ರಾಜಕುಮಾರನಿಗೆ ಕೊಟ್ಟು ಮದುವೆ ಮಾಡುವುದೊಂದೆ. ಆಗ ಆ ಮೋಸಗಾತಿ ಮಗಳ ಕಿವಿಯಲ್ಲಿ "ನೀನೆಂತಹ ಬೆಪ್ಪು! ಇತರರ ಮಾತನ್ನು ಕೇಳಿ ಇವನನ್ನು ಮದುವೆಯಾಗಲು ಒಪ್ಪಿಕೊಂಡಿರುವೆ. ನಿನಗೆ ಇಷ್ಟಬಂದವನನ್ನು ಮದುವೆ ಯಾಗಲು ಯೋಗ್ಯತೆ ನಿನಗಿಲ್ಲವೆ?" ಎಂದು ಕೆಣಕಿದಳು.

ರಾಜಕುಮಾರಿಯು ಗರ್ವಕ್ಕೆ ಈ ಮಾತಿನಿಂದ ಭಂಗ ಬಂದಿತು. ಮಾರನೆಯ ದಿನ ಅವಳು ಮುನ್ನೂರು ದೊಡ್ಡ ದೊಡ್ಡ ಮರದ ತೊಲೆ ಗಳನ್ನು ಒಂದು ಕಡೆ ರಾಸಿಹಾಕಿಸಿ, ಅದಕ್ಕೆ ಬೆಂಕಿ ಹೊತ್ತಿಸಿ, "ರಾಣಿ ಕೊಟ್ಟ ಕೆಲಸಗಳನ್ನೇನೋ ನೀನು ಪೂರ್ತಿಯಾಗಿ ಮಾಡಿ ಗೆದ್ದೆ. ಆದರೆ ನನ್ನದೂ ಒಂದು ಪರೀಕ್ಷೆ ಇರಲಿ. ನಿಮ್ಮಲ್ಲಿ ಯಾರಾದರೂ ಒಬ್ಬನು ತೊಲೆಗಳೆಲ್ಲಾ ಸುಟ್ಟು ಬೂದಿಯಾಗುವವರೆಗೂ ಈ ಬೆಂಕಿಯಲ್ಲಿ ಕೂತಿರ ಬೇಕು. ಹಾಗಾದರೆ ನಾನು ನಿನ್ನನ್ನು ಮದುವೆಯಾಗುತ್ತೇನೆ" ಎಂದು ರಾಜಕುಮಾರನಿಗೆ ತಿಳಿಸಿದಳು. ಸೇವಕರಾರೂ ಈ ಕೆಲಸಕ್ಕೆ ಒಪ್ಪುವು ದಿಲ್ಲ, ಆದ್ದರಿಂದ ನನ್ನ ಮೇಲಿನ ಪ್ರೇಮವನ್ನು ತೋರಿಸಲು ರಾಜ ಕುಮಾರನೇ ಬೆಂಕಿಗೆ ಬೀಳುತ್ತಾನೆ; ಅವನು ಸುಟ್ಟು ಬೂದಿಯಾಗುವುದು ನಿಜ; ಹೀಗಾದರೂ ಅವನ ಕಾಟವನ್ನು ತಪ್ಪಿಸಿಕೊಳ್ಳಬಹುದು ಎಂದು ಅವಳು ಯೋಚಿಸಿದ್ದಳು.

ರಾಜಕುಮಾರನ ಸೇವಕರು ತಮ್ಮತಮ್ಮಲ್ಲೇ ಮಾತಾಡಿಕೊಂಡರು. "ನಾವೆಲ್ಲಾ ಒಬ್ಬೊಬ್ಬರು ಒಂದೊಂದು ಕೆಲಸವನ್ನು ಮಾಡಿದ್ದೇವೆ. ಇದುವರೆಗೂ ಏನೂ ಮಾಡದೆ ಇರುವವನು ಬಿಸಿಲಿನಲ್ಲಿ ನಡುಗುವ ಈ ವಿಚಿತ್ರ ಮನುಷ್ಯ ಒಬ್ಬನೇ. ಈಗ ಇವನ ಸರದಿ" ಎಂದು ತೀರ್ಮಾನಿಸಿ, ಅವನನ್ನು ಬೆಂಕಿಯೊಳಕ್ಕೆ ನೂಕಿದರು. ಆ ಬೆಂಕಿ ಮೂರು ದಿನಗಳು ಒಂದೇ ಸಮನಾಗಿ ಉರಿಯಿತು. ಉರಿಯೆಲ್ಲಾ ಆರಿದ ಮೇಲೆ ನೋಡು ತ್ತಾರೆ, ಆ ಮನುಷ್ಯ ತರ ತರ ತರ ನಡುಗುತ್ತ "ಏನು ಚಳಿಯಪ್ಪ! ಏನು

ಚಳಿಯಪ್ಪ! ಇನ್ನೊಂದು ದಿವಸ ಹೀಗೇ ಇದ್ದಿದ್ದರೆ ಸತ್ತೇ ಹೋಗುತ್ತಿದ್ದೆ. ಅಬ್ಬಬ್ಬಾ! ಏನು ಚಳಿ! ಏನು ಚಳಿ!" ಎನ್ನುತ್ತ, ಹಲ್ಲು ಕಚ್ಚಿಕೊಂಡು ಬೂದಿಯ ಮಧ್ಯೆ ನಿಂತಿದ್ದ.

ಈಗ ರಾಜಕುಮಾರಿ ತಪ್ಪಿಸಿಕೊಳ್ಳುವ ಹಾಗೆಯೇ ಇರಲಿಲ್ಲ. ಅವನು ಯಾರು, ಯಾವ ಊರಿನವನು, ಎಂದು ಗೊತ್ತಿಲ್ಲದಿದ್ದರೂ ಅವಳು ರಾಜಕುಮಾರನನ್ನು ಮದುವೆಯಾಗಲೇ ಬೇಕಾಯಿತು. ಮದುವೆಯ ದಿನ ಮುದಿ ರಾಣಿ–ಮಾಟಗಾತಿ–"ನಾನು ಈ ಅವಮಾನವನ್ನು ಸಹಿಸಲಾರೆ" ಎಂದು ಮತ್ತೊಂದು ಆಟ ಹೂಡಿದಳು. ಹೊಸ ದಂಪತಿಗಳು ದೇವಸ್ಥಾನಕ್ಕೆ ಹೋಗಿ ಹಿಂದಿರುಗಿ ಬರುತ್ತಿದ್ದಾಗ ಗಂಡಿನ ಕಡೆಯವರ ಮೇಲೆ ಬಿದ್ದು ಅವರನ್ನು ಬೆದರಿಸಿ ಹೆಣ್ಣನ್ನು ಬಲವಂತದಿಂದ ಎತ್ತಿಕೊಂಡು ಬಂದು ಬಿಡುವಂತೆ ಅಪ್ಪಣೆಮಾಡಿ ಅವಳು ತನ್ನ ಸೈನಿಕರನ್ನು ಕಳುಹಿಸಿದಳು. ಆದರೆ ಥೂಟಿಯಾದ ಕಿವಿಗಳಿದ್ದ ಸೇವಕ ರಾಣಿ ತನ್ನ ಸೈನಿಕರಿಗೆ ಗುಟ್ಟಾಗಿ ಹೇಳುತ್ತಿದ್ದುದನ್ನೆಲ್ಲಾ ಕೇಳಿಬಿಟ್ಟ. ಅವನು ದಪ್ಪಹೊಟ್ಟೆಯವನ ಹತ್ತಿರಕ್ಕೆ ಹೋಗಿ, ತಾನು ಕೇಳಿದ್ದುದನ್ನೆಲ್ಲಾ ಅವನಿಗೆ ತಿಳಿಸಿ, "ಈಗೇನು ಮಾಡೋಣ?" ಎಂದ.

ದಪ್ಪಹೊಟ್ಟೆಯವನ ಮನಸ್ಸಿನಲ್ಲಿ ಶತ್ರುಗಳನ್ನು ಎದುರಿಸಲು ಒಂದು ಒಳ್ಳೆಯ ಉಪಾಯ ಸಿದ್ಧವಾಗಿಯೇ ಇತ್ತು. ರಾಣಿಯ ಸೈನಿಕರು ತಮ್ಮ ಮೇಲೆ ಬೀಳಲು ಬಂದಾಗ ತಾನು ಹಿಂದೆ ಕುಡಿದಿದ್ದ ಸಮುದ್ರದ ನೀರನ್ನೆಲ್ಲಾ ಬಾಯಿಯಿಂದ ಮುಕ್ಕಳಿಸಿ ಹೊರಗೆ ಬಿಟ್ಟು ಅವರನ್ನು ಮುಳುಗಿಸಿಬಿಡಬೇಕೆಂದೇ ಅವನು ತೀರ್ಮಾನಿಸಿದ.

ದಪ್ಪಹೊಟ್ಟೆಯವನ ಯುಕ್ತಿ ರಾಣಿಗೆ ಗೊತ್ತಾಯಿತು. ಅವಳು ಸಾವಿರಾರು ಜನರಿದ್ದ ದೊಡ್ಡದೊಂದು ಸೈನ್ಯವನ್ನೇ ಕಳುಹಿಸಿದಳು. ಇವರ ಕೈಲೂ ಏನೂ ಆಗಲಿಲ್ಲ. ಬೆಂಕಿಯ ಕಣ್ಣಿನವನು ಒಂದು ಸಾರಿ ಅವರನ್ನು ನೋಡಿದ. ಎಲ್ಲರೂ ಗಾಜಿನ ಚೂರುಗಳಂತೆ ಪುಡಿಪುಡಿಯಾಗಿ ನೆಲಕ್ಕೆ ಬಿದ್ದರು.

ಮದುವೆಯೆಲ್ಲಾ ಪೂರೈಸಿದ ಮೇಲೆ ಆರು ಮಂದಿ ಸೇವಕರೂ ರಾಜಕುಮಾರನ ಅಪ್ಪಣೆ ಪಡೆದು ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು.

ರಾಜಕುಮಾರ ಹೆಂಡತಿಯೊಡನೆ ತನ್ನ ಊರಿಗೆ ಹಿಂತಿರುಗಿದ. ದಾರಿಯಲ್ಲಿ, ಇನ್ನೊಂದು ಅರ್ಧ ಗಂಟೆಗೆ ಅವನ ಅರಮನೆ ಸಿಕ್ಕುತ್ತದೆ ಎನ್ನುವಷ್ಟು ದೂರದಲ್ಲಿ, ಒಂದು ಸಣ್ಣ ಹಳ್ಳಿಯಿತ್ತು. ಅಲ್ಲಿ ಒಬ್ಬ ಕುರುಬ ತನ್ನ ಕುರಿಗಳ ಜೊತೆಯಲ್ಲಿ ಕುಳಿತಿದ್ದ.

ರಾಜಕುಮಾರ ಹೆಂಡತಿಯ ಕಡೆಗೆ ತಿರುಗಿ "ನಾನು ನಿಜವಾಗಿ ಯಾರೆಂಬುದು ನಿನಗೆ ಗೊತ್ತೆ? ನಾನು ರಾಜಕುಮಾರನಲ್ಲ. ನಾನೊಬ್ಬ ಕುರುಬ. ಅದೋ ನೋಡು ನಮ್ಮ ತಂದೆ ಅಲ್ಲಿ ಕುರಿ ಮೇಯಿಸುತ್ತಿದ್ದಾನೆ. ಈಗ ನಾವಿಬ್ಬರೂ ಹೋಗಿ ಅವನಿಗೆ ಸಹಾಯಮಾಡಬೇಕು" ಎಂದ.

ಇಬ್ಬರೂ ಆ ಕುರುಬನ ಮನೆಗೆ ಹೋದರು. ಕುರುಬನಿಗೆ ರಾಜ ಕುಮಾರನ ಪರಿಚಯ ಚೆನ್ನಾಗಿತ್ತು. ಆದ್ದರಿಂದ ಅವನು ರಾಜಕುಮಾರನ ಮನಸ್ಸಿನಲ್ಲಿದ್ದುದನ್ನು ತಿಳಿದುಕೊಂಡು ಗುಟ್ಟನ್ನು ರಟ್ಟು ಮಾಡದೆ ಇದ್ದ. ಆ ದಿನ ರಾತ್ರಿ ಕುರುಬನ ಹೆಂಡತಿ ರಾಜಕುಮಾರಿಯ ಬೆಲೆ ಬಾಳುವ ವಸ್ತ್ರಗಳನ್ನೆಲ್ಲಾ ತೆಗೆದು ಹಾಕಿ, ಒರಟು ಬಟ್ಟೆಗಳನ್ನು ಉಡಿಸಿ, ಹೊದಿಯುವುದಕ್ಕೆ ಒಂದು ಹಳೆಯ ಹರಕಲು ಕಂಬಳಿ ಕೊಟ್ಟಳು.

ಬೆಳಗ್ಗೆ ಎದ್ದಾಗ ರಾಜಕುಮಾರಿ "ನನಗೆ ಈ ಗತಿ ಬಂದುದು ನ್ಯಾಯವಾಗಿಯೇ ಇದೆ. ನನ್ನ ದುರಹಂಕಾರಕ್ಕೆ ತಕ್ಕ ಶಿಕ್ಷೆಯೇ ಆಯಿತು" ಎಂದುಕೊಂಡಳು. ತನ್ನ ಗಂಡ ನಿಜವಾಗಿಯೂ ಒಬ್ಬ ಕುರುಬನೇ ಎಂದು ಅವಳು ನಂಬಿದಳು. ಗಂಡಹೆಂಡಿರಿಬ್ಬರೂ ಕುರಿಗಳನ್ನು ಮೇಯಿಸಲು ಹುಲ್ಲುಗಾವಲಿಗೆ ಹೋದರು.

ಹೀಗೆ ಎಂಟು ದಿನಗಳು ಕಳೆದವು. ಅಷ್ಟು ಹೊತ್ತಿಗೆ ಅವಳ ಪಾದಗಳೆರಡೂ ಕಾಡಿನಲ್ಲಿ ಕಲ್ಲುಮುಳ್ಳುಗಳನ್ನು ತುಳಿದು ಒಡೆದು ರಕ್ತ ಸೋರಿ ಗಾಯವಾಗಿ ವಿಪರೀತ ನೋಯುತ್ತಿದ್ದವು. ಇಂತಹ ಪರಿಸ್ಥಿತಿ ಯನ್ನು ಇನ್ನು ತಡೆಯುವುದು ಹೇಗೆ ಎಂದು ಅವಳಿಗೆ ಯೋಚನೆಗಿಟ್ಟು ಕೊಂಡಿತು. ಒಂಬತ್ತನೆಯ ದಿವಸ ಕೆಲವರು ಅವಳ ಬಳಿಗೆ ಬಂದು "ನಿನ್ನ ಗಂಡನಿಗೆ ಏನು ಕೆಲಸ?" ಎಂದು ಕೇಳಿದರು. "ಅವನೊಬ್ಬ ಕುರುಬ. ಈಗ ತಾನೆ ಉಣ್ಣೆ ಮಾರಿ ಬರಲು ಪೇಟೆಗೆ ಹೋದ" ಎಂದಳು.

ಅವರು "ನಮ್ಮ ಜೊತೆಯಲ್ಲಿ ಬಾ, ಅವನ ಹತ್ತಿರಕ್ಕೆ ಕರೆದುಕೊಂಡು ಹೋಗುತ್ತೇವೆ" ಎಂದು ಹೇಳಿ ಅವಳನ್ನು ರಾಜಕುಮಾರನ ಅರಮನೆಗೆ ಕರೆದುಕೊಂಡು ಹೋದರು. ಅರಮನೆಯ ಬಾಗಿಲಲ್ಲಿ ರಾಜಕುಮಾರ ದೊರೆಯ ಮಗನಿಗೆ ಯೋಗ್ಯವಾದ ಬಟ್ಟೆಗಳನ್ನೂ ಒಡವೆಗಳನ್ನೂ ಧರಿಸಿ ನಿಂತಿದ್ದ.

ಮೊದಲು ಅವಳಿಗೆ ಅವನ ಗುರುತೇ ಸಿಕ್ಕಲಿಲ್ಲ. ಅವನು ಅವಳನ್ನು ತನ್ನ ಎರಡು ತೋಳುಗಳಿಂದಲೂ ಸೆಳೆದು ಆಲಿಂಗಿಸಿ, ಅವಳ ತುಟಿಗಳಿಗೆ ಮುತ್ತು ಕೊಟ್ಟು, "ನಾನು ನಿನಗಾಗಿ ಎಷ್ಟೊಂದು ಕಷ್ಟ ಅನುಭವಿಸಿದೆ; ಈಗ ನೀನು ನನಗಾಗಿ ಸ್ವಲ್ಪ ಅನುಭವಿಸಿದೆ; ಸಾಕು" ಎಂದು ಹೇಳಿ ಬರಮಾಡಿಕೊಂಡ.

ಅನಂತರ ರಾಜ ಆ ಊರಿನವರಿಗೆಲ್ಲಾ ಮದುವೆಯ ಔತಣದ ಊಟವನ್ನು ಕೊಟ್ಟ. ನಾವೂ ಅಲ್ಲಿದ್ದಿದ್ದರೆ ಚೆನ್ನಾಗಿತ್ತಲ್ಲವೆ?

# ಬೆಸ್ತ ಮತ್ತು ಅವನ ಹೆಂಡತಿ

ಕಡಲಿಗೆ ಸಮೀಪದಲ್ಲಿ ಒಂದು ಗುಡಿಸಲಿತ್ತು. ಅಲ್ಲಿ ಒಬ್ಬ ಬೆಸ್ತನೂ ಅವನ ಹೆಂಡತಿಯೂ ವಾಸವಾಗಿದ್ದರು. ಪ್ರತಿದಿನವೂ ಹಗಲೆಲ್ಲಾ ಸಮುದ್ರದಲ್ಲಿ ಮೀನು ಹಿಡಿದು ಸಂಜೆಯ ಹೊತ್ತಿಗೆ ಗುಡಿಸಲಿಗೆ ಹಿಂದಿರುಗುವುದು ಅವನ ವಾಡಿಕೆಯಾಗಿತ್ತು.

ಒಂದು ದಿವಸ ಅವನು ಬಲೆಯನ್ನು ಬೀಸಿ ಬಿಸಿಲಿನಲ್ಲಿ ಥಳಥಳಿಸುತ್ತಿದ್ದ ಅಲೆಗಳನ್ನು ನೋಡುತ್ತ ಕುಳಿತಿದ್ದ. ಇದ್ದಕ್ಕಿದ್ದಹಾಗೆಯೇ ಬಲೆ ಭಾರವಾಗಿ ನೀರಿನೊಳಕ್ಕೆ ಹೋಯಿತು. ಅವನು ಅದನ್ನು ಮೇಲಕ್ಕೆ ಎತ್ತಿ ನೋಡಲು ಅದರಲ್ಲಿ ಒಂದು ದೊಡ್ಡ ಮೀನು ಸಿಕ್ಕಿಬಿದ್ದಿತ್ತು. ಅವನು ಅದನ್ನು ಈಚೆಗೆ ತೆಗೆದು ಬುಟ್ಟಿಗೆ ಹಾಕಲು ಕೈಚಾಚಿದ.

ಮೀನು "ಬೆಸ್ತರವನೆ, ನಿನ್ನನ್ನು ಬೇಡಿಕೊಳ್ಳುತ್ತೇನೆ, ನನ್ನ ಪ್ರಾಣ ಉಳಿಸು. ನಾನು ನಿಜವಾದ ಮೀನಲ್ಲ. ನಾನೊಬ್ಬ ರಾಜಕುಮಾರ. ಮಾಟದಿಂದ ಹೀಗಾಗಿದ್ದೇನೆ. ನನ್ನನ್ನು ನೀರಿನಲ್ಲೇ ಬಿಟ್ಟುಬಿಡು, ದಯವಿಟ್ಟು ಬಿಟ್ಟುಬಿಡು" ಎಂದಿತು.

ಅವನು "ಓಹೋ! ನೀನು ಇಷ್ಟೊಂದು ಕೇಳಿಕೊಳ್ಳಬೇಕಾದ ಅಗತ್ಯವೇ ಇಲ್ಲ. ನಿನ್ನಂತಹ ಮಾತಾಡುವ ಮೀನನ್ನು ತೆಗೆದುಕೊಂಡು ನಾನೇನು ಮಾಡಲಿ? ಸದ್ಯ, ಹೋಗು ಮಹರಾಯ, ನೀನು ಎಷ್ಟು ಬೇಗ ಹೋದರೆ ಅಷ್ಟು ಒಳ್ಳೆಯದು" ಎಂದು, ಅದನ್ನು ಮತ್ತೆ ನೀರಿಗೆ ಎಸೆದ.

ಮೀನು ನೇರವಾಗಿ ಸಮುದ್ರದ ತಳಕ್ಕೆ ಚಂಗನೆ ನುಗ್ಗಿತು. ಅದು ಹೋದ ಕಡೆಯಲ್ಲೆಲ್ಲಾ ರಕ್ತದ ಕೆಂಪು ಗೆರೆ ಅಲೆಗಳ ಮೇಲೆ ಬಿತ್ತು.

ಬೆಸ್ತ ಮನೆಗೆ ಹೋದಾಗ ಆ ದಿನ ನಡೆದಿದ್ದುದನ್ನೆಲ್ಲಾ ಹೆಂಡತಿಗೆ ಹೇಳಿದ.

"ಅದನ್ನು ಏನಾದರೂ ವರ ಬೇಡಲಿಲ್ಲವೆ? ಸುಮ್ಮನೆ ಬಿಟ್ಟು ಬಿಟ್ಟೆಯ?" ಎಂದು ಅವಳು ಕುತೂಹಲದಿಂದ ಪ್ರಶ್ನಿಸಿದಳು.

ಅವನು "ಇಲ್ಲ. ಏನು ಬೇಡಬೇಕಾಗಿತ್ತು? ನಮಗೆ ಬೇಕಾದುದೆಲ್ಲಾ ಇದ್ದೇ ಇದೆಯಲ್ಲಾ!" ಎಂದ.

ಅವಳು "ಏನಿದೆಯೋ ಕಾಣೆ! ಈ ದರಿದ್ರ ಗುಡಿಸಲಿನಲ್ಲಿ ಇದ್ದು ನನಗೆ ಬೇಜಾರಾಗಿ ಹೋಗಿದೆ. ಮಳೆ, ಗಾಳಿ, ಬಿಸಿಲು—ಎಲ್ಲಾ ಒಳಗೇ ಇರುತ್ತದೆ ಇಲ್ಲಿ! ಈಗಲೇ ಸಮುದ್ರದ ತೀರಕ್ಕೆ ಹಿಂತಿರುಗಿ ಹೋಗಿ, ನಮಗೊಂದು ಅನುಕೂಲವಾದ ಗಾರೆಗಚ್ಚಿನ ಹೆಂಚಿನ ಮನೆ ಬೇಕು ಎಂದು ಕೇಳಬಾರದೆ ಆ ಮೀನನ್ನು?" ಎಂದಳು.

ಬೆಸ್ತನಿಗೆ ಈ ಕೆಲಸ ಇಷ್ಟವಿರಲಿಲ್ಲ. ಆದರೂ ಹೆಂಡತಿಯ ಬಾಯಿಗೆ ಹೆದರಿ ಕಡಲಿನ ಕರೆಗೆ ಹೋದ. ಸಮುದ್ರದ ನೀರು ಹಳದಿಯಾಗಿತ್ತು.

ಅವನು ನೀರಿನ ಪಕ್ಕದಲ್ಲಿ ನಿಂತು "ಓ ಕಡಲಿನ ಮನುಷ್ಯನೆ, ನನ್ನ ಹೆಂಡತಿ ಶುದ್ಧ ತಿಳಿಗೇಡಿ. ಎಷ್ಟು ಹೇಳಿದರೂ ಕೇಳದೆ ನನ್ನನ್ನು ಮತ್ತೆ ನಿನ್ನ ಹತ್ತಿರಕ್ಕೆ ಕಳುಹಿಸಿದ್ದಾಳೆ. ಅವಳಿಗೊಂದು ವರ ಬೇಕಂತೆ" ಎಂದು ಕೂಗಿದ.

ಮೀನು ನೀರಿನಲ್ಲಿ ಈಜುತ್ತಾ ಮೇಲಕ್ಕೆ ಬಂದು "ಅವಳಿಗೆ ಏನು ವರ ಬೇಕಂತೆ?" ಎಂದು ಕೇಳಿತು.

ಬೆಸ್ತ "ನಾನು ನಿನ್ನನ್ನು ಹಿಡಿದಿದ್ದಾಗ ಏನಾದರೂ ಪ್ರತಿಫಲ ಕೇಳಿ ಅನಂತರ ಬಿಡಬೇಕಾಗಿತ್ತಂತೆ. ತೆಂಗಿನ ಗರಿಯ ಬಡಗುಡಿಸಲಿನಲ್ಲಿದ್ದು ಅವಳಿಗೆ ಬೇಜಾರಾಗಿದೆಯಂತೆ. ಆದ್ದರಿಂದ ಅವಳಿಗೆ ಒಂದು ಅನುಕೂಲವಾದ ಗಾರೆಗಚ್ಚಿನ ಹೆಂಚಿನ ಮನೆ ಬೇಕಂತೆ" ಎಂದ.

ಮೀನು "ನೀನು ಹಿಂತಿರುಗಿ ಹೋಗು. ನಿನ್ನ ಹೆಂಡತಿ ಈಗಾಗಲೆ ಗಾರೆಗಚ್ಚಿನ ಹೆಂಚಿನ ಮನೆಯಲ್ಲಿದ್ದಾಳೆ" ಎಂದಿತು.

ಬೆಸ್ತ ಮನೆಯ ಕಡೆಗೆ ಹೊರಟ. ಅವನ ಹೆಂಡತಿ ಸೊಗಸಾದ ಗಾರೆಗಚ್ಚಿನ ಕಲ್ಲಿನ ಮನೆಯ ಬಾಗಿಲಲ್ಲಿ ನಿಂತಿದ್ದಳು. ಅವಳು ಉತ್ಸಾಹ ದಿಂದ "ಬಾ, ಬೇಗ ಬಾ; ಈ ಮನೆ ನಾವು ಮೊದಲಿದ್ದ ಗುಡಿಸಲಿ ಗಿಂತಲೂ ಮೇಲಾಗಿಲ್ಲವೆ?" ಎಂದು ಅವನನ್ನು ದೂರದಿಂದಲೂ ಕರೆದಳು.

ಮನೆಯ ಒಳಗೆ ನಾಲ್ಕು ಕೋಣೆಗಳಿದ್ದವು. ಪ್ರತ್ಯೇಕವಾದ ಅಡುಗೆಯಮನೆ, ಬಚ್ಚಲುಮನೆ, ಮಲಗುವ ಕೋಣೆ ಎಲ್ಲಾ ಇದ್ದವು. ಮುಂದುಗಡೆ ಸಣ್ಣ ಕೈತೋಟವಿತ್ತು. ತೋಟದ ತುಂಬಾ ಹೂವಿನ ಗಿಡಗಳೂ ಹಣ್ಣಿನ ಗಿಡಗಳೂ ಇದ್ದವು. ಹಿಂದುಗಡೆ ಹಿತ್ತಲಿನಲ್ಲಿ ಕೋಳಿ ಗಳು ಕೂಗುತ್ತ ಓಡಾಡುತ್ತಿದ್ದವು.

ಇವೆಲ್ಲವನ್ನೂ ನೋಡಿ ಬೆಸ್ತನಿಗೆ ಬಹಳ ಸಂತೋಷವಾಯಿತು. "ಇನ್ನು ಮೇಲೆ ನಾವು ಸುಖವಾಗಿರಬಹುದು" ಎಂದು ಹಿಗ್ಗಿದ. ಅವನ ಹೆಂಡತಿ "ಏನೋ ನೋಡೋಣ" ಎಂದಳು.

ಒಂದೆರಡು ವಾರ ಕಳೆಯಿತು. ಬೆಸ್ತನ ಹೆಂಡತಿ ಗಂಡನನ್ನು ಕುರಿತು "ಈ ಮನೆಯಲ್ಲಿ ನಮ್ಮಿಬ್ಬರಿಗೂ ಸಾಕಾದಷ್ಟು ಸ್ಥಳವಿಲ್ಲ. ತೋಟವೂ ಹಿತ್ತಲೂ ಬಹಳ ಚಿಕ್ಕದಾಗಿವೆ. ಮನೆಯ ಮುಂದಿನ ಅಂಗಳ ವಂತೂ ಏತಕ್ಕೂ ಸಾಲದು. ಮೀನಿನ ಬಳಿಗೆ ಹೋಗಿ ನಮಗೊಂದು ಅರಮನೆ ಬೇಕು ಎಂದು ಕೇಳು" ಎಂದಳು.

ಬೆಸ್ತ "ಹೆಣ್ಣೆ, ನಾನು ಮತ್ತೆ ಮೀನನ್ನು ಬೇಡಿಕೊಳ್ಳಲು ಹೋಗು ವುದಿಲ್ಲ. ತಿರುಗಿ ತಿರುಗಿ ಹೋದರೆ ಅದಕ್ಕೆ ಕೋಪ ಬರಬಹುದು" ಎಂದ.

ಅವಳು "ಎಲ್ಲಾದರೂ ಉಂಟೆ? ನೀನೊಬ್ಬ ಬೆಪ್ಪ! ನೀನು ಹೋಗಿ ಮಾಡುವ ಪ್ರಯತ್ನ ಮಾಡು. ಅದು ತನ್ನ ಕೈಲಾದ ಸಹಾಯ ನೀಡು ತ್ತದೆ" ಎಂದು ಅವನನ್ನು ಪುಸಲಾಯಿಸಿದಳು.

ಬೆಸ್ತ ಸಮುದ್ರಕ್ಕೆ ಹೋದ. ಅವನಿಗೆ ಯೋಚನೆಯಿಂದ ಲವ ಲವಿಕೆಯೇ ಇರಲಿಲ್ಲ. ಅವನು ಬಂದಾಗ ಸಮುದ್ರದ ನೀರು ಹೆದರಿಕೆ ಹುಟ್ಟಿಸುವಂತಿತ್ತು. ಅಲೆಗಳು ಇರಲಿಲ್ಲ.

ಅವನು ಪಾದಗಳು ನೀರಿನಲ್ಲಿ ಮುಳುಗುವ ವರೆಗೂ ನಡೆದುಹೋಗಿ "ಓ ಕಡಲಿನ ಮನುಷ್ಯನೆ, ನನ್ನ ಹೆಂಡತಿ ಶುದ್ಧ ತಿಳಿಗೇಡಿ. ಎಷ್ಟು ಹೇಳಿದರೂ ಕೇಳದೆ ನನ್ನನ್ನು ಮತ್ತೆ ನಿನ್ನ ಹತ್ತಿರಕ್ಕೆ ಕಳುಹಿಸಿದ್ದಾಳೆ. ಅವಳಿಗೆ ಒಂದು ವರ ಬೇಕಂತೆ" ಎಂದು ಕೂಗಿದ.

ಮೀನು ಮೇಲಕ್ಕೆ ಬಂದು, "ಇನ್ನೇನು ಬೇಕಂತೆ ಅವಳಿಗೆ?" ಎಂದಿತು.

ಅವನು ವ್ಯಸನದಿಂದ ಮುಖ ಸಣ್ಣದಾಗಿ ಮಾಡಿಕೊಂಡು "ನನ್ನ ಹೆಂಡತಿಗೆ ವಾಸಮಾಡಲು ಒಂದು ಅರಮನೆ ಬೇಕಂತೆ" ಎಂದ.

ಮೀನು "ನೀನು ಹಿಂತಿರುಗಿ ಹೋಗು. ಅವಳು ಈಗಾಗಲೆ ಅರಮನೆಯ ಬಾಗಿಲಲ್ಲಿ ನಿಂತಿದ್ದಾಳೆ" ಎಂದಿತು.

ಬೆಸ್ತ ಮನೆಯ ಕಡೆಗೆ ಹೊರಟ. ದೂರದಿಂದಲೇ ಅರಮನೆಯ ಗೋಪುರಗಳು ಅವನಿಗೆ ಕಾಣಿಸಿದವು. ಅವನ ಹೆಂಡತಿ ಅದರ ಹೆಬ್ಬಾಗಿಲಿನಲ್ಲಿ ನಿಂತು ಸೇವಕರಿಗೆ ಬಗೆಬಗೆಯ ಕೆಲಸಗಳನ್ನು ನೇಮಿಸುತ್ತಿದ್ದಳು.

ಗಂಡನನ್ನು ನೋಡಿ ಅವಳು "ಈ ಮನೆ ಚೆನ್ನಾಗಿಲ್ಲವೆ?" ಎಂದಳು.

ಇಬ್ಬರೂ ಒಳಕ್ಕೆ ಹೋದರು. ಒಳಗೆ ನೂರಾರು ಜನ ಸೇವಕರು ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು. ಪ್ರತಿಬಾಗಿಲಲ್ಲೂ ಆ ಕಡೆ ಒಬ್ಬ, ಈ ಕಡೆ ಒಬ್ಬ, ಹೀಗೆ ಇಬ್ಬಿಬ್ಬರು ಕಾವಲುಗಾರರು ಈಟಿಗಳನ್ನು ಹಿಡಿದು ನಿಂತಿದ್ದರು. ಬೆಸ್ತನೂ ಅವನ ಹೆಂಡತಿಯೂ ಆ ಕಡೆ ಬಂದ ಕೂಡಲೆ ಅವರು ತಲೆಬಾಗಿ ನಮಸ್ಕರಿಸುತ್ತಿದ್ದರು. ಕೋಣೆಗಳಲ್ಲೆಲ್ಲಾ ರತ್ನಕಂಬಳಿಗಳೂ, ವಿಧವಿಧವಾದ ಚಿತ್ರಗಳೂ, ಬಂಗಾರದಿಂದ ಮಾಡಿದ ಮೇಜು, ಕುರ್ಚಿ, ಮಂಚಗಳೂ ಇದ್ದವು. ಅರಮನೆಯ ಹಿಂದೆ ದೊಡ್ಡ ತೋಟವಿತ್ತು. ಅದರ ಸುತ್ತಲೂ ಒಂದು ಮೈಲಿ ವಿಸ್ತಾರದ ಉದ್ಯಾನವೂ ಹುಲ್ಲುಗಾವಲೂ ಇದ್ದವು. ಅಲ್ಲಿ ಸಾವಿರಾರು ಕುರಿಗಳೂ, ಮೇಕೆಗಳೂ, ದನಗಳೂ ಮೇಯುತ್ತಿದ್ದವು. ಅರಮನೆಗೆ ಸೇರಿದ ಹಾಗೆ ಕುದುರೆಯ ಲಾಯಗಳೂ ದನದ ಕೊಟ್ಟಿಗೆಗಳೂ ಬೇಕಾದಷ್ಟಿದ್ದವು.

ಬೆಸ್ತ "ಇನ್ನು ನಾವು ಸುಖವಾಗಿ ಬದುಕಿರುವ ವರೆಗೂ ಇಲ್ಲಿ ಸಂತೋಷವಾಗಿರಬಹುದು" ಎಂದ.

ಅವನ ಹೆಂಡತಿ "ಆಗಲಿ, ನೋಡೋಣ. ಮೊದಲು ನಿದ್ದೆ ಮಾಡಬೇಕು. ಬೆಳಗಾದ ಮೇಲೆ ಮುಂದಿನ ಯೋಚನೆ" ಎಂದಳು.

ಮೂರನೆಯ ದಿನ ಬೆಳಗ್ಗೆ ಬೆಸ್ತನ ಹೆಂಡತಿ ಎದ್ದಾಗ ಆಗಲೆ ಬಿಸಿಲು ಬಂದಿತ್ತು. ಬೆಸ್ತ ಇನ್ನೂ ಗೊರಕೆ ಹೊಡೆಯುತ್ತಿದ್ದ. ಅವಳು ಗಂಡನನ್ನು ಅವನು ಬೆಚ್ಚಿಬೀಳುವ ಹಾಗೆ ಅಲ್ಲಾಡಿಸಿ ಎಬ್ಬಿಸಿ, "ಏಳು! ಬೇಗ ಏಳು! ಈ ದಿವಸ ನಾವು ಈ ನಾಡಿಗೆಲ್ಲಾ ದೊರೆಗಳಾಗಬೇಕು!" ಎಂದು ಕೂಗಿದಳು.

ಬೆಸ್ತ "ಹೆಣ್ಣೆ, ನಮಗೆ ಈಗಿರುವುದೇ ಸಾಲದೆ? ಇನ್ನು ನಾವು ದೊರೆಗಳು ಬೇರೆ ಏಕಾಗಬೇಕು? ಬೇಡ! ನನಗೆ ದೊರೆತನ ಬೇಡ!" ಎಂದ.

ಅವಳು "ನಿನಗೆ ಬೇಡದಿದ್ದರೆ ನನಗೆ ಬೇಕು!" ಎಂದಳು.

ಅವನು "ಹೆಣ್ಣೆ, ನೀನು ಹೇಗೆ ದೊರೆಯಾದೀಯೆ? ನಿನಗೆ ದೊರೆಯ ಪಟ್ಟ ಕಟ್ಟಲು ಆ ಮೀನಿನ ಕೈಲಾಗುತ್ತದೆಯೆ?" ಎಂದ.

ಅವಳು "ಹೆಚ್ಚು ಮಾತಾಡಬೇಡ. ಸುಮ್ಮನೆ ಎದ್ದು ಹೋಗಿ ನೀನು ಮಾಡುವ ಪ್ರಯತ್ನ ಮಾಡು. ನಾನು ದೊರೆಯಾಗಲೇ ಬೇಕು!" ಎಂದಳು.

ಹೆಂಡತಿಯ ಅತಿಯಾಸೆಯನ್ನು ಕಂಡು ಬೆಸ್ತನಿಗೆ ಬಹಳ ಸಂಕಟವಾಯಿತು. ಅವನು ಮತ್ತೆ ಮೆಲ್ಲನೆ ಹೆಜ್ಜೆಯಿಡುತ್ತ ಸಮುದ್ರದ ಬದಿಗೆ ನಡೆದ. ಈ ಸಾರಿ ಸಮುದ್ರದ ನೀರು ಬೂದಿಯ ಬಣ್ಣದ್ದಾಗಿತ್ತು. ಅಲೆಗಳು ಗಾಳಿಯಲ್ಲಿ ಕುಣಿದಾಡಿ ನೊರೆ ಉಗುಳುತ್ತಿದ್ದವು.

ಅವನು ಹಿಂದಿನಂತೆಯೇ "ಓ ಕಡಲಿನ ಮನುಷ್ಯನೆ, ನನ್ನ ಹೆಂಡತಿ ಶುದ್ಧ ತಿಳಿಗೇಡಿ. ಎಷ್ಟು ಹೇಳಿದರೂ ಕೇಳದೆ ನನ್ನನ್ನು ಮತ್ತೆ ನಿನ್ನ ಹತ್ತಿರಕ್ಕೆ ಕಳುಹಿಸಿದ್ದಾಳೆ. ಅವಳಿಗೆ ಒಂದು ವರ ಬೇಕಂತೆ!" ಎಂದು ಕೂಗಿದ.

ಮೀನು ಮೇಲಕ್ಕೆ ಬಂದು, "ಮತ್ತೇನು ಬೇಕಂತೆ ಅವಳಿಗೆ?" ಎಂದಿತು.

ಅವನು "ಅಯ್ಯೋ, ಏನು ಹೇಳಲಿ? ನನ್ನ ಹೆಂಡತಿ ನಾಡಿಗೆಲ್ಲಾ ದೊರೆಯಾಗಬೇಕಂತೆ!" ಎಂದ.

ಮೀನು "ನೀನು ಹಿಂದಿರುಗಿ ಹೋಗು. ಅವಳು ಈಗಾಗಲೆ ದೊರೆಯಾಗಿದ್ದಾಳೆ" ಎಂದಿತು.

ಬೆಸ್ತ ಮನೆಯ ಕಡೆಗೆ ಹೊರಟ. ಅವನು ತನ್ನ ಅರಮನೆಯನ್ನು ಸಮೀಪಿಸಿದಾಗ ಅದರ ಹೊರಗಡೆ ಒಂದು ಸೈನಿಕರ ತಂಡ ಕಂಡು ಬಂತು. ನಗಾರಿಯ ಧ್ವನಿಯೂ ತುತೂರಿಯ ಕೂಗೂ ಕೇಳಿಸಿವವು. ಅವನು ಒಳಕ್ಕೆ ಹೋಗಿ ನೋಡಿದ. ಅವನ ಹೆಂಡತಿ ಬಂಗಾರದಿಂದಲೂ ವಜ್ರ ದಿಂದಲೂ ತಯಾರಾಗಿ, ಮುತ್ತು ರತ್ನಗಳಿಂದ ಅಲಂಕೃತವಾಗಿ ಹೊಳೆಯು ತ್ತಿದ್ದ ಎತ್ತರವಾದ ಸಿಂಹಾಸನದ ಮೇಲೆ ಕುಳಿತಿದ್ದಳು. ಅವಳ ತಲೆಯ ಮೇಲೆ ಚಿನ್ನದ ಕಿರೀಟವಿತ್ತು. ಅವಳ ಎಡಕ್ಕೂ ಬಲಕ್ಕೂ ಒಂದೊಂದು ಕಡೆ ಆರಾರು ಜನ ಸುಂದರಿಯರಾದ ತರುಣಿಯರು ನಿಂತು ಚಾಮರ ಬೀಸುತ್ತಿದ್ದರು.

ಬೆಸ್ತ "ಹೆಣ್ಣೆ, ನೀನು ಈಗ ದೊರೆಯೇನು?" ಎಂದು ಕೇಳಿದ.

ಅವಳು "ಹೌದು, ನಾನೀಗ ದೊರೆ!" ಎಂದು ಹೆಮ್ಮೆಯಿಂದ ಉತ್ತರಕೊಟ್ಟಳು.

ಬೆಸ್ತ ಅವಳನ್ನು ಬಹಳ ಹೊತ್ತು ಕಣ್ಣು ತುಂಬ ನೋಡಿ, ನಲಿದು, "ಆಹಾ! ಹೆಣ್ಣೆ! ದೊರೆಯಾಗಿರುವುದು ಎಂಥ ಸೊಗಸಾದ ಕೆಲಸ! ನಾವು ಬದುಕಿರುವಷ್ಟು ದಿನಗಳೂ ನಮಗೆ ಬೇಕಾದುದು ಇನ್ನೇನೂ ಇರಲಾರದು!" ಎಂದ.

ಅವಳು "ಏನೋ ನೋಡೋಣ. ಮುಂದಿನ ಮಾತು ಈಗೇಕೆ? ಈಗೇನೋ ನಾನು ದೊರೆಯಾಗಿರುವುದು ನಿಜ. ಆದರೆ ಆಗಲೆ ಈ ಕೆಲಸ ನನಗೆ ಬೇಜಾರಾಗುತ್ತಿದೆ! ದೊರೆತನ ಸಾಲದು. ನಾನು ಚಕ್ರವರ್ತಿ ಯಾಗಬೇಕು; ದೊರೆಗಳಿಗೆಲ್ಲಾ ದೊರೆಯಾಗಬೇಕು!" ಎಂದಳು.

ಇವನು "ಹೆಣ್ಣೆ, ಸಾಕು ಸುಮ್ಮನಿರು, ನಿನಗೇತಕ್ಕೆ ಚಕ್ರವರ್ತಿಯ ಪದವಿ ?" ಎಂದ.

ಅವಳು "ನಾನು ಚಕ್ರವರ್ತಿಯಾಗಲೇ ಬೇಕು. ಹೋಗು, ಮೀನಿಗೆ ಈ ಮಾತು ಹೇಳು !" ಎಂದಳು.

ಅವನು "ಹೆಣ್ಣೆ, ಮೀನು ನಿನಗೆ ಚಕ್ರವರ್ತಿಯ ಪದವಿಯನ್ನು ಕೊಡಬಲ್ಲುದೆ? ಎಂದಿಗೂ ಇಲ್ಲ. ಮತ್ತೆ ಅದರ ಎದುರಿಗೆ ಹೋಗಿ ಬೇಡಿಕೊಳ್ಳಲು ನನಗೆ ಇಷ್ಟವಿಲ್ಲ" ಎಂದ.

ಅವಳಿಗೆ ರೇಗಿತು. "ಹೋಗುವೆಯೋ ಇಲ್ಲವೋ ? ನಾನೀಗ ದೊರೆ. ನೀನು ನನ್ನ ದಾಸ. ನಾನು ಹೇಳಿದ ಹಾಗೆ ಕೇಳದೆ ಇದ್ದರೆ ಸಜಾ ಹಾಕಿಸುತ್ತೇನೆ. ಹೊರಡು ಕೂಡಲೆ" ಎಂದು ಗದರಿಸಿದಳು.

ಬೆಸ್ತ ರಾಜಾಜ್ಞೆಯನ್ನು ಮೀರುವ ಹಾಗಿರಲಿಲ್ಲ. ಹೋಗಲೇ ಬೇಕಾಯಿತು. ಹೋಗುತ್ತ ದಾರಿಯಲ್ಲಿ ಅವನು "ಇದರಿಂದ ಏನೇನಾಗುತ್ತದೆಯೋ ದೇವರೇ ಬಲ್ಲ. ಚಕ್ರವರ್ತಿಯಾಗುವುದಕ್ಕೆ ಸಾಮಾನ್ಯ ಮನುಷ್ಯರು ಎಲ್ಲಾದರೂ ಅಭಿಲಾಷೆಪಡುವುದುಂಟೆ? ನಾನು ಹೀಗೆ ಪದೇ ಪದೇ ಏನಾದರೂ ಕೇಳುತ್ತಲೇ ಇದ್ದರೆ ಆ ಮೀನಿಗೆ ಬೇಸರವಾಗಿ ಕೋಪ ಬರುವುದು ಖಂಡಿತ. ಕಡೆಗೆ ನಾವು ಮಾಡಿದ ಕೆಲಸಕ್ಕೆ ನಾವೇ ಪಶ್ಚಾತ್ತಾಪ ಪಡಬೇಕಾದ ಕಾಲ ಬಂದೀತು!" ಎಂದು ಯೋಚಿಸಿಕೊಂಡ.

ಅವನು ಸಮುದ್ರದ ತೀರಕ್ಕೆ ಬಂದಾಗ ನೀರು ಕೆಸರು ಕದಡಿದಂತೆ ಬಗ್ಗಡವಾಗಿತ್ತು. ಬಲವಾದ ಬಿರುಗಾಳಿ ಬೀಸಿ ಅಲೆಗಳನ್ನು ಅತ್ತಿಂದಿತ್ತ ಅಲುಗಾಡಿಸುತ್ತಿತ್ತು.

ಅವನು ಸಾಧ್ಯವಾದಷ್ಟೂ ನೀರಿನ ಸಮೀಪಕ್ಕೆ ನಡೆದು ನಿಂತು, "ಓ ಕಡಲಿನ ಮನುಷ್ಯನೆ, ನನ್ನ ಹೆಂಡತಿ ಶುದ್ಧ ತಿಳಿಗೇಡಿ. ಎಷ್ಟು ಹೇಳಿದರೂ ಕೇಳದೆ ನನ್ನನ್ನು ಮತ್ತೆ ನಿನ್ನ ಹತ್ತಿರಕ್ಕೆ ಕಳುಹಿಸಿದ್ದಾಳೆ. ಅವಳಿಗೆ ಒಂದು ವರ ಬೇಕಂತೆ" ಎಂದು ಕೂಗಿದ.

ಮೀನು ಮೇಲಕ್ಕೆ ಬಂದು, "ಇನ್ನೂ ಏನು ಬೇಕಂತೆ ಅವಳಿಗೆ ?" ಎಂದಿತು.

ಅವನು "ಅಯ್ಯೋ, ಏನು ಹೇಳಲಿ? ಅವಳು ಚಕ್ರವರ್ತಿಯಾಗ ಬೇಕಂತೆ!" ಎಂದ.

ಮೀನು "ನೀನು ಹಿಂದಿರುಗಿ ಹೋಗು. ಅವಳು ಈಗಾಗಲೇ ಚಕ್ರವರ್ತಿಯಾಗಿದ್ದಾಳೆ" ಎಂದಿತು.

ಬೆಸ್ತ ಮನೆಗೆ ಹೋದ. ಅವನ ಹೆಂಡತಿ ಗಟ್ಟಿ ಬಂಗಾರದ ಉನ್ನತವಾದ ಸಿಂಹಾಸನದ ಮೇಲೆ ಕುಳಿತಿದ್ದಳು. ಅವಳ ತಲೆಯ ಮೇಲೆ ಎರಡು ಗಜ ಎತ್ತರದ ದೊಡ್ಡ ಕಿರೀಟವಿತ್ತು. ಅವಳ ಎರಡು ಕಡೆಗಳಲ್ಲೂ ವೈಗಾವಲಿನವರೂ ಸೇವಕರೂ ಸಾಲು ಸಾಲಾಗಿ ತಮ್ಮ ತಮ್ಮ ಎತ್ತರಕ್ಕೆ ಅನುಸಾರವಾಗಿ ಕ್ರಮವಾಗಿ ನಿಂತಿದ್ದರು. ಅವಳ ಮುಂದೆ ಸಾಮಂತ ರಾಜರೂ, ಶ್ರೀಮಂತರೂ, ಸೇನಾಪತಿಗಳೂ ಕೈಕಟ್ಟಿಕೊಂಡು ನಿಂತಿದ್ದರು.

ಬೆಸ್ತ ಅವಳನ್ನು ನೋಡಿ, "ಹೆಣ್ಣೆ, ನೀನೀಗ ಚಕ್ರವರ್ತಿಯೆ?" ಎಂದ.

ಅವಳು ಗರ್ವದಿಂದ "ಹೌದು, ನಾನೀಗ ಚಕ್ರವರ್ತಿ!" ಎಂದು ಉತ್ತರಕೊಟ್ಟಳು.

ಅವನು ಅವಳನ್ನು ನೆಟ್ಟದೃಷ್ಟಿಯಿಂದ ನೋಡಿ, "ಆಹಾ! ಚಕ್ರವರ್ತಿ ಯಾಗಿರುವುದು ಎಂಥ ಸೊಗಸಾದ ಕೆಲಸ!" ಎಂದ.

ಅವಳು "ಹೌದು! ಆದರೆ ನಾವು ಇಷ್ಟರಿಂದಲೇ ಏಕೆ ತೃಪ್ತರಾಗ ಬೇಕು? ನಾನು ಮಠಾಧಿಪತಿಯಾಗಬೇಕು! ಜಗದ್ಗುರುವಾಗಬೇಕು! ಜಗದ್ಗುರುಗಳ ಪಾದಕ್ಕೆ ಚಕ್ರವರ್ತಿಗಳೂ ಅಡ್ಡಬೀಳುತ್ತಾರೆ! ನಾನು ಈ ದಿನವೇ ಜಗದ್ಗುರುವಾಗಬೇಕು!" ಎಂದಳು.

ಅವನು "ನಿನಗೆ ಜಗದ್ಗುರುವಿನ ಪದವಿ ಕೊಡಲು ಮೀನಿಗೆ ಏನು ಅಧಿಕಾರವಿದೆ?" ಎಂದ.

ಅವಳು "ಸುಮ್ಮನೆ ಹುಚ್ಚನಂತೆ ಅರ್ಥವಿಲ್ಲದ ಮಾತಾಡಬೇಡ. ನೀನೊಬ್ಬ ಹೆಡ್ಡ. ಚಕ್ರವರ್ತಿಯ ಪದವಿ ಕೊಡಬಲ್ಲದು, ಜಗದ್ಗುರುವಿನ ಪದವಿ ಕೊಡಲಾರದೆ ಆ ಮೀನು? ಹೋಗು, ನೀನು ಮಾಡಬೇಕಾದ ಪ್ರಯತ್ನ ಮಾಡು" ಎಂದಳು.

ಬೆಸ್ತ ಸಮುದ್ರದ ಅಂಚಿಗೆ ಹೋದ. ಬಿರುಗಾಳಿ ರಭಸದಿಂದ ಬೀಸುತ್ತಿತ್ತು. ಅಲೆಗಳು ಎದ್ದೆದ್ದು ಬೀಳುತ್ತಿದ್ದವು. ನೀರಿನ ಮೇಲಿದ್ದ ದೋಣಿಗಳೂ ಹಡಗುಗಳೂ ತಲೆಕೆಳಗಾಗುವ ಸ್ಥಿತಿಯಲ್ಲಿದ್ದವು. ಆಕಾಶ ಕೆಂಪಗೆ ಭಯಂಕರವಾಗಿತ್ತು.

ಇದನ್ನೆಲ್ಲಾ ನೋಡಿ ಬೆಸ್ತನಿಗೆ ಬಹಳ ಹೆದರಿಕೆಯಾಯಿತು. ಆದರೂ ಅವನು ಮನಸ್ಸನ್ನು ಗಟ್ಟಿಮಾಡಿಕೊಂಡು, "ಓ ಕಡಲಿನ ಮನುಷ್ಯನೆ, ನನ್ನ ಹೆಂಡತಿ ಶುದ್ಧ ತಿಳಿಗೇಡಿ. ಎಷ್ಟು ಹೇಳಿದರೂ ಕೇಳದೆ ನನ್ನನ್ನು ಮತ್ತೆ ನಿನ್ನ ಹತ್ತಿರಕ್ಕೆ ಕಳುಹಿಸಿದ್ದಾಳೆ. ಅವಳಿಗೆ ಒಂದು ವರ ಬೇಕಂತೆ" ಎಂದು ಕೂಗಿದ.

ಮೀನು "ಮತ್ತೆ ಇನ್ನೇನು ಬೇಕಂತೆ ಅವಳಿಗೆ?" ಎಂದಿತು.

ಅವನು "ಅಯ್ಯೋ, ಏನು ಹೇಳಲಿ? ಅವಳು ಜಗದ್ಗುರುವಾಗ ಬೇಕಂತೆ!" ಎಂದು ದೈನ್ಯದಿಂದ ಕೇಳಿದ.

ಮೀನು "ನೀನು ಹಿಂತಿರುಗು. ಈಗಾಗಲೆ ಅವಳು ಜಗದ್ಗುರು ವಾಗಿದ್ದಾಳೆ" ಎಂದಿತು.

ಬೆಸ್ತ ಮನೆಗೆ ಹೋದ. ಅವನ ಹೆಂಡತಿ ಎರಡು ಮೈಲಿ ಎತ್ತರವಿದ್ದ ಒಂದು ಸಿಂಹಾಸನದ ಮೇಲೆ ಕುಳಿತಿದ್ದಳು. ಅವಳ ತಲೆಯ ಮೇಲೆ ಮಠದ ಅಧಿಕಾರವನ್ನು ತೋರಿಸುವ ದಿವ್ಯವಾದ ಕಿರೀಟವಿತ್ತು. ಅವಳ ಎರಡು ಕಡೆಗಳಲ್ಲೂ ಸಾಲುಸಾಲಾಗಿ ದೀಪಗಳು ಬೆಳಗುತ್ತಿದ್ದವು.

ಅವಳನ್ನು ನೋಡಿ ಬೆಸ್ತ "ಹೆಣ್ಣೆ, ನೀನೀಗ ಜಗದ್ಗುರುಗಳೆ?" ಎಂದ.

ಅವಳು ಅಟ್ಟಹಾಸದಿಂದ "ಹೌದು! ನಾನೀಗ ಜಗದ್ಗುರು!" ಎಂದಳು.

ಅವನು "ಜಗದ್ಗುರುವಾಗಿರುವುದು ಬಹಳ ಸೊಗಸಾದ ಕೆಲಸ. ಇನ್ನಾದರೂ ನೀನು ತೃಪ್ತಿಯಿಂದ ಇರಬಹುದು. ಇದಕ್ಕಿಂತಲೂ ಹೆಚ್ಚಿನ ಪದವಿ ಇನ್ನು ನಿನಗೆ ಸಿಕ್ಕಲಾರದು" ಎಂದ.

ಅವಳು "ಏನೋ ನೋಡೋಣ" ಎಂದಳು.

ಇಬ್ಬರೂ ಮಲಗಿದರು. ಮುಂದೆ ಇನ್ನು ಹೆಚ್ಚಿನ ಪದವಿ ಯಾವುದಿದೆ ಎಂಬ ಯೋಚನೆಯಿಂದ ಅವಳಿಗೆ ರಾತ್ರಿಯೆಲ್ಲಾ ನಿದ್ದೆಯೇ ಬರಲಿಲ್ಲ. ಕೊನೆಗೆ ಬೆಳಕು ಹರಿಯುವ ಹೊತ್ತಿಗೆ ತೂಕಡಿಕೆಗೆ ಆರಂಭವಾಗಿ ಸ್ವಲ್ಪ ನಿದ್ದೆ ಹತ್ತಿತು.

ಆಗ ಒಂದು ಸಾರಿ ಇದ್ದಕ್ಕಿದ್ದ ಹಾಗೆಯೇ ಎಚ್ಚರವಾಗಿ ಅವಳು ಕಣ್ಣು ಬಿಟ್ಟು ನೋಡಿದಳು. ಕಿಟಕಿಯ ಹೊರಗಡೆ ಸೂರ್ಯ ಮೂಡಿ ಕಾಣುತ್ತಿದ್ದ. ಅವಳು "ಹಾ! ನಾನು ಜಗದ್ಗುರುವಾದರೇನು? ಸೂರ್ಯ ಹುಟ್ಟುವುದನ್ನು ತಪ್ಪಿಸುವುದಕ್ಕೆ ನನ್ನಿಂದ ಆಗದು!" ಎಂದುಕೊಂಡು, ಧಿಮ್ಮನೆ ಎದ್ದು, ಗಂಡನನ್ನು ಎಬ್ಬಿಸಿ, "ಹೋಗು, ಮೀನಿನ ಬಳಿಗೆ ಹೋಗಿ ಸೂರ್ಯ ಚಂದ್ರರೆಲ್ಲಾ ನನ್ನ ಅಧೀನರಾಗಿರಬೇಕು ಎಂದು ಹೇಳು; ತಕ್ಷಣ ಹೊರಡು" ಎಂದಳು.

ಬೆಸ್ತನಿಗೆ ಇನ್ನೂ ನಿದ್ದೆ ಪೂರ್ತಿ ಮುಗಿದಿರಲಿಲ್ಲ. ಅವಳ ಮಾತು ಕೇಳಿ ಅವನು ಬೆದರಿ ಹಾಸಿಗೆ ಇದ್ದ ಮಂಚದಿಂದ ನೆಲಕ್ಕೆ ಬಿದ್ದುಬಿಟ್ಟ. ಕಡೆಗೆ ಅವನು ಕೊಂಚ ಧೈರ್ಯ ತಂದುಕೊಂಡು "ಹೆಣ್ಣೆ, ಜಗದ್ಗುರುವಿನ ಪದವಿ ಸಾಲದೆ ನಿನಗೆ? ಸುಮ್ಮನೆ ಏಕೆ ಆಸೆ ಪಡುವೆ?" ಎಂದ.

ಅವಳು "ಸಾಲದು. ಸೂರ್ಯ ಚಂದ್ರರು ನನ್ನ ಅಪ್ಪಣೆಯಿಲ್ಲದೆ ಮೂಡುತ್ತಿದ್ದರೆ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ. ಹೊರಡು ಮೀನಿನ ಹತ್ತಿರಕ್ಕೆ!" ಎಂದು ಅಬ್ಬರಿಸಿದಳು.

ಬೆಸ್ತ ಭಯದಿಂದ ನಡುಗುತ್ತ ಕಡಲಿನ ತೀರಕ್ಕೆ ನಡೆದ. ಅವನು ಹೋಗುತ್ತಿದ್ದ ಹಾಗೆಯೇ ಪ್ರಚಂಡವಾದ ಬಿರುಗಾಳಿ ಎದ್ದು ಗಿಡಮರಗಳೂ ಕಲ್ಲುಬಂಡೆಗಳೂ ಅಲ್ಲಾಡಿದವು. ಆಕಾಶವೆಲ್ಲಾ ಕರಿಯ ಮೋಡಗಳಿಂದ ತುಂಬಿಹೋಯಿತು. ಮಿಂಚು ಥಳಿಸಿತು, ಗುಡುಗು ಗರ್ಜಿಸಿತು. ಸಮುದ್ರದ ಅಲೆಗಳು ಕಪ್ಪಗೆ ಬೆಟ್ಟಗಳ ಹಾಗೆ ಮೇಲಕ್ಕೆದ್ದು ನುಗ್ಗಿ ದಡವನ್ನು ಅಪ್ಪಳಿಸಿ, ಭೋ ಎಂದು ಸದ್ದುಮಾಡುತ್ತಿದ್ದವು. ಎಲ್ಲಿ ನೋಡಿದರೂ ಬೆಳ್ಳನೆಯ ನೊರೆ ಅಲೆಲ್ಲಿ ಮೇಲೆ ಕುಣಿದಾಡುತ್ತಿತ್ತು.

ಬೆಸ್ತ ಮೆಲ್ಲನೆ ನೀರಿನ ಮುಂದೆ ಬಂದು ನಿಂತು, "ಓ ಕಡಲಿನ ಮನುಷ್ಯನೆ, ನನ್ನ ಹೆಂಡತಿ ಶುದ್ಧ ತಿಳಿಗೇಡಿ. ಎಷ್ಟು ಹೇಳಿದರೂ

ಕೇಳದೆ ನನ್ನನ್ನು ಮತ್ತೆ ನಿನ್ನ ಹತ್ತಿರಕ್ಕೆ ಕಳುಹಿಸಿದ್ದಾಳೆ. ಅವಳಿಗೆ ಒಂದು ವರ ಬೇಕಂತೆ" ಎಂದ.

ಮೀನು ಮೇಲಕ್ಕೆ ಬಂದು, "ಪುನಃ ಏನು ಬೇಕಂತೆ ಅವಳಿಗೆ?" ಎಂದಿತು.

ಅವನು "ಅಯ್ಯೋ, ಏನು ಹೇಳಲಿ? ಸೂರ್ಯ ಚಂದ್ರರೆಲ್ಲಾ ಅವಳ ಅಧೀನರಾಗಬೇಕಂತೆ!" ಎಂದ.

ಮೀನಿಗೆ ರೇಗಿತು. ಅದು "ಹೋಗು—ಮತ್ತೆ ನಿಮ್ಮ ತೆಂಗಿನ ಗರಿಯ ಗುಡಿಸಲಿಗೆ!" ಎಂದಿತು.

# ಮಂತ್ರಶಕ್ತಿಯುಳ್ಳ ಮೂಲಿಕೆಗಳು

ಒಂದು ಊರಿನಲ್ಲಿ ಒಬ್ಬ ಬೇಟೆಗಾರನಿದ್ದ. ಒಂದು ದಿನ ಅವನು ಬೇಟೆಗೆಂದು ಕಾಡಿಗೆ ಹೊರಟು ಸಂತೋಷದಿಂದ ಸಿಳ್ಳುಹಾಕುತ್ತಾ ಹೋಗುತ್ತಿದ್ದ. ಕುರೂಪಿಯಾಗಿದ್ದ ಒಬ್ಬ ಮುದುಕಿ ಎಲ್ಲಿಂದಲೋ ಅವನ ಎದುರಿಗೆ ಬಂದು, "ಅಪ್ಪಾ, ನಿನಗೆ ಯಾವ ಕಷ್ಟವೂ ಇರುವಹಾಗೆ ಕಾಣುವುದಿಲ್ಲ; ನನಗಾದರೆ ಹಸಿವು ಬಾಯಾರಿಕೆಗಳಿಂದ ಸಾಯುವ ಹಾಗಾಗಿದೆ; ಏನಾದರೂ ಸಹಾಯ ಮಾಡು" ಎಂದು ಬೇಡಿದಳು.

ಅವಳ ಸ್ಥಿತಿಯನ್ನು ನೋಡಿ ಬೇಟೆಗಾರನ ಮನಸ್ಸು ಕರಗಿತು. ಅವನು ಜೇಬಿನಲ್ಲಿ ಕೈಯಿಟ್ಟು ಒಂದು ಬೆಳ್ಳಿಯ ನಾಣ್ಯ ತೆಗೆದು ಅವಳಿಗೆ ಕೊಟ್ಟ. ಅನಂತರ ಅವನು ಮುಂದುವರಿಯಲು ಕಾಲಿಟ್ಟಾಗ ಅವಳು ಅವನನ್ನು ತಡೆದು ನಿಲ್ಲಿಸಿ "ನೀನು ಬಹಳ ಒಳ್ಳೆಯವನು, ಉದಾರಿ, ದಯಾವಂತ. ಆದುದರಿಂದ ನಾನು ನಿನಗೆ ಒಂದು ಬಹುಮಾನ ಕೊಡುತ್ತೇನೆ. ನೀನು ಇದೇ ದಾರಿಯಲ್ಲೇ ಹೋದರೆ ಸ್ವಲ್ಪ ದೂರದಲ್ಲಿ ಒಂದು ಆಲದಮರ ಸಿಕ್ಕುತ್ತದೆ. ಆ ಮರದ ಮೇಲೆ ಒಂಬತ್ತು ಹಕ್ಕಿಗಳು ಕೂತಿರುತ್ತವೆ. ಅವೆಲ್ಲಾ ಸೇರಿ ತಮ್ಮ ಕಾಲಿನ ಉಗುರುಗಳಿಂದ ಒಂದು ಕೆಂಪು ವಸ್ತ್ರವನ್ನು ಹಿಡಿದುಕೊಂಡಿರುತ್ತವೆ. ನಿನ್ನ ತುಪಾಕಿಯಿಂದ ಗುರಿಯಿಟ್ಟು ಅವುಗಳ ಮಧ್ಯಕ್ಕೆ ಸರಿಯಾಗಿ ಗುಂಡು ಹೊಡೆ. ಅವು ಕಂಬಳಿಯನ್ನು ಕೆಳಕ್ಕೆ ಬಿಟ್ಟುಬಿಡುತ್ತವೆ. ಅಲ್ಲದೆ ಅವುಗಳಲ್ಲಿ ಒಂದು ಹಕ್ಕಿಗೂ ಪೆಟ್ಟು ತಗಲಿ ಅದು ಸತ್ತು ನೆಲಕ್ಕೆ ಬೀಳುತ್ತದೆ. ಆ ವಸ್ತ್ರವನ್ನು ನೀನು ತೆಗೆದುಕೊ. ಅದನ್ನು ಹೆಗಲ ಮೇಲೆ ಹೊದ್ದುಕೊಂಡರೆ ಯಾವ ಸ್ಥಳಕ್ಕೆ ಬೇಕಾದರೂ ನೆನೆಸಿಕೊಂಡ ಕೂಡಲೇ ಹೋಗಬಹುದು. ಹಾಗೆಯೇ ಆ ಸತ್ತ ಹಕ್ಕಿಯ ಎದೆಯನ್ನು ಸೀಳಿ ಅದರ ಹೃದಯವನ್ನು ಪೂರ್ತಿಯಾಗಿ

ನುಂಗಿಬಿಡು. ಆಮೇಲೆ ಪ್ರತಿದಿವಸವೂ ನೀನು ಬೆಳಗ್ಗೆ ಏಳುವ ಹೊತ್ತಿಗೆ ನಿನ್ನ ತಲೆದಿಂಬಿನ ಕೆಳಗೆ ಒಂದು ಚಿನ್ನದ ನಾಣ್ಯ ಸಿಕ್ಕುತ್ತದೆ" ಎಂದು ಹೇಳಿದಳು.

ಬೇಟೆಗಾರ ಮುದುಕಿಯನ್ನು ವಂದಿಸಿ ಮುಂದೆ ನಡೆದ. "ಇವಳೇನೋ ಒಳ್ಳೊಳ್ಳೆಯ ಪದಾರ್ಥಗಳೇ ದೊರೆಯುತ್ತವೆಯೆಂದು ಹೇಳಿದಳು. ಆದರೆ ಇವಳ ಮಾತಿನಲ್ಲಿ ಎಷ್ಟು ಸತ್ಯವಿದೆಯೋ ನೋಡಬೇಕು" ಎಂದು ಅನುಮಾನಿಸುತ್ತಿದ್ದ. ಹೀಗೆ ಅವನು ಸುಮಾರು ನೂರು ಹೆಜ್ಜೆ ನಡೆದ. ಹಕ್ಕಿಗಳ ರೆಕ್ಕೆ ಬಡಿಯುವ ಸಪ್ಪಳ ಕೇಳಿಸಿತು. ಅವನು ಸುತ್ತಲೂ ತಲೆಯೆತ್ತಿ ನೋಡಿದ. ಒಂದು ಮರದ ಮೇಲೆ ಅನೇಕ ಹಕ್ಕಿಗಳು ಒಂದು ವಸ್ತ್ರವನ್ನು ತಮ್ಮ ಕಾಲಿನ ಉಗುರುಗಳಿಂದಲೂ ಕೊಕ್ಕುಗಳಿಂದಲೂ ಎಳೆದಾಡುತ್ತಿದ್ದವು. ಒಂದೊಂದು ಹಕ್ಕಿಯೂ ಆ ವಸ್ತ್ರವನ್ನು ಸಂಪೂರ್ಣವಾಗಿ ತಾನೇ ಪಡೆಯಬೇಕೆಂದು ಪ್ರಯತ್ನಿಸುತ್ತಿತ್ತು.

ಬೇಟೆಗಾರ "ಆಶ್ಚರ್ಯ! ಎಲ್ಲವೂ ಮುದುಕಿ ಹೇಳಿದ ಹಾಗೆಯೇ ನಡೆಯುತ್ತಿದೆ!" ಎಂದು ಹಿಗ್ಗುತ್ತಾ ತುಪಾಕಿಯನ್ನು ತೆಗೆದುಕೊಂಡು ಅವುಗಳ ಮಧ್ಯಕ್ಕೆ ಗುರಿಯಿಟ್ಟು ಗುಂಡುಹಾರಿಸಿದ. ಆ ಸದ್ದಿಗೇ ಹಕ್ಕಿಗಳ ಪುಕ್ಕಗಳು ಉದುರಿ ಗಾಳಿಯಲ್ಲೆಲ್ಲಾ ತೂರಾಡಿದವು. ಒಂದು ಹಕ್ಕಿ ಸತ್ತು ನೆಲಕ್ಕೆ ಬಿತ್ತು. ಉಳಿದ ಹಕ್ಕಿಗಳು ಹಾರಿಹೋದವು. ವಸ್ತ್ರವೂ ನೆಲಕ್ಕೆ ಬಿತ್ತು. ಅನಂತರ ಬೇಟೆಗಾರ ಮುದುಕಿ ಹೇಳಿದ್ದಂತೆ ಸತ್ತುಬಿದ್ದ ಹಕ್ಕಿಯ ಮೈಯನ್ನು ಸೀಳಿ ಅದರ ಹೃದಯವನ್ನು ಪೂರ್ತಿಯಾಗಿ ನುಂಗಿ, ವಸ್ತ್ರವನ್ನು ತೆಗೆದುಕೊಂಡು ಮನೆಗೆ ಹಿಂದಿರುಗಿದ.

ಮಾರನೆಯ ದಿನ ಬೆಳಗಾಗುತ್ತಲೆ ಅವನಿಗೆ ಮುದುಕಿಯ ಮಾತು ನೆನಪಿಗೆ ಬಂತು. ಎದ್ದು ತಲೆದಿಂಬನ್ನು ಎತ್ತಿ ನೋಡಿದ. ಅದರ ಕೆಳಗೆ ಅವಳು ಹೇಳಿದ್ದಂತೆಯೇ ಹೊಳೆಹೊಳೆಯುವ ಒಂದು ಚಿನ್ನದ ನಾಣ್ಯವಿತ್ತು. ಆಗ ಅವನ ಆನಂದಕ್ಕೆ ಪಾರವೇ ಇಲ್ಲದಾಯಿತು!

ಅಂದಿನಿಂದ ಪ್ರತಿದಿವಸವೂ ಬೆಳಗ್ಗೆ ಎದ್ದ ಕೂಡಲೆ ಅವನಿಗೆ ಒಂದು ಚಿನ್ನದ ನಾಣ್ಯ ಸಿಕ್ಕುತ್ತಿತ್ತು. ಕ್ರಮೇಣ ಅವನು ಬಂಗಾರದ ದೊಡ್ಡ ರಾಸಿಯನ್ನೇ ಕೂಡಿಹಾಕಿದ. ಒಂದು ಸಾರಿ ಅವನು ಆ ರಾಸಿಯ

ಎದುರಿಗೆ ನಿಂತಿದ್ದಾಗ "ನನಗೆ ಇಷ್ಟೊಂದು ಐಶ್ವರ್ಯವಿದ್ದೂ ನಾನು ಈ ಹಳ್ಳಿಯಲ್ಲಿ ಈ ಹಳೆಯ ಮನೆಯಲ್ಲಿ ಕೊಳೆಯುತ್ತಿದ್ದರೆ ಏನು ಪ್ರಯೋಜನ? ಪ್ರಪಂಚ ಹೇಗಿದೆಯೋ, ಸ್ವಲ್ಪ ಸುತ್ತಾಡಿ ನೋಡಿಕೊಂಡು ಬರಬೇಕು" ಎಂಬ ಯೋಚನೆ ಅವನ ಮನಸ್ಸಿನಲ್ಲಿ ಮೂಡಿತು.

ಆ ದಿನವೇ ಅವನು "ಹೋಗಿ ಬರುತ್ತೇನೆ" ಎಂದು ತನ್ನ ಬಂಧುಗಳಿಗೆ ಹೇಳಿ, ತುಪಾಕಿಯನ್ನು ಯಾರ ಕೈಗೂ ಎಟುಕದ ಹಾಗೆ ಮನೆಯ ಸೂರಿನ ಕೆಳಗಿದ್ದ ಒಂದು ತೊಲೆಯ ಮೇಲಿಟ್ಟು ಹೊರಟ.

ದಾರಿಯಲ್ಲಿ ಒಂದು ದಟ್ಟವಾಗಿ ಬೆಳೆದಿದ್ದ ಕಾಡು ಸಿಕ್ಕಿತು. ಕಾಡಿನ ಆಚೆ ಕಣಿವೆಯಲ್ಲಿ ಒಂದು ದೊಡ್ಡ ಅರಮನೆಯಂಥ ಕಟ್ಟಡವಿತ್ತು. ಅದರ ಒಂದು ಕಿಟಿಕಿಯಲ್ಲಿ ಒಬ್ಬ ಮುದುಕಿಯೂ ಬಹಳ ಚೆಲುವೆಯಾದ ಒಬ್ಬ ಹುಡುಗಿಯೂ ನಿಂತು ಹೊರಗಡೆಗೆ ನೋಡುತ್ತಿದ್ದರು.

ಆ ಮುದುಕಿ ಒಬ್ಬ ಕೆಟ್ಟ ಮಾಟಗಾತಿ; ಹುಡುಗಿ ಅವಳ ಮಗಳು. ಬೇಟೆಗಾರನನ್ನು ದೂರದಿಂದಲೆ ಕಂಡು, ಮುದುಕಿ ಮಗಳ ಕಡೆಗೆ ತಿರುಗಿ "ಅದೋ ನೋಡು, ಅಲ್ಲಿ ಬರುತ್ತಿರುವ ಮನುಷ್ಯನಲ್ಲಿ ಒಂದು ಅಮೂಲ್ಯವಾದ ವಸ್ತುವಿದೆ. ನಾವು ಏನಾದರೂ ಮಾಡಿ ಅವನಿಗೆ ಅದರ ಭಾರವನ್ನು ತಪ್ಪಿಸಬೇಕು. ಅದು ಅವನಲ್ಲಿರುವುದಕ್ಕಿಂತಲೂ ನಮ್ಮಲ್ಲಿದ್ದರೆ ಒಳ್ಳೆಯದು. ಅದೊಂದು ಹಕ್ಕಿಯ ಹೃದಯ. ಅದರ ಪ್ರಭಾವದಿಂದ ಅವನಿಗೆ ಪ್ರತಿದಿನವೂ ತಲೆದಿಂಬಿನ ಕೆಳಗೆ ಒಂದು ಚಿನ್ನದ ನಾಣ್ಯ ದೊರೆಯುತ್ತದೆ" ಎಂದಳು.

ಅನಂತರ ಮುದುಕಿ ಯಾವ ಉಪಾಯದಿಂದ ಆ ಹಕ್ಕಿಯ ಹೃದಯ ಬೇಟೆಗಾರನ ದೇಹದಿಂದ ಹೊರಗೆ ಬರುವ ಹಾಗೆ ಮಾಡಬೇಕು, ಅವನನ್ನು ಮೋಸಪಡಿಸಲು ಏನು ಆಟವನ್ನು ಹೂಡಬೇಕು, ಅದರಲ್ಲಿ ಅವಳ ಕೆಲಸವೇನು ಎಂಬುದನ್ನೆಲ್ಲಾ ಮಗಳಿಗೆ ತಿಳಿಸಿ, ಕಣ್ಣು ಕೆಂಪಗೆ ಮಾಡಿಕೊಂಡು, "ನೀನೇನಾದರೂ ನಾನು ಹೇಳಿದಂತೆ ನಡೆಯದಿದ್ದರೆ ನಿನ್ನನ್ನು ಹುಟ್ಟಲಿಲ್ಲ ಎನ್ನಿಸಿಬಿಡುತ್ತೇನೆ, ಎಚ್ಚರಿಕೆಯಿಂದಿರು" ಎಂದು ಅವಳನ್ನು ಬೆದರಿಸಿದಳು.

ಬೇಟೆಗಾರ ಮನೆಯ ಹತ್ತಿರ ಬಂದಾಗ ಕಿಟಕಿಯಲ್ಲಿ ನಿಂತಿದ್ದ ಹುಡುಗಿ ಅವನ ಕಣ್ಣಿಗೆ ಬಿದ್ದಳು. ಅವನು "ನಾನು ಬಹಳ ದೂರ ನಡೆದು ದಣಿದಿದ್ದೇನೆ. ಸುಧಾರಿಸಿಕೊಳ್ಳದೆ ಮುಂದೆ ಹೋಗುವಹಾಗೆಯೇ ಇಲ್ಲ. ಎದುರಿಗೆ ಕಾಣುತ್ತಿರುವ ಆ ಮನೆಯಲ್ಲಿ ಹೋಗಿ ಒಂದು ರಾತ್ರಿ ತಂಗಲು ಸ್ಥಳ ಕೇಳುತ್ತೇನೆ. ಅವರು ಎಷ್ಟು ದುಡ್ಡು ಬೇಕೆಂದರೂ ನನ್ನಲ್ಲಿದೆ, ಏನು ಭಯ?" ಎಂದು ಯೋಚಿಸಿ ಮುಂದುವರಿದ. ನಿಜ ಏನೆಂದರೆ ನಡೆದದ್ದರಿಂದ ಆಗಿದ್ದ ಆಯಾಸಕ್ಕಿಂತಲೂ ಕಿಟಕಿಯಲ್ಲಿ ಕಂಡ ಚೆಲುವೆಯನ್ನು ಮಾತಾಡಿಸಬೇಕೆಂಬ ಅಪೇಕ್ಷೆ ಅವನಲ್ಲಿ ಹೆಚ್ಚು ಪ್ರಬಲವಾಗಿತ್ತು.

ಮನೆಯನ್ನು ಪ್ರವೇಶಿಸಿದ ಕೂಡಲೆ ಅವನಿಗೆ ಸುಸ್ವಾಗತ ದೊರೆಯಿತು.

ಮುದುಕಿ "ಆ ಹಕ್ಕಿಯ ಹೃದಯವನ್ನು ಇವನಿಂದ ಆದಷ್ಟು ಬೇಗ ತೆಗೆದುಕೊಂಡು ಬಿಡಬೇಕು; ತಡಮಾಡಿದರೆ ಕೆಲಸ ಕೆಟ್ಟೀತು" ಎಂದು ಯೋಚಿಸಿ, ಒಂದು ಬಿಸಿಯಾದ ಕಷಾಯವನ್ನು ತಯಾರಿಸಿ ಅದನ್ನು ಒಂದು ಸೊಗಸಾದ ಬಂಗಾರದ ಬಟ್ಟಲಿನಲ್ಲಿ ಸುರಿದು ಮಗಳನ್ನು ಕರೆದು "ಇಗೋ, ಇದನ್ನು ಆತನಿಗೆ ಕುಡಿಯುವುದಕ್ಕೆ ಕೊಡು" ಎಂದು ಹೇಳಿ ಕೊಟ್ಟಳು.

ಹುಡುಗಿ ತಂದುಕೊಟ್ಟ ಕಷಾಯವನ್ನು ಬೇಟೆಗಾರ ಹಿಂದು ಮುಂದು ನೋಡದೆ ಬಾಯಿಗೆತ್ತಿ ಬಟ್ಟಲಿನಲ್ಲಿ ಒಂದು ತೊಟ್ಟನ್ನೂ ಬಿಡದ ಹಾಗೆ ಹೀರಿಬಿಟ್ಟ. ಅವನು ಬಟ್ಟಲನ್ನು ಇನ್ನೂ ಕೆಳಗಿಟ್ಟಿರಲಿಲ್ಲ, ಹಕ್ಕಿಯ ಹೃದಯ ಅವನ ಬಾಯಿಂದ ಹಾರಿ ಹೊರಕ್ಕೆ ಬಿತ್ತು. ಇದಕ್ಕಾಗಿಯೇ ಕಾದುಕೊಂಡಿದ್ದ ಮಾಟಗಾತಿಯ ಮಗಳು ಯಾವ ಮಾಯದಲ್ಲೋ ಅದನ್ನು ತಾನು ಕೈಗೆ ತೆಗೆದುಕೊಂಡು ನುಂಗಿದಳು.

ಅಂದಿನಿಂದ ಬೇಟೆಗಾರನ ತಲೆದಿಂಬಿನ ಕೆಳಗೆ ಚಿನ್ನದ ನಾಣ್ಯಗಳು ಕಂಡುಬರುವುದು ನಿಂತುಹೋಗಿ ಆ ಹುಡುಗಿಯ ತಲೆದಿಂಬಿನ ಕೆಳಗೆ ಅವು ದೊರೆಯತೊಡಗಿದವು. ಕೆಲವು ದಿನಗಳಲ್ಲೇ ಮಾಟಗಾತಿಯ ಪೆಟ್ಟಿಗೆ ತುಂಬಿಹೋಯಿತು. ಹುಡುಗಿಯ ಜೊತೆಯಲ್ಲಿ ಚಕ್ಕಂದವಾಡುತ್ತಿದ್ದ ಬೇಟೆಗಾರನ ಗಮನ ಆ ಕಡೆಗೆ ಸುಳಿಯಲೇ ಇಲ್ಲ.

ಅನಂತರ ಮುದುಕಿ "ಹಕ್ಕಿಯ ಹೃದಯ ಸಿಕ್ಕಿತು; ಇನ್ನು ಇಷ್ಟ ಪಟ್ಟಲ್ಲಿಗೆ ಕರೆದುಕೊಂಡು ಹೋಗುವ ಆ ವಸ್ತ್ರವನ್ನು ವಶಪಡಿಸಿಕೊಳ್ಳ ಬೇಕು" ಎಂದಳು.

ಹುಡುಗಿ "ಪಾಪ! ಇದ್ದ ಐಶ್ವರ್ಯವನ್ನೆಲ್ಲಾ ಕಳೆದುಕೊಂಡಿದ್ದಾನೆ; ಅದೊಂದಾದರೂ ಅವನ ಹತ್ತಿರಲೇ ಇರಲಿ" ಎಂದಳು.

ಮುದುಕಿ ರೇಗಿಬಿದ್ದು "ಆ ವಸ್ತ್ರ ಅಮೂಲ್ಯವಾದುದು. ನಾನು ಅದನ್ನು ಪಡೆಯಲೇ ಬೇಕು. ನೀನೇನಾದರೂ ನಾನು ಹೇಳಿದಂತೆ ಕೇಳದಿದ್ದರೆ ನಿನ್ನನ್ನು ಸಾಯಿಸಿಬಿಡುತ್ತೇನೆ" ಎಂದು ಹುಡುಗಿಗೆ ಚೆನ್ನಾಗಿ ಏಟುಬಿಗಿದಳು.

ಹುಡುಗಿ ಮುದುಕಿ ಹೇಳಿದ ಹಾಗೆ ನಡೆಯಬೇಕಾಯಿತು. ಅವಳು ಕಿಟಕಿಯ ಪಕ್ಕಕ್ಕೆ ಹೋಗಿ ವ್ಯಸನದಿಂದ ಖಿನ್ನಳಾದವಳಂತೆ ಹೊರಗಡೆ ಕಾಣುತ್ತಿದ್ದ ದೂರದ ದೃಶ್ಯಗಳನ್ನು ನೋಡುತ್ತ ನಿಂತಳು.

ಬೇಟೆಗಾರ "ಹೀಗೇಕೆ ನಿಂತಿರುವೆ? ಏನು ಯೋಚನೆ?" ಎಂದ.

ಅವಳು "ಅದೋ ಆ ದೂರದಲ್ಲಿ ಕಾಣುವ ಬೆಟ್ಟಗಳ ನಡುವೆ ಅತ್ಯಂತ ಬೆಲೆಬಾಳುವ ರತ್ನಗಳಿವೆಯೆಂದು ಕೇಳಿದ್ದೇನೆ. ನನಗೆ ಅಲ್ಲಿಗೆ ಹೋಗಿ ಬರಬೇಕೆಂದು ಆಸೆ. ಆದರೆ ಮನುಷ್ಯರು ಅಷ್ಟು ದೂರ ಹೋಗುವು ದಾದರೂ ಹೇಗೆ? ಆ ಕೆಲಸ ಹಕ್ಕಿಗಳಿಗೆ ಮಾತ್ರ ಸಾಧ್ಯವಾದೀತು" ಎಂದಳು.

ಅವನು "ಅಷ್ಟೇ ತಾನೆ? ನಿನಗೇಕೆ ಚಿಂತೆ? ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ" ಎಂದು ವಸ್ತ್ರವನ್ನು ಹೊದ್ದು ಕೊಂಡು ಅವಳನ್ನು ಅದರೊಳಕ್ಕೆ ಸೆಳೆದುಕೊಂಡು ಆ ರತ್ನಗಳಿದ್ದ ಬೆಟ್ಟಗಳ ಪ್ರದೇಶಕ್ಕೆ ಹೋಗಬೇಕೆಂದು ಅಪೇಕ್ಷೆಪಟ್ಟ. ಮರುಕ್ಷಣದಲ್ಲೇ ಅವರಿಬ್ಬರೂ ಆ ಬೆಟ್ಟಗಳ ಮಧ್ಯೆ ನಿಂತರು. ಅವರ ಸುತ್ತಲೂ ವಿಧವಿಧ ವಾದ ರತ್ನಗಳು ಬಿಸಿಲಿನಲ್ಲಿ ಥಳಥಳಿಸುತ್ತಿದ್ದವು. ಅವರು ಕೆಲವನ್ನು ಆರಿಸಿ ಗಂಟುಕಟ್ಟಿದರು. ಅಷ್ಟರಲ್ಲಿ ಮಾಟಗಾತಿ ತನ್ನ ಮಂತ್ರಶಕ್ತಿ ಯಿಂದ ಬೇಟೆಗಾರನಿಗೆ ನಿದ್ದೆಬರುವ ಹಾಗೆ ಮಾಡಿದಳು. ಅವನ ಕಣ್ಣು ಗಳು ಎಳೆಯತೊಡಗಿದವು. ಅವನು ಜೊತೆಯಲ್ಲಿದ್ದ ಹುಡುಗಿಗೆ "ಬಹಳ

ಆಯಾಸವಾಗಿದೆ, ವಿಶ್ರಮಿಸಿಕೊಳ್ಳೋಣ" ಎಂದ. ಇಬ್ಬರೂ ಕುಳಿತು ಕೊಂಡರು.

ಬೇಟೆಗಾರನಿಗೆ ನಿದ್ದೆ ತಡೆಯಲು ಆಗಲಿಲ್ಲ. ಹುಡುಗಿಯ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು ಮಲಗಿಬಿಟ್ಟ. ಕಣ್ಣು ಮುಚ್ಚಿದ ಕೂಡಲೆ ಹೊರಗಿನ ಪ್ರಜ್ಞೆಯಿಲ್ಲದಂತೆ ನಿದ್ರೆಬಂದಿತು. ಅವನು ಗೊರಕೆ ಹೊಡೆಯು ತ್ತಿದ್ದಾಗ ಅವಳು ಮೆಲ್ಲನೆ ವಸ್ತ್ರವನ್ನು ಎಳೆದು ತನ್ನ ಹೆಗಲಿನ ಮೇಲೆ ಹೊದೆದುಕೊಂಡು ಇಬ್ಬರೂ ಸೇರಿ ಕೂಡಿಹಾಕಿದ್ದ ರತ್ನಗಳ ಗಂಟನ್ನು ಕೈಗೆ ತೆಗೆದುಕೊಂಡು ತಾನು ಮತ್ತೆ ತನ್ನ ಮನೆಯಲ್ಲಿರಬೇಕು ಎಂದು ಅಪೇಕ್ಷೆಪಟ್ಟಳು.

ಬೇಟೆಗಾರ ಎಚ್ಚೆತ್ತು ಸುತ್ತಲೂ ನೋಡಿದಾಗ ಒಂದು ನೊಣವೂ ಕಾಣಲಿಲ್ಲ. ಆಗ ಹುಡುಗಿ ಮಾಡಿದ್ದ ಮೋಸ ಅವನಿಗೆ ಅರ್ಥ ವಾಯಿತು.

ಆ ಬೆಟ್ಟಗಳ ಒಡೆಯರು ಮೂವರು ರಾಕ್ಷಸರು. ಅವನಿಗೆ ಎಚ್ಚರ ವಾದ ಸ್ವಲ್ಪ ಹೊತ್ತಿಗೆ ಅವರು ಆ ಕಡೆ ಬಂದರು. ಅವರನ್ನು ನೋಡು ತ್ತಿದ್ದ ಹಾಗೆಯೇ ಅವನು ಥಟಕ್ಕನೆ ಮತ್ತೆ ಮಲಗಿ ಅಲುಗಾಡದೆ ಬಿದ್ದುಕೊಂಡ.

ರಾಕ್ಷಸರಲ್ಲಿ ಒಬ್ಬ ದಾರಿಗೆ ಅಡ್ಡವಾಗಿ ಮಲಗಿದ್ದ ಬೇಟೆಗಾರನನ್ನು ಎಡವಿ, "ಇಲ್ಲೊಂದು ಸಣ್ಣ ಮಣ್ಣುಹುಳ ಬಿದ್ದಿದೆ" ಎಂದ.

ಇನ್ನೊಬ್ಬ "ಅದೇನು ಮಾಡೀತು ನಮ್ಮನ್ನು? ಕಾಲಿನಿಂದ ತುಳಿದು ಹಾಕು" ಎಂದು ಸೂಚಿಸಿದ.

ಮೂರನೆಯವನು "ಪಾಪ, ಹೋಗಲಿ ಬಿಡು; ಅದನ್ನೇಕೆ ಸಾಯಿ ಸುತ್ತೀಯ? ಎಷ್ಟು ಹೊತ್ತು ಹಾಗೆ ಮಲಗಿದ್ದೀತು? ಬೆಟ್ಟದ ತುದಿಯ ವರೆಗೂ ಹತ್ತಿ ಹೋದರೆ ಮೋಡಗಳು ಅದನ್ನು ಹೊತ್ತುಕೊಂಡು ಹೋಗುತ್ತವೆ" ಎಂದ.

ಅಂತೂ ಅವರು ಅವನಿಗೆ ಯಾವ ತೊಂದರೆಯನ್ನೂ ಮಾಡದೆ ಹೊರಟುಹೋದರು. ಅವರು ಮಾತಾಡಿಕೊಂಡಿದ್ದುದನ್ನೆಲ್ಲಾ ಅವನು

ಕಿವಿಗೊಟ್ಟು ಕೇಳಿದ್ದ. ಆದ್ದರಿಂದ ಅವರು ಕಣ್ಮರೆಯಾಗುವವರೆಗೂ ಕಾದಿದ್ದು ಅನಂತರ ಮೇಲಕ್ಕೆದ್ದು ಬೆಟ್ಟದ ತುದಿಯ ವರೆಗೂ ಹತ್ತಿಹೋಗಿ ಕುಳಿತುಕೊಂಡ. ನಾಲ್ಕೈದು ನಿಮಿಷಗಳು ಕಳೆದವು. ಒಂದು ಮೋಡ ಅವನ ಎದುರಿಗೆ ತೇಲಿಕೊಂಡು ಬಂತು. ಅವನು ಎರಡು ಕೈಗಳಿಂದಲೂ ಅದನ್ನು ಬಲವಾಗಿ ಹಿಡಿದುಕೊಂಡ. ಅದು ಅವನನ್ನು ಆಕಾಶದಲ್ಲಿ ಬಹಳ ಹೊತ್ತು ಸುತ್ತಾಡಿಸಿ ಕೊನೆಗೆ ಗಿಡಮೂಲಿಕೆಗಳು ಬೆಳೆದಿದ್ದ ಒಂದು ತೋಟದಲ್ಲಿ ಕೆಡವಿತು.

ಬೇಟೆಗಾರನಿಗೆ ಹಸಿವಿನಿಂದ ಸಂಕಟವಾಗುತ್ತಿತ್ತು. ಆ ತೋಟದಲ್ಲಿ ಹಣ್ಣುಹಂಪಲು ಏನಾದರೂ ದೊರೆಯುವುದೇನೋ ಎಂದು ಹುಡುಕಾಡಿದ. ಏನೂ ಕಾಣಲಿಲ್ಲ. ಆದಕಾರಣ ಹೊಟ್ಟೆ ತುಂಬಿಸಿಕೊಳ್ಳಲು ಅಲ್ಲಿದ್ದ ಗಿಡ ಬಳ್ಳಿಗಳೇ ಗತಿಯೆಂದು ನಿರ್ಧರಿಸಿ ಒಂದು ಗಿಡದಲ್ಲಿದ್ದ ಸೊಪ್ಪನ್ನು ಕಿತ್ತು ಬಾಯಲ್ಲಿಟ್ಟುಕೊಂಡು ಕಚ್ಚಿದ. ತಕ್ಷಣವೇ ಅವನ ಮೈಯಲ್ಲೆಲ್ಲಾ ಏನೋ ಬದಲಾವಣೆಗಳು ಆಗುತ್ತಿದ್ದ ಹಾಗೆ ತೋರಿತು. ಇದ್ದ ಎರಡು ಕಾಲುಗಳ ಜೊತೆಗೆ ಇನ್ನೆರಡು ಹುಟ್ಟಿಕೊಂಡವು. ತಲೆಯ ಮೇಲೆ ಎರಡು ಉದ್ದನೆಯ ಕಿವಿಗಳು ಬೆಳೆದವು. ತನಗೆ ಕತ್ತೆಯ ರೂಪ ಬಂದಿತೆಂದು ಅವನಿಗೆ ಅರಿವಾಯಿತು. “ಇದೇನಿದು?” ಎಂದು ಗಾಬರಿಯಿಂದ ಕತ್ತನ್ನು ತಿರುಗಿಸಿ ನೋಡಿದ. ಹಿಂದೆ ಬಾಲ ನೇತಾಡುತ್ತಿತ್ತು. ಆದರೆ ಅವನ ಹಸಿವು ಮಾತ್ರ ಕೊಂಚವೂ ಬದಲಾವಣೆ ಹೊಂದಿರಲಿಲ್ಲ. ಇನ್ನೊಂದು ಗಿಡಕ್ಕೆ ಬಾಯೊಡ್ಡಿ ಅದರ ಎಲೆಗಳನ್ನು ತಿಂದ. ಮತ್ತೆ ಮೊದಲಿದ್ದಹಾಗೆಯೇ ಮನುಷ್ಯನಾದ. ತರುವಾಯ ರಾತ್ರಿಯೆಲ್ಲಾ ಅಲ್ಲೇ ಮಲಗಿ ಚೆನ್ನಾಗಿ ನಿದ್ದೆಹೋದ. ಅವನ ದಣಿವೆಲ್ಲಾ ಆರಿಹೋಯಿತು.

ಮಾರನೆಯ ದಿನ ಅವನು ತಾನು ತಿಂದಿದ್ದ ಎರಡು ಗಿಡಗಳ ಎಲೆಗಳನ್ನೂ ದಂಟುಗಳನ್ನೂ ಕಿತ್ತು ಗಂಟುಕಟ್ಟಿಕೊಂಡು “ಇವುಗಳ ಸಹಾಯದಿಂದ ಕಳೆದುಹೋಗಿರುವ ನನ್ನ ಆಸ್ತಿಯನ್ನು ಪುನಃ ಸಂಪಾದಿಸುತ್ತೇನೆ, ನನಗೆ ಕೇಡು ಮಾಡಿದವರಿಗೆ ತಕ್ಕ ಶಾಸ್ತಿ ಮಾಡುತ್ತೇನೆ” ಎಂದು ಯೋಚಿಸುತ್ತ, ಮಾಟಗಾತಿಯೂ ಅವಳ ಮಗಳೂ ಇದ್ದ ಮನೆಯನ್ನು

ಹುಡುಕಿಕೊಂಡು ಹೊರಟ. ಎರಡು ದಿವಸಗಳು ಒಂದೇ ಸಮನೆ ತಿರುಗಾಡಿದ ಮೇಲೆ ಅವರ ಮನೆ ಸಿಕ್ಕಿತು. ಅದನ್ನು ಪ್ರವೇಶಿಸುವ ಮೊದಲು ಅವನು ಮುಖಕ್ಕೆಲ್ಲಾ ಬಣ್ಣ ಬಳಿದುಕೊಂಡ. ಅವನು ಯಾರೆಂದು ಗುರುತಿಸಲು ಅವನನ್ನು ಹೆತ್ತ ತಾಯಿಗೂ ಆಗುತ್ತಿರಲಿಲ್ಲ. ಹೀಗೆ ವೇಷ ಮರೆಸಿಕೊಂಡು ಅವನು ಮಾಟಗಾತಿಯ ಮನೆಯ ಬಾಗಿಲಿಗೆ ಹೋಗಿ "ನನಗೆ ನಡೆದು ನಡೆದು ಸಾಕಾಗಿಬಿಟ್ಟಿದೆ ಒಪ್ಪೊತ್ತು ಇಲ್ಲಿದ್ದು ಸುಧಾರಿಸಿಕೊಳ್ಳಲು ಅವಕಾಶ ಕೊಡಬೇಕು" ಎಂದು ಬೇಡಿದ.

ಮಾಟಗಾತಿ "ಯಾರು ನೀನು? ನಿನ್ನ ಕೆಲಸವೇನು?" ಎಂದಳು.

ಅವನು "ನಾನು ದೊರೆಗಳ ಸೇವಕ. ಪ್ರಂಪಂಚದಲ್ಲೇ ಅತ್ಯಂತ ರುಚಿಕರವಾದ ಸೊಪ್ಪನ್ನು ಹುಡುಕಿತರಲು ರಾಜರು ನನ್ನನ್ನು ಕಳುಹಿಸಿದ್ದರು. ತಿಂಗಳುಗಟ್ಟಳೆ ತಿರುಗಾಡಿ ಕೊನೆಗೆ ಅದನ್ನು ಪತ್ತೆಮಾಡಿ ತಂದಿದ್ದೇನೆ" ಎಂದ.

ಮುದುಕಿಯ ಬಾಯಲ್ಲಿ ನೀರೂರಿತು. ಪ್ರಪಂಚದಲ್ಲೇ ಅತ್ಯಂತ ರುಚಿಕರವಾದ ಪದಾರ್ಥ ಎಂದರೆ ಯಾರ ಬಾಯಲ್ಲಿ ನೀರು ಬರುವುದಿಲ್ಲ? ಅವಳು ಅವನ ಮುಂದೆ ಹಲ್ಲುಕಿರಿದು "ನಾನು ನಿನಗೆ ಎಷ್ಟು ಬೇಕಾದರೂ ಸ್ಥಳ ಕೊಡುತ್ತೇನೆ, ಎಲ್ಲಾ ಅನುಕೂಲಗಳನ್ನೂ ಒದಗಿಸುತ್ತೇನೆ. ಆ ಸೊಪ್ಪಿನಲ್ಲಿ ನನಗೆ ಒಂದು ಎಲೆಯನ್ನಾದರೂ ಕೊಡು. ಅದರ ರುಚಿ ಹೇಗಿದೆಯೋ ನಾನು ನೋಡಬೇಕು" ಎಂದು ಕೇಳಿದಳು.

ಅವನು "ಇಷ್ಟಕ್ಕೆಲ್ಲಾ ನೀನು ಅಷ್ಟೊಂದು ದೈನ್ಯ ತೋರಿಸಬೇಕೆ? ಸೊಪ್ಪಿಗೇನು? ಒಂದಲ್ಲದಿದ್ದರೆ ಹತ್ತು ಕೊಡುತ್ತೇನೆ" ಎಂದು, ಗಂಟು ಬಿಚ್ಚಿ, ತಿಂದರೆ ಕತ್ತೆಯ ರೂಪ ಬರುವ ಎಲೆಗಳನ್ನು ಅವಳಿಗೆ ಕೊಟ್ಟ.

ಮಾಟಗಾತಿ ಅವನ್ನು ತೆಗೆದುಕೊಂಡು ಅಡುಗೆಮನೆಗೆ ಹೋಗಿ ಸ್ವಲ್ಪವೂ ತಡಮಾಡದೆ ಬೇಯಿಸಿ ತಿಂದಳು. ಅದನ್ನು ತಿನ್ನುತ್ತಿದ್ದ ಹಾಗೆಯೇ ಅವಳು ಕತ್ತೆಯಾಗಿ ಹಿತ್ತಲಿಗೆ ಓಡಿ ನೆಗೆದಾಡಲು ಆರಂಭಿಸಿದಳು.

ಅನಂತರ ಅವಳ ಪರಿಚಾರಕಿ ಅಡುಗೆಮನೆಗೆ ಬಂದಳು. ಬೆಂದ ಸೊಪ್ಪು ಪಾತ್ರೆಯಲ್ಲಿತ್ತು. ಕದ್ದು ತಿಂದರೆ ನೋಡಲು ಅಲ್ಲಿ ಯಾರೂ ಇರಲಿಲ್ಲ. ಆದ್ದರಿಂದ ಅವಳು ಬೆರಳಿನಿಂದ ಪಾತ್ರೆಯಲ್ಲಿದ್ದ ಸೊಪ್ಪನ್ನು ಎತ್ತಿ ಬಾಯಲ್ಲಿಟ್ಟುಕೊಂಡಳು. ಕೂಡಲೆ ಅವಳೂ ಒಂದು ಕತ್ತೆಯಾಗಿ ಯಜಮಾನಿಯ ಜೊತೆಯಲ್ಲಿ ನೆಗೆದಾಡಲು ಹಿತ್ತಲಿಗೆ ಓಡಿದಳು.

ಇದೆಲ್ಲಾ ನಡೆಯುತ್ತಿದ್ದಾಗ ಬೇಟೆಗಾರ ಮುದುಕಿಯ ಮಗಳ ಜೊತೆಗೆ ಮಾತಾಡುತ್ತ ಕುಳಿತಿದ್ದ. ಸೊಪ್ಪು ಬೇಯಿಸಲು ಒಳಕ್ಕೆ ಹೋದ ತನ್ನ ತಾಯಿ ಎಷ್ಟು ಹೊತ್ತಾದರೂ ಹಿಂದಿರುಗದೆ ಇರಲು ಹುಡುಗಿ "ಸೊಪ್ಪು ಬೇಯುವುದಕ್ಕೆ ಇಷ್ಟು ಹೊತ್ತಾಗುತ್ತದೆಯೆ?" ಎಂದಳು, ಅವನು "ಏನಾಗಿದೆಯೋ ನೋಡಿ ಬರುತ್ತೇನೆ, ಇಲ್ಲೇ ಇರು" ಎಂದು ಹೇಳಿ ಅಡುಗೆಯ ಮನೆಗೆ ಹೋದ. ಅಲ್ಲಿ ಪಾತ್ರೆಯಲ್ಲಿದ್ದ ಅರ್ಧ ಸೊಪ್ಪು ಹಾಗೆಯೇ ಇತ್ತು. ಹಿತ್ತಲಲ್ಲಿ ಎರಡು ಕತ್ತೆಗಳು ಸಿಕ್ಕಿದಹಾಗೆ ನೆಗೆದಾಡುತ್ತಿದ್ದವು.

ಅವನು ಉಳಿದಿದ್ದ ಸೊಪ್ಪನ್ನು ತಂದು ಹುಡುಗಿಗೆ ಕೊಟ್ಟ, ಅದನ್ನು ತಿಂದುದೇ ತಡ, ಅವಳೂ ಇನ್ನಿಬ್ಬರಂತೆಯೇ ಕತ್ತೆಯಾಗಿ ಹಿತ್ತಲಿಗೆ ಓಡಿ ಅಲ್ಲಿದ್ದ ಬೂದಿಯಲ್ಲಿ ಬಿದ್ದು ಹೊರಳಾಡಿದಳು.

ಆಗ ಬೇಟೆಗಾರ ಮುಖ ತೊಳೆದುಕೊಂಡ. ಅವನು ಬಳಿದುಕೊಂಡಿದ್ದ ಬಣ್ಣವೆಲ್ಲಾ ಅಳಿಸಿಹೋಗಿ ನಿಜವಾಗಿ ಅವನು ಯಾರೆಂದು ಕತ್ತೆಗಳಿಗೆ ಗೊತ್ತಾಯಿತು. ಅವನು "ಇಷ್ಟಕ್ಕೇ ಮುಗಿಯಲ್ಲಿಲ್ಲ, ಇನ್ನೂ ಇದೆ ನಿಮಗೆ ಶಿಕ್ಷೆ!" ಎಂದು ಮೂರು ಕತ್ತೆಗಳ ಮುಂಗಾಲುಗಳಿಗೂ ಹಗ್ಗ ಬಿಗಿದು, ಅವು ಹಿಂದಿನ ಎರಡೇ ಕಾಲುಗಳ ಮೇಲೆ ಕಷ್ಟದಿಂದ ಕುಪ್ಪಳಿಸುವಂತೆ ಮಾಡಿ, ಅವನ್ನು ಒಬ್ಬ ಅಗಸನ ಹತ್ತಿರಕ್ಕೆ ಹೊಡೆದುಕೊಂಡು ಹೋದ. ಅಗಸ ಅವನ್ನು ನೋಡಿ ನನ್ನ ಮನೆಯಲ್ಲಿರುವ ಕತ್ತೆಗಳಿಗೇ ಸಾಕಾದಷ್ಟು ಆಹಾರವಿಲ್ಲ; ಇವನ್ನೇಕೆ ತಂದೆ ಇಲ್ಲಿಗೆ?" ಎಂದ.

ಬೇಟೆಗಾರ "ಆ ಯೋಚನೆ ನಿನಗೆ ಬೇಡ. ನೀನು ಇವನ್ನು ಕೊಂಡುಕೊಳ್ಳಬೇಕಾಗಿಲ್ಲ. ಸುಮ್ಮನೆ ಸಾಕುತ್ತಿರು. ಖರ್ಚು ಎಷ್ಟಾದರೂ ನಾನು ಕೊಡುತ್ತೇನೆ" ಎಂದ.

ಅಗಸ "ಆಗಬಹುದು. ಇವನ್ನು ನಾನು ಯಾವ ರೀತಿ ಸಾಕಬೇಕು?" ಎಂದ.

ಬೇಟೆಗಾರ "ಆ ಮುದಿಕತ್ತೆಗೆ (ಮಾಟಗಾತಿಗೆ) ದಿನಕ್ಕೆ ಮೂರು ಹೊತ್ತು ಏಟುಗಳನ್ನೂ ಒಂದು ಹೊತ್ತು ಊಟವನ್ನೂ ಕೊಡು. ಎರಡನೆಯದಕ್ಕೆ (ಪರಿಚಾರಕಿಗೆ) ದಿನಕ್ಕೆ ಒಂದು ಹೊತ್ತು ಏಟುಗಳನ್ನೂ ಮೂರು ಹೊತ್ತು ಊಟವನ್ನೂ ಕೊಡು. ಎಲ್ಲಕ್ಕಿಂತಲೂ ಚಿಕ್ಕದಾದ ಮೂರನೆಯ ಕತ್ತೆಗೆ (ಅವನು ಪ್ರೀತಿಸುತ್ತಿದ್ದ ಹುಡುಗಿಗೆ) ಏಟು ಕೊಡಲೇ ಬೇಡ, ಮೂರು ಹೊತ್ತು ಊಟ ಮಾತ್ರ ತಪ್ಪದೆ ಕೊಡು" ಎಂದು ಆಜ್ಞಾಪಿಸಿ, ಮಾಟಗಾತಿಯ ಮನೆಗೆ ಹಿಂದಿರುಗಿದ.

ಐದು ದಿನಗಳು ಕಳೆದವು. ಆರನೆಯ ದಿವಸ ಅಗಸ ಬೇಟೆಗಾರನ ಬಳಿಗೆ ಬಂದು "ದಿನಕ್ಕೆ ಮೂರು ಹೊತ್ತು ಏಟುಗಳನ್ನೂ ಒಂದು ಹೊತ್ತು ಊಟವನ್ನೂ ಕೊಡುತ್ತಿದ್ದ ಕತ್ತೆ ಸತ್ತುಹೋಯಿತು. ಉಳಿದ ಎರಡು ಕತ್ತೆಗಳೂ ಬಹಳ ವ್ಯಸನಪಡುತ್ತಿರುವಂತೆ ಮಂಕಾಗಿವೆ. ಅವೂ ಬಹಳ ದಿನ ಬದುಕಲಾರವು" ಎಂದು ತಿಳಿಸಿದ.

ಇದನ್ನು ಕೇಳಿ ಬೇಟೆಗಾರನ ಮನಸ್ಸು ಕರಗಿತು. ಅವನ ಕೋಪ ತಗ್ಗಿತು. "ಅವೆರಡನ್ನೂ ಹಿಂದಕ್ಕೆ ಹೊಡೆದುಕೊಂಡು ಬಾ" ಎಂದು ಅಗಸನಿಗೆ ಹೇಳಿದ. ಅವು ಹಿಂದಿರುಗಿ ಬರಲು, ಅವಕ್ಕೆ ತನ್ನ ಗಂಟಿನಲ್ಲಿದ್ದ ಇನ್ನೊಂದು ಜಾತಿಯ ಎಲೆಗಳನ್ನು ತಿನ್ನಿಸಿದ. ಅವೆರಡಕ್ಕೂ ಮತ್ತೆ ಮನುಷ್ಯರೂಪ ಬಂತು.

ಆಗ ಹುಡುಗಿ ಬೇಟೆಗಾರನ ಕಾಲಿಗೆ ಬಿದ್ದು "ನನ್ನನ್ನು ಮನ್ನಿಸು. ನಾನು ಮಾಡಿದ್ದೆಲ್ಲಾ ನಮ್ಮ ಅಮ್ಮನ ಬಲವಂತಕ್ಕೆ, ನನ್ನ ಸ್ವಂತ ಇಚ್ಛೆಯಿಂದಲ್ಲ. ನಿಜವಾಗಿಯೂ ನಾನು ನಿನ್ನನ್ನು ಪ್ರೀತಿಸುತ್ತೇನೆ. ನಿನ್ನ ವಸ್ತ್ರ ಆ ಕೋಣೆಯಲ್ಲಿ ಗೂಟದ ಮೇಲಿದೆ" ಎಂದಳು.

ಈ ಕ್ಷಮಾಪಣೆಯಿಂದ ಆವನಿಗೆ ತೃಪ್ತಿಯಾಯಿತು. ಅವನು "ವಸ್ತ್ರವನ್ನೂ ಹಕ್ಕಿಯ ಹೃದಯವನ್ನೂ ನೀನೇ ಇಟ್ಟುಕೊ. ಅವು ನಿನ್ನಲ್ಲಿದ್ದರೂ ಒಂದೇ, ನನ್ನಲ್ಲಿದ್ದರೂ ಒಂದೇ. ನಾನು ನಿನ್ನನ್ನು ಮದುವೆಯಾಗುತ್ತೇನೆ" ಎಂದ.

ಅವರಿಬ್ಬರೂ ಗಂಡಹೆಂಡಿರಾಗಿ ಸಾಯುವವರೆಗೂ ಸುಖವಾಗಿ ಬಾಳಿದರು.

# ಹೆಬ್ಬೆರಳು ತಿಮ್ಮ

ಒಂದು ಹಳ್ಳಿಯಲ್ಲಿ ಒಬ್ಬ ಮರ ಕಡಿಯುವವನಿದ್ದ. ಅವನು ಕಾಡಿನಲ್ಲಿ ಕಟ್ಟಿಗೆ ಕಡಿದು ತಂದು ಮಾರಿ ಹೊಟ್ಟೆ ಹೊರೆಯುತ್ತಿದ್ದ. ಕಟ್ಟಿಗೆಯನ್ನು ಪಟ್ಟಣಕ್ಕೆ ಒಯ್ಯಲು ಅವನ ಹತ್ತಿರ ಒಂದು ಒಂಟೆತ್ತಿನ ಗಾಡಿಯಿತ್ತು.

ಒಂದು ದಿನ ರಾತ್ರಿ ಊಟವಾದ ಮೇಲೆ ಅವನೂ ಅವನ ಹೆಂಡತಿಯೂ ಮನೆಯ ಮುಂದಿನ ಜಗಲಿಯ ಮೇಲೆ ಕುಳಿತು ಎಲೆ ಅಡಿಕೆ ಅಗಿಯುತ್ತಿದ್ದರು. ಅವನು ಅಂಗೈಯಲ್ಲಿ ಹೊಗೆಸೊಪ್ಪನ್ನು ಪುಡಿ ಮಾಡುತ್ತ, "ಹೆಣ್ಣೆ, ನಮ್ಮ ಬಾಳು ಎಷ್ಟು ಬೇಸರಕರವಾಗಿದೆ! ಮನೆಯಲ್ಲಿ ಕುಣಿದು, ಕೂಗಿ, ಆಟವಾಡಿ, ನಮ್ಮನ್ನು ನಲಿಸಲು ದೇವರು ನಮಗೆ ಮಕ್ಕಳನ್ನು ಕೊಡಲಿಲ್ಲ. ನಮ್ಮ ನೆರೆಹೊರೆಯವರೆಲ್ಲಾ ತಮ್ಮ ಮಕ್ಕಳೊಡನೆ ಸುಖವಾಗಿ ಸಂತೋಷದಿಂದಿದ್ದಾರೆ. ನಮಗೆ ಆ ಭಾಗ್ಯ ಇಲ್ಲ. ಒಬ್ಬಂಟಿಗರಾಗಿ ಜೀವನ ನಡೆಸುವುದೇ ನಮ್ಮ ಗತಿಯಾಯಿತು" ಎಂದು ವ್ಯಸನದಿಂದ ಹೇಳಿದ.

ಅವಳು "ಹೌದು, ನಮ್ಮ ದುರದೃಷ್ಟಕ್ಕೆ ಎಷ್ಟು ಗೋಳಾಡಿದರೂ ಸಾಲದು. ನನಗೂ ಒಂದು ಮಗು ಇದ್ದಿದ್ದರೆ ನಾನು ಎಷ್ಟು ಸುಖವಾಗಿರುತ್ತಿದ್ದೆ! ಒಂದೇ ಒಂದು ಮಗು ಆಗಬಾರದೆ? ಒಂದು ಪುಟ್ಟ ಮಗು—ಕಡೆಯ ಪಕ್ಷಕ್ಕೆ ನನ್ನ ಹೆಬ್ಬೆರಳಿನಷ್ಟಿದ್ದರೂ ಚಿಂತೆಯಿಲ್ಲ—ನನ್ನದು ಎಂದು ಒಂದು ಮಗು ಆದರೆ ಸಾಕು! ದೇವರೆ, ಅಷ್ಟು ಮಾತ್ರ ಕರುಣಿಸಪ್ಪ!" ಎಂದು ನಿಟ್ಟುಸಿರುಬಿಟ್ಟಳು.

ಅವಳು ಹಾಗೆ ಪ್ರಾರ್ಥನೆ ಮಾಡಿದ್ದರಿಂದಲೋ ಏನೋ ಅವಳ ಇಷ್ಟ ನೆರವೇರಿಯೇ ಬಿಟ್ಟಿತು. ಒಂದು ವರ್ಷದ ಅನಂತರ ಅವಳು ಒಬ್ಬ ಮಗನನ್ನು ಹೆತ್ತಳು. ಮಗು ಆರೋಗ್ಯವಾಗಿ ಬಲಶಾಲಿಯಾಗಿತ್ತು.

ಆದರೆ ಅದರ ಗಾತ್ರ ಒಂದು ಹೆಬ್ಬೆರಳಿನಷ್ಟು ಮಾತ್ರ! ಆದರೇನು? ತಂದೆತಾಯಿಗಳಿಬ್ಬರೂ ಅಪರೂಪಕ್ಕೆ ಹುಟ್ಟಿದ ಮಗುವೆಂದು ಅದನ್ನು ಅತಿಶಯವಾಗಿ ಮುದ್ದಿಸಿ ಸಾಕಿದರು. ಅದಕ್ಕೆ "ಹೆಬ್ಬೆರಳು ತಿಮ್ಮ" ಎಂದೇ ಹೆಸರಾಯಿತು.

ಹೆಬ್ಬೆರಳು ತಿಮ್ಮನಿಗೆ ತಿಂಡಿತೀರ್ಥಕ್ಕೆ ಏನೂ ಕಡಿಮೆಯಾಗಿರಲಿಲ್ಲ. ಎಷ್ಟು ತಿಂದರೂ ಅವನು ಮಾತ್ರ ಬೆಳೆಯಲೇ ಇಲ್ಲ. ಹುಟ್ಟಿದಾಗ ಎಷ್ಟುದ್ದ ಇದ್ದನೋ ಹುಡುಗನಾದಾಗ ಅಷ್ಟೇ ಉದ್ದ ಇದ್ದ. ಆದರೂ ಅವನ ಕಣ್ಣುಗಳು ಚೂಟಿಯಾಗಿ ಹೊಳೆಯುತ್ತಿದ್ದವು. ಅವನ ಬುದ್ಧಿ ಅಸಾಧಾರಣವಾಗಿತ್ತು.

ಒಂದು ದಿನ ತಿಮ್ಮನ ತಂದೆ ಕಟ್ಟಿಗೆ ಕಡಿದು ತರಲು ಕಾಡಿಗೆ ಹೊರಟ. ಆಗಲೇ ಬಿಸಿಲು ಬಹಳವಾಗಿತ್ತು. ಅವನು "ನಾನು ಬೇಗ ಹೋಗಿ ಕಟ್ಟಿಗೆ ಕಡಿದು ಹಾಕುವುದರೊಳಗೆ ಗಾಡಿಯನ್ನು ಕಾಡಿಗೆ ಹೊಡೆದು ಕೊಂಡು ಬರುವವರು ಯಾರಾದರೂ ಇದ್ದಿದ್ದರೆ ಚೆನ್ನಾಗಿತ್ತು. ನನ್ನ ಸಹಾಯಕ್ಕೆ ಯಾರೂ ಇಲ್ಲ. ಎಲ್ಲಾ ಕೆಲಸವನ್ನೂ ನಾನೇ ಮಾಡಬೇಕು! ಮಧ್ಯಾಹ್ನವಾಗಿಹೋಯಿತು?" ಎಂದು ಬೇಸರದಿಂದ ಗೊಣಗಿದ.

ಇದನ್ನು ಕೇಳಿ ಹೆಬ್ಬೆರಳು ತಿಮ್ಮ "ಅಪ್ಪ, ನಿನಗೇಕೆ ಅಷ್ಟು ಯೋಚನೆ? ನೀನು ಹೋಗು. ನೀನು ಕಟ್ಟಿಗೆ ಕಡಿದು ಮುಗಿಸುವಷ್ಟರಲ್ಲಿ ಗಾಡಿ ಕಾಡಿನಲ್ಲಿದ್ದರೆ ಆಯಿತೋ ಇಲ್ಲವೋ? ಆ ಕೆಲಸ ನಾನು ನೋಡಿ ಕೊಳ್ಳುತ್ತೇನೆ" ಎಂದ.

ಮಗನ ಮಾತಿನಿಂದ ತಂದೆಗೆ ತಡೆಯುವುದಕ್ಕೆ ಆಗದಷ್ಟು ನಗು ಬಂತು. ಅವನು "ಅದು ಹೇಗಯ್ಯಾ ಆದೀತು? ನೀನಿರುವುದು ನೋಡಿ ದರೆ ಎತ್ತಿನ ಕೊರಳಿನ ಹಗ್ಗದಷ್ಟು ಕೂಡ ದಪ್ಪವಾಗಿಲ್ಲ. ನೀನು ಗಾಡಿ ಹೊಡೆಯುವುದು ಸಾಧ್ಯವೆ? ಹುಚ್ಚ! ಹುಚ್ಚ!" ಎಂದು ಲೇವಡಿ ಮಾಡಿದ.

ತಿಮ್ಮ "ಏನೂ ಚಿಂತೆಯಿಲ್ಲವಪ್ಪ. ಅಮ್ಮ ಎತ್ತನ್ನು ಗಾಡಿಗೆ ಹೂಡಿಕೊಟ್ಟರೆ ಸಾಕು. ನಾನು ಅದರ ಕಿವಿಯಲ್ಲಿ ಕುಳಿತು ಅದು ಯಾವ

ಕಡೆಗೆ ಹೋಗಬೇಕು, ಏನು ಮಾಡಬೇಕು ಎಂದು ಅದಕ್ಕೆ ತಿಳಿಸುತ್ತೇನೆ" ಎಂದ.

ಅವನ ತಂದೆ "ಹಾಗೇ ಆಗಲಿ. ಏನು ಮಾಡುತ್ತೀಯೋ ನೋಡೋಣ"—ಎಂದು ಹೇಳಿ ಹೊರಟುಹೋದ.

ಸ್ವಲ್ಪ ಹೊತ್ತಾದ ಮೇಲೆ ತಿಮ್ಮನ ತಾಯಿ ಎತ್ತನ್ನು ಗಾಡಿಯ ನೊಗಕ್ಕೆ ಕಟ್ಟಿ, ತಿಮ್ಮನನ್ನು ಅದರ ಕಿವಿಯಲ್ಲಿ ಕೂಡಿಸಿದಳು. ಅವನು ಅಲ್ಲಿ ಕುಳಿತುಕೊಂಡು, ಎತ್ತಿಗೆ "ಆಕಡೆ ಹೋಗು," "ಈಕಡೆ ತಿರುಗು," "ನಿಲ್ಲು" "ನಡೆ" ಎಂದು ಸಮಯಾನುಸಾರ ಹೇಳುತ್ತಿದ್ದ. ಗಾಡಿ ಸರಾಗವಾಗಿ ಮುಂದುವರಿಯಿತು.

ಒಂದು ಸಾರಿ ಎತ್ತು ಬಹಳ ವೇಗವಾಗಿ ಕಾಲಿಟ್ಟಿತು. ಆಗ ತಿಮ್ಮ "ಮೆಲ್ಲಗೆ! ಮೆಲ್ಲಗೆ!" ಎಂದು ಕೂಗಿದ.

ಅಷ್ಟುಹೊತ್ತಿಗೆ ಸರಿಯಾಗಿ ಯಾರೋ ಇಬ್ಬರು ದಾರಿಯಲ್ಲಿ ಹೋಗುತ್ತಿದ್ದರು. ಅವರಲ್ಲೊಬ್ಬ ತನ್ನ ಜೊತೆಗಾರನನ್ನು ತಡೆದು, "ಎಂಥ ವೈಚಿತ್ರ್ಯ! ಗಾಡಿ ಮುಂದಕ್ಕೆ ಹೋಗುತ್ತಿದೆ; ಗಾಡಿ ಹೊಡೆಯುವವನು ಎತ್ತಿನೊಡನೆ ಮಾತಾಡುತ್ತಿದ್ದಾನೆ; ಆದರೆ ಅವನೇ ಕಾಣುತ್ತಿಲ್ಲವಲ್ಲಾ!" ಎಂದ.

ಇನ್ನೊಬ್ಬ "ಹೌದಯ್ಯಾ? ಇದರಲ್ಲೇನೋ ತಮಾಷೆ ಇದೆ! ಗಾಡಿಯ ಹಿಂದೆಯೇ ಹೋಗಿ ನೋಡೋಣ ಬಾ" ಎಂದ.

ಇಬ್ಬರೂ ಅದನ್ನು ಹಿಂಬಾಲಿಸಿ, ಕಾಡಿನಲ್ಲಿ ಕಟ್ಟಿಗೆಯವನಿದ್ದ ಸ್ಥಳಕ್ಕೆ ಬಂದರು.

ತಿಮ್ಮ ತಂದೆಯನ್ನು ನೋಡಿ "ಅಪ್ಪ, ಇಲ್ಲಿ ನೋಡು! ನಾನು ಹೇಳಿದಂತೆಯೇ ಗಾಡಿ ತಂದಿದ್ದೇನೆ. ಸ್ವಲ್ಪವೂ ಕಷ್ಟವಾಗಲಿಲ್ಲ! ಸ್ವಲ್ಪವೂ ಕಷ್ಟವಾಗಲಿಲ್ಲ! ಬಾ, ನನ್ನನ್ನು ಕೆಳಗಿಳಿಸು!" ಎಂದು ಕೂಗಿದ.

ಕಟ್ಟಿಗೆಯವನು ಒಂದು ಕೈಯಿಂದ ಎತ್ತನ್ನು ಹಿಡಿದುಕೊಂಡು, ಇನ್ನೊಂದರಿಂದ ಎತ್ತಿನ ಕಿವಿಯಲ್ಲಿದ್ದ ತಿಮ್ಮನನ್ನು ಈಚೆಗೆ ತೆಗೆದು ಎತ್ತಿ ತಾನು ಕಡಿದು ಹಾಕಿದ್ದ ಒಂದು ಮರದ ತುಂಡಿನ ಮೇಲೆ ಕೂಡಿಸಿದ. ತಿಮ್ಮ ಸಂತೋಷದಿಂದ ಹಲ್ಲುಕಿರಿದ.

ಗಾಡಿಯ ಹಿಂದೆ ಬಂದಿದ್ದ ದಾರಿಗರು ಇದನ್ನೆಲ್ಲಾ ನೋಡಿದರು. ಅವರಿಗೆ ಆಶ್ಚರ್ಯದಿಂದ ಮಾತೇ ಹೊರಡದಾಯಿತು. ಕಡೆಗೆ ಅವರಲ್ಲೊಬ್ಬ ಇನ್ನೊಬ್ಬನನ್ನು ಒಂದು ಮಗ್ಗುಲಿಗೆ ಕರೆದು, "ನಾವು ಆ ಮೋಟನನ್ನು ಊರಿಂದೂರಿಗೆ ತೆಗೆದುಕೊಂಡು ಹೋಗಿ ಜನಗಳಿಗೆ ತೋರಿಸಿದರೆ ಬೇಕಾದಷ್ಟು ದುಡ್ಡು ಸಂಪಾದಿಸಬಹುದು. ಏನಾದರೂ ಮಾಡಿ ಅವನನ್ನು ಕೊಂಡುಕೊಳ್ಳಲೇಬೇಕು" ಎಂದು ಕಿವಿಯಲ್ಲಿ ಹೇಳಿದ.

ಅವರಿಬ್ಬರೂ ಕಟ್ಟಿಗೆಯವನ ಹತ್ತಿರಕ್ಕೆ ಬಂದು "ನಾವು ಆ ಚುಟಿಕನನ್ನು ಕೊಂಡುಕೊಳ್ಳುತ್ತೇವೆ, ಎಷ್ಟು ಬೆಲೆ ಕೊಡಬೇಕು?" ಎಂದರು.

ಕಟ್ಟಿಗೆಯವನು "ಛೆ! ಎಲ್ಲಾದರೂ ಉಂಟೆ? ಎಂಥ ಮಾತಾಡುತ್ತೀರಿ? ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ನಾನೇ ಮಾರುವುದೆ?" ಎಂದು ರೇಗಿದ.

ತಿಮ್ಮ ಮೆಲ್ಲನೆ ತಂದೆಯ ಬಳಿಗೆ ಬಂದು, ಅವನ ಅಂಗಿಯನ್ನು ಹಿಡಿದುಕೊಂಡು ಭುಜದ ಮೇಲಕ್ಕೆ ಹತ್ತಿ, "ಅಪ್ಪ, ದುಡ್ಡು ತೆಗೆದುಕೊಂಡು ಅವರಿಗೆ ನನ್ನನ್ನು ಮಾರಲು ಒಪ್ಪಿಕೊ. ಹೆದರಬೇಡ. ನಾನು ಮತ್ತೆ ನಿನ್ನ ಹತ್ತಿರಕ್ಕೆ ಬಂದುಬಿಡುತ್ತೇನೆ!" ಎಂದು ಪಿಸುಮಾತಿನಲ್ಲಿ ಹೇಳಿದ.

ನೂರು ರೂಪಾಯಿ ಕೊಡುವುದಾದರೆ ಅದಕ್ಕೆ ಪ್ರತಿಯಾಗಿ ತಿಮ್ಮನನ್ನು ಮಾರುವುದಾಗಿ ಕಟ್ಟಿಗೆಯವನು ಆ ಪ್ರಯಾಣಿಕರಿಗೆ ತಿಳಿಸಿದ. ಅವರು ಅಷ್ಟನ್ನೂ ಕೊಟ್ಟು ಅವನನ್ನು ಕೊಂಡುಕೊಂಡರು.

ಅವರಲ್ಲಿ ಒಬ್ಬ ತಿಮ್ಮನನ್ನು ಕುರಿತು "ನಿನ್ನನ್ನು ಎಲ್ಲಿ ಕೂಡಿಸಿಕೊಂಡು ಹೋಗೋಣ?" ಎಂದು ಕೇಳಿದ.

ತಿಮ್ಮ "ನಿನ್ನ ರುಮಾಲಿನ ಮೇಲೆ ಕೂಡಿಸಿಕೊ. ಅಲ್ಲಾದರೆ ನನಗೆ ಓಡಾಡುವುದಕ್ಕೆ ವಿಶಾಲವಾದ ಸ್ಥಳವಿದೆ. ಅಲ್ಲಿದ್ದರೆ ದಾರಿಯಲ್ಲಿ ಹೋಗುವಾಗ ಸುತ್ತಮುತ್ತ ಇರುವುದನ್ನೆಲ್ಲಾ ಸುಲಭವಾಗಿ ನೋಡಬಹುದು" ಎಂದ.

ಅವರು ಅವನ ಇಷ್ಟವನ್ನು ನೆರವೇರಿಸಿದರು. ತಿಮ್ಮ ತಂದೆಗೆ ನಮಸ್ಕಾರ ಮಾಡಿ ಹೊರಟ.

ಸಾಯಂಕಾಲವಾದಾಗ ತಿಮ್ಮ ತನ್ನನ್ನು ಹೊತ್ತುಕೊಂಡಿದ್ದವನನ್ನು ಕೂಗಿ, "ನನ್ನನ್ನು ಕೆಳಗಿಳಿಸು. ಇಲ್ಲಿ ಕೂತು ಸಾಕಾಯಿತು" ಎಂದ. ಅವನು ತಿಮ್ಮನನ್ನು ಕೆಳಕ್ಕಿಳಿಸಿ ರಸ್ತೆಯ ಪಕ್ಕದ ಹೊಲದಲ್ಲಿದ್ದ ಒಂದು ಮಣ್ಣಿನ ಹೆಂಟೆಯ ಮೇಲೆ ಬಿಟ್ಟ.

ಹಗಲಿನ ಬೆಳಕು ಆಗಲೇ ಮಬ್ಬಾಗಿತ್ತು. ಇದೇ ಸಮಯವೆಂದು ತಿಮ್ಮ ಹೆಂಟೆಗಳ ನಡುವೆ ಮೆತ್ತಗೆ ಅತ್ತಿಂದಿತ್ತ, ಸುಳಿದಾಡಿ, ಅಲ್ಲಿದ್ದ ಒಂದು ಇಲಿಯ ಬಿಲದಲ್ಲಿ ಸೇರಿಕೊಂಡು, "ಹೋಗಿಬನ್ನಿರಪ್ಪ, ಯಜಮಾನರೆ! ನಮಸ್ಕಾರ! ಇನ್ನೊಂದು ಸಾರಿ ನನ್ನ ವಿಚಾರದಲ್ಲಿ ಹೆಚ್ಚು ಎಚ್ಚರಿಕೆಯಿಂದಿರಿ!" ಎಂದ.

ಪಾಪ! ಅವರಿಬ್ಬರೂ ಆವನ ಧ್ವನಿ ಕೇಳಿಸಿದ ಕಡೆಗೆ ಓಡಿ, ತಮ್ಮ ಕೈಲಿದ್ದ ಕೋಲುಗಳಿಂದ ನೆಲವನ್ನು ಅಲ್ಲಲ್ಲಿ ಚುಚ್ಚಿ ತಡಕಾಡಿದರು. ಏನೂ ಪ್ರಯೋಜನವಾಗಲಿಲ್ಲ. ಅಷ್ಟು ಹೊತ್ತಿಗೆ ಪೂರ್ತಿ ಕತ್ತಲಾಯಿತು. ಅವರು ತಿಮ್ಮನನ್ನು ಅಲ್ಲೇ ಬಿಟ್ಟು ಬೆಪ್ಪುಮೋರೆ ಹಾಕಿಕೊಂಡು ಮುಂದಕ್ಕೆ ಹೋಗಬೇಕಾಯಿತು.

ಅವರು ಹೊರಟುಹೋದ ಸದ್ದು ಕೇಳಿ ತಿಮ್ಮ ಬಿಲದಿಂದ ಹೊರಕ್ಕೆ ಬಂದ. ಕಷ್ಟಪಟ್ಟು ಮತ್ತೆ ಆವನು ಒಂದು ಹೆಂಟೆಯ ತುದಿಯನ್ನು ಏರಿ ನಿಂತು, "ಇಲ್ಲಿರುವುದು ಬಹಳ ಅಪಾಯಕರವಾದ ಕೆಲಸ. ಈ ಹೆಂಟೆಗಳ ಮೇಲಿನಿಂದ ಎಲ್ಲಾದರೂ ಬಿದ್ದರೆ ನನ್ನ ಬುರುಡೆ ಒಡೆದುಹೋಗುತ್ತದೆ. ಜೊತೆಗೆ ಕತ್ತಲು ಬೇರೆ. ಎಚ್ಚರಿಕೆಯಿಂದಿರಬೇಕು. ಕಾಲು ಜಾರಿದರೆ ಕೈಲಾಸವೇ ಗತಿ!" ಎಂದು ಯೋಚಿಸಿ, ಕೆಳಗಿಳಿದು ಮೆಲ್ಲಗೆ ತಡಕಾಡಿದ. ಆವನ ಅದೃಷ್ಟಕ್ಕೆ ಅಲ್ಲೊಂದು ಬಸವನ ಹುಳುವಿನ ಮೈಮೇಲಿನ ಶಂಖದಂಥ ಚಿಪ್ಪು ಸಿಕ್ಕಿತು. "ಸದ್ಯ ಬದುಕಿದೆ! ರಾತ್ರಿಯೆಲ್ಲಾ ಇದರಲ್ಲಿ ನಿದ್ದೆ ಮಾಡಬಹುದು" ಎಂದು ಸಂತೋಷಪಟ್ಟು ತಿಮ್ಮ ಅದರ ಒಳಕ್ಕೆ ಹೋಗಿ ಮಲಗಿದ.

ಇನ್ನೇನು, ಅವನಿಗೆ ನಿದ್ದೆ ಬರುವುದರಲ್ಲಿತ್ತು. ಆಗ ಇಬ್ಬರು ಕಳ್ಳರು ಆ ಕಡೆ ಬಂದರು. ಅವರಲ್ಲಿ ಒಬ್ಬ "ಆ ಗೌಡನ ಮನೆಯಲ್ಲಿ ಪೆಟ್ಟಿಗೆಯ ತುಂಬಾ ದುಡ್ಡಿದೆ ಎಂದು ಹೇಳುತ್ತಾರೆ. ಈ ದಿವಸ ಏನಾದರೂ ಮಾಡಿ ಅದನ್ನೆಲ್ಲಾ ಹಾರಿಸಲೇ ಬೇಕು. ಆದರೆ ಅವನ ಮನೆಯ ಒಳಕ್ಕೆ ಹೋಗುವುದು ಹೇಗೆ ಎನ್ನುವುದೇ ಈಗಿರುವ ಪ್ರಶ್ನೆ!" ಎನ್ನುತ್ತಿದ್ದ.

ಈ ಮಾತು ತಿಮ್ಮನ ಕಿವಿಗೆ ಬಿತ್ತು. ಕೂಡಲೆ ಅವನು "ನಾನು ಸಹಾಯ ಮಾಡುತ್ತೇನೆ!" ಎಂದು ಕೂಗಿದ.

ಕಳ್ಳರು "ಯಾರೋ ಮಾತಾಡಿದ ಹಾಗಾಯಿತು!" ಎಂದು ಬೆದರಿ, ಸುತ್ತಲೂ ಕತ್ತಲಿನಲ್ಲಿ ನೋಡಿದರು. ಅವರ ಕಿವಿ ನೆಟ್ಟಗಾದವು.

ತಿಮ್ಮ ಇನ್ನೊಂದು ಸಾರಿ "ನನ್ನನ್ನು ನಿಮ್ಮ ಜೊತೆಯಲ್ಲಿ ಕರೆದು ಕೊಂಡು ಹೋಗಿ—ಆ ಗೌಡನ ದುಡ್ಡನ್ನೆಲ್ಲಾ ದೋಚಿಕೊಳ್ಳುವುದಕ್ಕೆ ದಾರಿ ತೋರಿಸುತ್ತೇನೆ" ಎಂದ.

ಅವರು "ಅದಿರಲಯ್ಯಾ! ನೀನೆಲ್ಲಿದ್ದೀಯಾ? ಮೊದಲು ಹೇಳು?" ಎಂದರು.

ತಿಮ್ಮ "ಇಲ್ಲಿದ್ದೇನೆ! ಧ್ವನಿ ಕೇಳಿಬರುವ ದಿಕ್ಕಿನಲ್ಲಿ ಕೈಚಾಚಿ ಸಿಕ್ಕುತ್ತೇನೆ" ಎಂದ.

ಕಡೆಗೆ ಅವರು ಅವನು ಇದ್ದ ಸ್ಥಳವನ್ನು ಕಂಡು ಹಿಡಿದರು. ಒಬ್ಬ ಅವನನ್ನು ತನ್ನ ಅಂಗೈಯಲ್ಲಿ ಎತ್ತಿ ನಿಲ್ಲಿಸಿಕೊಂಡು, "ನೀನೇನಯ್ಯಾ ಸಹಾಯ ಮಾಡುವುದು ನಮಗೆ, ನಿನಗೇ ಇನ್ನೊಬ್ಬರ ಸಹಾಯ ಬೇಕಾ ಗಿರುವಾಗ?" ಎಂದ.

ತಿಮ್ಮ "ಏಕೆ? ಕಿಟಕಿಯ ಕಂಬಿಗಳ ನಡುವೆ ತೂರಿಕೊಂಡು ಒಳಕ್ಕೆ ಹೋಗಿ, ನಿಮಗೆ ಬೇಕಾದುದನ್ನೆಲ್ಲಾ ಈಚೆಗೆ ಎಸೆಯುತ್ತೇನೆ. ಸಾಲದೆ ಅಷ್ಟು ಸಹಾಯ?" ಎಂದ.

ಅವರು "ಹೌದು! ಅದೂ ಒಳ್ಳೆಯ ಯೋಚನೆಯೆ! ಬಾ, ಹಾಗಾದರೆ" ಎಂದು, ಅವನನ್ನು ಹೆಗಲಮೇಲೆ ಕೂಡಿಸಿಕೊಂಡು ಹೊರಟರು.

ಅವರು ಗೌಡನ ಮನೆಗೆ ಬಂದೊಡನೆ, ತಿಮ್ಮ ಕಿಟಕಿಯ ಕಂಬಿಗಳ ಮಧ್ಯೆ ನುಗ್ಗಿ, ಗೌಡನ ದುಡ್ಡಿನ ಪೆಟ್ಟಿಗೆ ಇದ್ದ ಕೋಣೆಯನ್ನು ಹೊಕ್ಕ. ಒಳಗೆ ಕತ್ತಲಲ್ಲಿ ನಿಂತುಕೊಂಡು ಅವನು "ಇಲ್ಲಿರುವುದನ್ನೆಲ್ಲಾ ಹೊರಕ್ಕೆ ಎಸೆಯಬೇಕೆ? ಏನೂ ಬಿಡಕೂಡದೆ?" ಎಂದು ಗಟ್ಟಿಯಾಗಿ ಕೂಗಿದ.

ಕಳ್ಳರಿಗೆ ಎದೆ ಬಡಿದುಕೊಳ್ಳಲು ಆರಂಭಿಸಿತು. ಅವರು "ಮೆಲ್ಲಗೆ ಮಾತಾಡು, ಮಹರಾಯ! ಯಾರಾದರೂ ಎದ್ದುಬಿಟ್ಟಾರು!" ಎಂದು ಬೇಡಿದರು.

ತಿಮ್ಮ ಇನ್ನೊಮ್ಮೆ ಒಳಗಿನಿಂದ "ಏನಿರಯ್ಯಾ? ಇಲ್ಲಿರುವುದನ್ನೆಲ್ಲಾ ಹೊರಕ್ಕೆ ಎಸೆದುಬಿಡಲೋ ಹೇಗೆ? ಉತ್ತರ ಹೇಳುವುದಕ್ಕೇನು ನಿಮಗೆ? ಬಾಯಲ್ಲಿ ಏನು ಸೇರಿಕೊಂಡಿದೆಯೊ ಕಾಣೆ!" ಎಂದು ಮೊದಲಿಗಿಂತಲೂ ಜೋರಾಗಿ ಕೂಗಿದ.

ಇದರಿಂದ ಗೌಡನ ಹೆಂಡತಿಗೆ ಎಚ್ಚರವಾಯಿತು. ಅವಳು ಹಾಸಿಗೆಯಲ್ಲಿ ಎದ್ದು ಕುಳಿತಳು. ಕಳ್ಳರು ಹೆದರಿಕೆಯಿಂದ ಹತ್ತು ಹೆಜ್ಜೆ ಹಿಂದಕ್ಕೆ ಓಡಿದರು.

ಒಂದೆರಡು ನಿಮಿಷ ಸುಮ್ಮನಿದ್ದು ಮತ್ತೆ ಅವರು "ಈ ಮೋಟ ಬಹಳ ತುಂಟನ ಹಾಗೆ ಕಾಣುತ್ತಾನೆ. ನಮಗೆ ಬೆಪ್ಪು ಹಿಡಿಸಿ ಆಮೇಲೆ ಹಾಸ್ಯ ಮಾಡಿ ನಗಬೇಕೆಂಬ ಉದ್ದೇಶದಿಂದ ಹೀಗೆಲ್ಲಾ ಆಡುತ್ತಿರಬೇಕು. ಇನ್ನೊಂದು ಸಾರಿ ನೋಡೋಣ" ಎಂದು ಯೋಚಿಸಿ ಇಬ್ಬರೂ ಹಿಂತಿರುಗಿ ಬಂದು ಕಿಟಕಿಯ ಪಕ್ಕದಲ್ಲಿ ನಿಂತು ಸಣ್ಣ ಧ್ವನಿಯಲ್ಲಿ "ಅಯ್ಯಾ, ಪುಣ್ಯಾತ್ಮ, ನಿನ್ನ ಚೇಷ್ಟೆ ಸಾಕು. ಇನ್ನಾದರೂ ಪೆಟ್ಟಿಗೆಯಲ್ಲಿರುವ ದುಡ್ಡನ್ನೆಲ್ಲಾ ತೆಗೆದು ನಮ್ಮ ಕೈಯಲ್ಲಿಡು" ಎಂದು ಗೋಗರೆದು ಕೇಳಿಕೊಂಡರು.

ತಿಮ್ಮ "ಹಾಗಾದರೆ ಹಿಡಿಯಿರಿ! ಇಗೋ ಎಸೆದೆ!" ಎಂದು ತನ್ನ ಕಂಠ ಇದ್ದಷ್ಟೂ ಗಟ್ಟಿಯಾಗಿ ಕೂಗಿಕೊಂಡ.

ಇದನ್ನು ಕೇಳಿ ಗೌಡನ ಹೆಂಡತಿ ಬಾಗಿಲು ತೆರೆಯಬೇಕೆಂದು ಹಾಸಿಗೆಯಿಂದ ಧಿಗ್ಗನೆ ಎದ್ದು ಹಾರಿದಳು. ಹುಲಿ ಅಟ್ಟಿಸಿಕೊಂಡು

ಬಂದರೆ ಓಡುವವರ ಹಾಗೆ ಕಳ್ಳರು ಕಾಲುಕಿತ್ತರು. ಗೌಡನ ಹೆಂಡತಿ ಕತ್ತಲಲ್ಲಿ ತಡಕಾಡಿದಳು. ಏನೂ ಸಿಕ್ಕದಿರಲು ದೀಪ ತರುವುದಕ್ಕೆಂದು ಹೋದಳು. ಅವಳು ಹಿಂದಿರುಗಿ ಬರುವ ಹೊತ್ತಿಗೆ ತಿಮ್ಮ ಕಿಟಕಿಯಿಂದ ನುಸುಳಿಕೊಂಡು ಓಡಿಹೋಗಿ, ಮನೆಯ ಮಗ್ಗುಲಲ್ಲಿದ್ದ ದನದ ಕೊಟ್ಟಿಗೆ ಸೇರಿ, ಅಲ್ಲೊಂದು ಒಣಹುಲ್ಲಿನ ರಾಸಿಯ ಮೇಲೆ ಬೆಚ್ಚಗೆ ಮುದುರಿ ಕೊಂಡ. ದೀಪ ತಂದು ನೋಡಿದಾಗ ಕೋಣೆಯಲ್ಲಿ ಯಾರೂ ಕಾಣದಿರಲು, ಗೌಡನ ಹೆಂಡತಿ "ನನಗೆಲ್ಲೋ ಕನಸಾಗಿರಬೇಕು!" ಎಂದುಕೊಂಡು ಮತ್ತೆ ಮಲಗಿ ನಿದ್ದೆಹೋದಳು.

ಕೊಟ್ಟಿಗೆಯ ಮೂಲೆಯಲ್ಲಿ ಹುಲ್ಲಿನ ರಾಸಿಯ ಮೇಲೆ ಮಲಗಿದ್ದ ತಿಮ್ಮ ರಾತ್ರಿಯೆಲ್ಲಾ ಚೆನ್ನಾಗಿ ನಿದ್ರಿಸಿದ. ಬೆಳಗಾದ ಕೂಡಲೆ ಎದ್ದು ತನ್ನ ತಂದೆತಾಯಿಗಳಿದ್ದ ಸ್ಥಳಕ್ಕೆ ಹೋಗಿಬಿಡಬೇಕೆಂದು ಅವನು ನಿರ್ಧರಿಸಿದ್ದ.

ಪಾಪ! ಅವನ ಅಭಿಲಾಷೆಯೆಲ್ಲಾ ಮಣ್ಣುಪಾಲಾಯಿತು. ಬೆಳಗ್ಗೆ ಗೌಡನ ಹೆಂಡತಿ ಹಾಲು ಕರೆಯುವ ಮೊದಲು ಕೊಟ್ಟಿಗೆಯಲ್ಲಿದ್ದ ದನಗಳಿಗೆಲ್ಲಾ ಹುಲ್ಲು ಹಾಕಲು ಬಂದಳು. ದುರದೃಷ್ಟದಿಂದ ಅವಳು ಕೈಗೆ ತೆಗೆದುಕೊಂಡ ಹುಲ್ಲಿನ ತೆಕ್ಕೆಯಲ್ಲಿ ತಿಮ್ಮ ಮಲಗಿ ನಿದ್ರಿಸುತ್ತಿದ್ದ. ಅವನಿಗೆ ಎಚ್ಚರವಾದಾಗ ಅವನಿದ್ದುದು ಒಂದು ಎಮ್ಮೆಯ ದವಡೆಯಲ್ಲಿ!

ಹುಲ್ಲು ಮೇಯುತ್ತಿದ್ದ ಎಮ್ಮೆ ಹುಲ್ಲಿನ ಜೊತೆಯಲ್ಲಿ ತಿಮ್ಮನನ್ನೂ ಬಾಯಿಗೆ ಸೇರಿಸಿಕೊಂಡಿತ್ತು. ಅದರ ಬಾಯಿ ಒಳ್ಳೆಯ ಬೀಸುವ ಕಲ್ಲಿನ ಹಾಗೆ ಕೆಲಸಮಾಡುತ್ತಿತ್ತು. "ಎಲ ಎಲಾ! ಇಲ್ಲಿಗೆ ಹೇಗೆ ಬಂದೆ ನಾನು?" ಎಂದು ಯೋಚಿಸುತ್ತ ತಿಮ್ಮ ಬಹಳ ಪ್ರಯತ್ನಪಟ್ಟು ಎಮ್ಮೆಯ ಹಲ್ಲುಗಳ ಮಧ್ಯೆ ತಾನು ಸಿಕ್ಕಿಬೀಳದಂತೆ ನೋಡಿಕೊಂಡ. ಅವನಿಗೆ ಅದೇ ಒಂದು ದೊಡ್ಡ ಸಾಹಸದ ಕೆಲಸವಾಯಿತು. ಕೊನೆಗೆ ಎಮ್ಮೆಯ ಹೊಟ್ಟೆಗೆ ಬಂದ. ಅಲ್ಲಿ ಅವನಿಗೆ ಏನೂ ಕಾಣಿಸಲಿಲ್ಲ. "ಇದೇನು, ಇಷ್ಟು ಕತ್ತಲಾಗಿದೆ ಈ ಕೋಣೆಯಲ್ಲಿ? ಇದನ್ನು ಕಟ್ಟಿದವರಿಗೆ ಕಿಟಕಿಗಳಿಡಬೇಕು ಎನ್ನುವಷ್ಟು ಬುದ್ಧಿ ತೋಚಲಿಲ್ಲವೇನೋ!" ಎಂದುಕೊಂಡ.

ಹಾಗೂ ಹೀಗೂ ಮಾಡಿ ತಿಮ್ಮ ಎಮ್ಮೆಯ ಹೊಟ್ಟೆಯಲ್ಲಿ ಒಂದು ಕಡೆ ಕುಳಿತುಕೊಂಡ. ಅದರ ಬಾಯಲ್ಲಿ ಮೇಲಕ್ಕೂ ಕೆಳಕ್ಕೂ ಹಿಂದಕ್ಕೂ ಮುಂದಕ್ಕೂ ಎದ್ದು ಬಿದ್ದು ನೂಕು ನುಗ್ಗಲಾಗಿ ಅವನಿಗೆ ಆಯಾಸವಾಗಿ ಹೋಗಿತ್ತು. ಆದ್ದರಿಂದ ವಿಶ್ರಾಂತಿ ಅಗತ್ಯವಾಗಿ ಬೇಕಾಗಿತ್ತು. ಆದರೆ ಎಮ್ಮೆಯ ಹೊಟ್ಟೆಯಲ್ಲಿ ಇದಕ್ಕೂ ಆಸ್ಪದವಿರಲಿಲ್ಲ. ಏಕೆಂದರೆ ಮೇಲಿಂದ ಮೇಲೆ ಹುಲ್ಲು ಹೊಟ್ಟೆಯೊಳಕ್ಕೆ ಬರುತ್ತಲೇ ಇತ್ತು.

ಇಷ್ಟು ಹೊತ್ತಿಗೆ ಗೌಡನ ಹೆಂಡತಿ ಹಾಲು ಹಿಂಡಲು ಬಂದು, ಎಮ್ಮೆ ಕುಡಿಯಲಿ ಎಂದು ಒಂದು ದೊಡ್ಡ ಬೋಗುಣಿಯ ತುಂಬಾ ಕಲಗಚ್ಚನ್ನು ತಂದು ಅದರ ಮುಂದಿಟ್ಟಳು. ಹುಲ್ಲಿನ ಜೊತೆಯಲ್ಲಿ ಅದೂ ಹೊಟ್ಟೆಗೆ ಹರಿಯಿತು. ತಿಮ್ಮನಿಗೆ ಈ ಪ್ರವಾಹವನ್ನು ತಡೆಯುವುದು ಅಸಾಧ್ಯವಾಯಿತು. ಅವನು "ಸಾಕಪ್ಪಾ, ಸಾಕು! ಇನ್ನು ಹುಲ್ಲೂ ಬೇಡ! ನೀರೂ ಬೇಡ! ಸಾಕು! ಖಂಡಿತ ಸಾಕು!" ಎಂದು ಗಟ್ಟಿಯಾಗಿ ಕೂಗಿದ.

ಹಾಲು ಕರೆಯುತ್ತಿದ್ದ ಗೌಡನ ಹೆಂಡತಿಗೆ ದಿಗ್ಭ್ರಮೆ ಹಿಡಿಯಿತು. ಯಾರೋ ಮಾತಾಡುತ್ತಿದ್ದರು, ಆದರೆ ನೋಡುವುದಕ್ಕೆ ಮಾತ್ರ ಕೊಟ್ಟಿಗೆ ಯಲ್ಲಿ ಯಾರೂ ಇರಲಿಲ್ಲ! ಅಥವಲ್ಲದೆ ಆ ಧ್ವನಿ ಬೇರೆ ತಾನು ಹಿಂದಿನ ರಾತ್ರಿ ಕೇಳಿದ್ದ ಧ್ವನಿಯೇ ಆಗಿತ್ತು! ಗಾಬರಿಯಿಂದ ಅವಳ ಕೈಗಳು ತರತರ ನಡುಗಿದವು; ಕಾಲುಗಳು ಅದುರಿದವು. ಅವಳು ಹಾಲಿನ ತಂಬಿಗೆಯನ್ನು ಎತ್ತಿಹಾಕಿ ಹಿಂದಕ್ಕೆ ಬಿದ್ದಳು. ಒಂದೆರಡು ಕ್ಷಣ ಆದಮೇಲೆ, ಅವಳು ಚೇತರಿಸಿಕೊಂಡು, ಮನೆಯೊಳಕ್ಕೆ ಹೋಗಿ, ಇನ್ನೂ ಗೊರಕೆ ಹೊಡೆಯು ತ್ತಿದ್ದ ಗಂಡನನ್ನು ಎಬ್ಬಿಸಿ, ಎದ್ದು ಬಾ! ಎದ್ದು ಬಾ! ಎಮ್ಮೆ ಮಾತಾಡು ತ್ತಿದೆ!" ಎಂದಳು. ಗೌಡ "ಹೆಣ್ಣೆ, ನಿನಗೆಲ್ಲೋ ಹುಚ್ಚು!" ಎಂದು ಗೊಣಗುತ್ತ, ಇಷ್ಟವಿಲ್ಲದಿದ್ದರೂ ಎದ್ದು ಅವಳೊಡನೆ ಕೊಟ್ಟಿಗೆಗೆ ಹೋದ.

ಅವರಿಬ್ಬರೂ ಕೊಟ್ಟಿಗೆಯ ಹೊಸಲಿಗೆ ಹೋಗುವ ಹೊತ್ತಿಗೆ ಸರಿಯಾಗಿ ತಿಮ್ಮ "ಸಾಕಪ್ಪಾ, ಸಾಕು! ಇನ್ನು ಹುಲ್ಲೂ ಬೇಡ! ನೀರೂ ಬೇಡ! ಸಾಕು! ಖಂಡಿತ ಸಾಕು!" ಎಂದು ಕೂಗಿದ. ಗೌಡನಿಗೆ

ಅವನ ಹೆಂಡತಿಗೆ ಆಗಿದ್ದುದಕ್ಕಿಂತಲೂ ಹೆಚ್ಚು ಹೆದರಿಕೆಯಾಯಿತು. "ಇದಕ್ಕೆ ಎಲ್ಲೋ ದೆವ್ವ ಹಿಡಿದಿದೆ!" ಎನ್ನುತ್ತ, ಅವನು ಒಂದು ದೊಣ್ಣೆಯನ್ನು ತೆಗೆದುಕೊಂಡು ಎಮ್ಮೆಯನ್ನು ಚೆನ್ನಾಗಿ ಹೊಡೆದು ಕೊಂದುಬಿಟ್ಟ.

ದೆವ್ವ ಹಿಡಿದ ಎಮ್ಮೆ ಎಂಬ ಅಪಖ್ಯಾತಿ ಹಬ್ಬಿದ್ದರಿಂದ ಅದರ ಮಾಂಸವನ್ನು ತಿನ್ನಲು ಕಟುಕ ಕೂಡ ಒಪ್ಪಲಿಲ್ಲ. ಮೋಚಿ ಅದರ ಚರ್ಮದ ತಂಟೆಗೇ ಬರಲಿಲ್ಲ. "ಪುಕ್ಕಟ್ಟೆ ಕೊಟ್ಟರೂ ಬೇಡ! ಇಂಥ ಎಮ್ಮೆಯ ಚರ್ಮದಿಂದ ಜೋಡು ಮಾಡಿದರೆ ಆ ಜೋಡುಗಳನ್ನು ಮೆಟ್ಟಿದವರಿಗೆಲ್ಲಾ ದೆವ್ವ ಹಿಡಿದೀತು! ನನ್ನ ಮನೆ ಹಾಳಾದೀತು!" ಎಂದು ಅವನು ಹಿಂದೆಗೆದ. ಆದುದರಿಂದ ಅದರ ದೇಹವನ್ನು ಹದ್ದು, ಕಾಗೆ, ನಾಯಿ, ನರಿ ತಿನ್ನುವುದೇ ಅದರಲ್ಲಿ ವಾಸವಾಗಿದ್ದ ದೆವ್ವಕ್ಕೆ ತಕ್ಕ ಶಿಕ್ಷೆಯೆಂದು ಆ ಊರಿನವರೆಲ್ಲಾ ತೀರ್ಮಾನಿಸಿದರು. ಅದೇ ಪ್ರಕಾರ ದೂರವಾಗಿ ಯಾರೂ ಓಡಾಡದಿದ್ದ ಕಡೆ ಒಂದು ಕಾಡಿನ ಕಣಿವೆಯಲ್ಲಿ ಅದನ್ನು ಎಸೆದರು.

ಮಧ್ಯಾಹ್ನದ ಹೊತ್ತಿಗೇ ನಾಯಿ ನರಿಗಳೂ ರಣಹದ್ದುಗಳೂ ಎಮ್ಮೆಯ ದೇಹವನ್ನು ಕುಕ್ಕಿ ಸುಲಿದು ಸ್ವಲ್ಪಸ್ವಲ್ಪವಾಗಿ ಮಾಂಸವನ್ನು ತಿನ್ನುತ್ತಾ ಬಂದವು. ತಿಮ್ಮ ತನ್ನ ಬುದ್ಧಿಯನ್ನೆಲ್ಲಾ ಉಪಯೋಗಿಸಿ ಎಮ್ಮೆಯ ಹೊಟ್ಟೆಯಿಂದ ಹೊರಬೀಳಬೇಕೆಂದು ಹವಣಿಸಿದ. ಅಷ್ಟರಲ್ಲಿ ಒಂದು ತೋಳ ಬಂದು ಆ ಹೊಟ್ಟೆಯಿದ್ದ ಭಾಗವನ್ನೆಲ್ಲಾ ನುಂಗಿ ಬಿಟ್ಟಿತು.

ಇದರಿಂದ ತಿಮ್ಮನಿಗೆ ನಿರುತ್ಸಾಹವಾಗಲಿಲ್ಲ! ಅವನು ತೋಳದ ಹೊಟ್ಟೆಯಿಂದಲೇ ಮಾತಾಡಿದ. ಅದು ಕಾಡಿನ ಒಳಕ್ಕೆ ಓಡಿಹೋಗುತ್ತಿದ್ದಾಗ, ಅವನು "ಸ್ನೇಹಿತನೆ, ನೀನು ನನ್ನ ಮಾತನ್ನು ಕೇಳಿ ಅದರಂತೆ ನಡೆಯುವುದಾದರೆ ಒಳ್ಳೆಯ ಹಬ್ಬದೂಟ ಮಾಡಿಸುತ್ತೇನೆ ನಿನಗೆ!" ಎಂದ.

ತೋಳ ಕುತೂಹಲದಿಂದ "ಎಲ್ಲಿ?" ಎಂದಿತು.

ಅವನು "ಇಂಥ ಮನೆಯಲ್ಲಿ" ಎಂದು ತನ್ನ ತಂದೆಯ ಮನೆಯನ್ನೂ ಅದಿದ್ದ ಸ್ಥಳವನ್ನೂ ಅಲ್ಲಿಗೆ ಹೋಗುವ ದಾರಿಯನ್ನೂ ವಿವರಿಸಿದ. ಅಲ್ಲದೆ "ಮನೆಯ ಮುಂದೆ ದೊಡ್ಡದಾಗಿ ಹಿತ್ತಲಿದೆ. ಬೇಲಿಯಲ್ಲಿ ನೀನು ನುಸಿಯಲು ಸಾಕಾಗುವಷ್ಟು ಕಂಡಿಯಿದೆ. ಸುಲಭವಾಗಿ ಒಳಗೆ ಹೋಗಬಹುದು. ಹಿತ್ತಲಿಗೆ ಸರಿಯಾಗಿ ಅಡುಗೆಯ ಮನೆಯಿದೆ. ಹೊಗೆ ಹೋಗುವುದಕ್ಕೆ, ಗಾಳಿ ಬೆಳಕು ಬರುವುದಕ್ಕೆ ಎಂದು ಸೂರಿನ ಕೆಳಗೆ ಗೋಡೆಯಲ್ಲಿ ಒಂದು ದೊಡ್ಡ ತೂತಿನಂಥ ಕಿಟಕಿ ಮಾಡಿದ್ದಾರೆ. ನೀನು ಸ್ವಲ್ಪ ಬುದ್ಧಿವಂತಿಕೆಯಿಂದ ಹಾರಿದರೆ ಆ ಕಿಟಕಿಯ ಮೂಲಕ ಮನೆಯನ್ನು ಪ್ರವೇಶಿಸಬಹುದು. ಒಳಗೆ ಬಲಗಡೆ ಮೂಲೆಯಲ್ಲಿ ಒಂದರ ಮೇಲೊಂದರಂತೆ ಐದಾರು ಮಡಕೆಗಳನ್ನು ಪೇರಿಸಿದ್ದಾರೆ. ಅದರಲ್ಲಿ ಮೂರನೆಯ ಮಡಕೆಯಲ್ಲಿ ಒಳ್ಳೆಯ ಸೊಗಸಾದ ಕುರಿಯ ಮಾಂಸವಿದೆ. ನಾಳೆಯ ದಿನ ಅವರ ಮನೆಯಲ್ಲಿ ಏನೋ ಹಬ್ಬವಂತೆ. ಅದಕ್ಕೆ ಈವತ್ತೇ ಅಡುಗೆಗೆ ಎಲ್ಲಾ ಸಿದ್ಧಮಾಡಿಟ್ಟುಕೊಂಡಿದ್ದಾರೆ" ಎಂದು ಹೇಳಿ, ಅದರ ಬಾಯಲ್ಲಿ ನೀರೂರುವಂತೆ ಮಾಡಿ, ಅದರ ದುರಾಸೆಯನ್ನು ಹೆಚ್ಚಿಸಿದ.

ಇಷ್ಟು ಹೊತ್ತಿಗೆ ಕತ್ತಲಾಗಿತ್ತು. ತೋಳ ಒಂದೇ ಅವಸರಕ್ಕೆ ನೆಟ್ಟಗೆ ತಿಮ್ಮ ಹೇಳಿದ್ದ ಮನೆಗೆ ಓಡಿ, ಅವನು ಕೊಟ್ಟಿದ್ದ ಸಲಹೆಗಳನ್ನೆಲ್ಲಾ ಒಂದನ್ನೂ ಬಿಡದೆ ಅನುಸರಿಸಿತು. ಆದರೆ ಅದು ಮಡಕೆಗಳನ್ನು ಇಳಿಸುವಾಗ ಕತ್ತಲಲ್ಲಿ ಗಡಿಬಿಡಿಯಾಗಿ, ಮೇಲಿದ್ದ ಮಡಕೆಗಳೆಲ್ಲಾ ಒಟ್ಟಿಗೆ ಕೆಳಕ್ಕೆ ಉರುಳಿದವು. ಮನೆಗೆಲ್ಲಾ ಕೇಳಿಸುವಂತೆ ಸದ್ದಾಯಿತು. ತೋಳದ ಹೊಟ್ಟೆಯಲ್ಲಿದ್ದ ತಿಮ್ಮನಿಗೆ ಬೇಕಾಗಿದ್ದುದೂ ಇದೇ! ಅವನು ಮಡಕೆಗಳು ಬಿದ್ದು ಒಡೆದ ಶಬ್ದದ ಜೊತೆಗೆ ತಾನೂ ಶಕ್ತಿ ಇದ್ದಷ್ಟೂ ಅರಚಿ ಕಿರಿಚಿ ಗಲಭೆ ಮಾಡಿದ. "ಸುಮ್ಮನಿರು! ಮನೆಯವರು ಎದ್ದುಬಿಟ್ಟಾರು!" ಎಂದು ತೋಳ ಎಷ್ಟೆಷ್ಟೋ ಹೇಳಿತು. ಆದರೂ ಕೇಳದೆ ಅವನು ಹಾಡುವುದಕ್ಕೂ ಮೊದಲಿಟ್ಟ.

ಈ ಕೂಗಾಟದಿಂದ ತಿಮ್ಮನ ತಂದೆತಾಯಿಗಳಿಗೆ ಎಚ್ಚರವಾಯಿತು. ಅವರು ಬಾಗಿಲ ಸಂದಿನಲ್ಲಿ ಇಣಿಕಿ ನೋಡಿದರು. ಅಡುಗೆ ಮನೆಯಲ್ಲಿ ತೋಳನಿದ್ದುದನ್ನು ಕಂಡು ತಿಮ್ಮನ ತಂದೆ ಒಂದು ಕೊಡಲಿಯನ್ನೂ

ಅವನ ತಾಯಿ ಒಂದು ಕುಡಗೋಲನ್ನೂ ಕೈಗೆ ತೆಗೆದುಕೊಂಡು ಬಾಗಿಲು ತೆರೆದರು.

ತೋಳ ಬಂದ ದಾರಿಯಿಂದ ಮತ್ತೆ ಅಷ್ಟೇ ಬೇಗ ಹಾರಿಹೋಗುವ ಹಾಗಿರಲಿಲ್ಲ. ಗಾಬರಿಯಿಂದ ಅದಕ್ಕೆ ದಿಕ್ಕು ತೋಚದಂತೆ ಆಗಿತ್ತು.

ತಿಮ್ಮನ ತಂದೆ "ನೀನು ಹಿಂದೆ ನಿಂತಿರು. ನಾನು ಮೊದಲು ಕೊಡಲಿಯಿಂದ ಅದರ ತಲೆ ಒಡೆಯುತ್ತೇನೆ. ಅನಂತರ ನೀನು ಕುಡಗೋಲಿನಿಂದ ಅದರ ದೇಹವನ್ನೆಲ್ಲಾ ತುಂಡುಮಾಡುವೆಯಂತೆ" ಎಂದು ಹೆಂಡತಿಗೆ ಹೇಳಿ, ಮುಂದಕ್ಕೆ ನುಗ್ಗಿದ.

ಇವರ ಮಾತನ್ನು ಕೇಳಿದ ತಿಮ್ಮ "ಅಪ್ಪಾ! ಅಪ್ಪಾ! ನಾನು ತಿಮ್ಮ!—ಇಲ್ಲಿದ್ದೇನೆ—ತೋಳದ ಹೊಟ್ಟೆಯಲ್ಲಿ! ಹಾಳು ತೋಳ ನನ್ನನ್ನು ನುಂಗಿಬಿಟ್ಟದೆ!" ಎಂದು ಕೂಗಿಕೊಂಡ.

ಅವನ ತಂದೆ "ದೇವರ ದಯದಿಂದ, ಕಳೆದು ಹೋಗಿದ್ದ ನಮ್ಮ ಹುಡುಗ ಸಿಕ್ಕಿದ!" ಎನ್ನುತ್ತ, ಕೊಡಲಿ ಎತ್ತಿ ತೋಳದ ತಲೆಗೆ ಬಲವಾದ ಒಂದು ಏಟು ಹೊಡೆದ. ಅದರ ತಲೆ ಎರಡು ಹೋಳಾಯಿತು.

ಅನಂತರ, ಗಂಡಹೆಂಡಿರಿಬ್ಬರೂ ಬಹಳ ಎಚ್ಚರಿಕೆಯಿಂದ ತೋಳದ ದೇಹವನ್ನು ಕತ್ತರಿಸಿ ತಿಮ್ಮನನ್ನು ಈಚೆಗೆ ತೆಗೆದರು.

"ನಿನಗಾಗಿ ಎಷ್ಟು ಕಣ್ಣೀರು ಸುರಿಸಿದೆವು ನಾವಿಬ್ಬರೂ!" ಎಂದು ತಿಮ್ಮನ ತಂದೆ ಮಗನನ್ನು ಮುದ್ದಾಡಿದ.

ತಿಮ್ಮ "ಅಪ್ಪಾ, ನಾನು ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬಂದಿದ್ದೇನೆ!" ಎಂದ.

ಅವನು "ಅದು ಹೇಗೆ?" ಎಂದ

ತಿಮ್ಮ "ಇಲಿಯ ಬಿಲದಲ್ಲಿದ್ದೆ, ಬಸವನ ಹುಳದ ಶಂಖದಲ್ಲಿದ್ದೆ, ಎಮ್ಮೆಯ ದವಡೆಯಲ್ಲಿದ್ದೆ, ತೋಳದ ಹೊಟ್ಟೆಯಲ್ಲಿದ್ದೆ, ಈಗ ಇದೋ ಇಲ್ಲಿದ್ದೇನೆ!" ಎಂದು ನಕ್ಕ.

"ಇನ್ನು ಜಗತ್ತಿನಲ್ಲಿರುವ ಐಶ್ವರ್ಯವೆಲ್ಲಾ ಸಿಕ್ಕರೂ ನಾವು ನಿನ್ನನ್ನು ಮಾರುವುದಿಲ್ಲ" ಎಂದು ತಂದೆತಾಯಿಗಳಿಬ್ಬರೂ ಅವನನ್ನು ಅಪ್ಪಿಕೊಂಡು ಮುದ್ದಾಡಿದರು.

ಮಾರನೆಯ ದಿನ ಬೆಳಗಾದ ಕೂಡಲೆ ತಿಮ್ಮನಿಗೆ ಹೊಸಬಟ್ಟೆಗಳೂ ಹೋಳಿಗೆ ಊಟವೂ ದೊರೆತವು.

**ಕನ್ನಡದ ಶಿಶುಸಾಹಿತ್ಯ ಭಂಡಾರಕ್ಕೆ**
**ಹೊಸದಾಗಿ ಸೇರಿದ ಅಮೂಲ್ಯ ರತ್ನಗಳು !**

# ಚಕ್ರವರ್ತಿಯ ಕೋಗಿಲೆ

[ಹಾನ್ಸ್ ಕ್ರಿಶ್ಚಿಯನ್ ಆ್ಯಂಡರ್‌ಸನ್ನನ ಏಳು ಕತೆಗಳು]

ಅನುವಾದಕರು :

**ಎಂ. ರಾಮರಾವ್, ಎಂ.ಎ., ಬಿ.ಟಿ.**

●

"ಒಂದೊಂದು ಕಥೆಯೂ ಒಂದೊಂದು ವಯಸ್ಸಿನ ಮಕ್ಕಳಿಗೆ ಹಿಡಿಸುತ್ತದೆ ಎನ್ನಬಹುದು. ಕಥೆಗಳಲ್ಲಿ ಬಹುಮಟ್ಟಿಗೆ ನೀತಿಯೂ, ಸಾಹಸವೂ, ಕುತೂಹಲವನ್ನು ಕೆರಳಿಸುವ ಗುಣವೂ ಸಹಜವಾಗಿ ಬೆರೆತುಬಂದಿದೆ. ಲೇಖಕರ ಅನುವಾದಶೈಲಿ ಸರಳವಾಗಿದೆ. ಮಕ್ಕಳ ಕೈಗೆ ಮುದ್ದಾದ ಕಾಣಿಕೆ."

—ಪುಸ್ತಕಪ್ರಪಂಚ, ಮೈಸೂರು.

"ಮೂಲದ ಹದ ಎಳ್ಳಷ್ಟೂ ಕೆಡದಂತೆ ನಮ್ಮ ಕನ್ನಡ ಜನ ಜೀವನಕ್ಕೆ ಒಗ್ಗುವ ರೀತಿಯಲ್ಲಿ ಸನ್ನಿವೇಶಗಳನ್ನು ಮಾರ್ಪಡಿಸಿ ಕೊಂಡು ರುಚಿಕಟ್ಟಾಗಿ ಚಿತ್ರಿಸಿದ್ದಾರೆ."

—ಸಂಜಯ, ದಾವಣಗೆರೆ.

"ಹಿರಿಯರು ಕೂಡ ಇವನ್ನು ಓದಿದಾಗ ತುಸ ಹೊತ್ತು ತಮ್ಮ ಸಂಶಯದ ಪೊರೆ ಕಳಚಿ ಮಕ್ಕಳಲ್ಲಿ ಮಕ್ಕಳಾಗಿ ನಕ್ಕು ನಲಿವುದರಲ್ಲಿ ಸಂದೇಹವಿಲ್ಲ."

—ದೇಶಬಂಧು, ಬೆಂಗಳೂರು.

# ಗ್ರಿಮ್ ಸಹೋದರರ ಕತೆಗಳು

ಕನ್ನಡಿಸಿದವರು :
**ಎಂ. ರಾಮರಾವ್, ಎಂ.ಎ., ಬಿ.ಟಿ.**

●

★ **ಮಂಜಿನ ಮಣಿ** (೧೧ ಕತೆಗಳು)

★ **ಜೀವರಸ** (೮ ಕತೆಗಳು)

ಅಚ್ಚಿನಲ್ಲಿ

★ **ಚಿಪ್ಪಿಗನ ಸಾಹಸ** (೧೧ ಕತೆಗಳು)

ಒಂದೊಂದು ಪುಸ್ತಕವೂ ಬಗೆಬಗೆಯ ತಿನಿಸುಗಳನ್ನು ಒಳಗೊಂಡ ಹಬ್ಬದೂಟ.

ಇವನ್ನು ಓದುವುದೆಂದರೆ ಹುಡುಗರಿಗೊಂದು ಆಟ.

ಉಕ್ಕಿಬರುವುದು ನಲುಮೆ !
ನಗುವಿನ ಚಿಲುಮೆ !!